ಸೋಮವಾರ, ಆಗಸ್ಟ್ 29, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಾರ್ಷಿಕೋತ್ಸವ ಸಂಭ್ರಮ
ಬಾಲಿವುಡ್ ನಟಿ ಇಲಿಯಾನಾ ಡಿ'ಕ್ರೂಸ್ ಅವರು ಮುಂಬೈನಲ್ಲಿ ಭಾನುವಾರ ನಡೆದ ಹೌಸ್ ಆಫ್ ಅಪ್ಲಾಸ್ ಎಂಟರ್‌ಟೈನ್‌ಮೆಂಟ್‌ನ ಐದನೇ ವಾರ್ಷಿಕೋತ್ಸವ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು

ಛಲವಾದಿ ಮಹಾಸಭಾ

ನೋಂದಣಿ ಸಂಖ್ಯೆ: 34/0809–24/06/2008

ನಂ. 18, ಪಂಚಾಜನ್ಯ ವಿದ್ಯಾಪೀಠ, 1ನೇ 'ಎನ್' ಬ್ಲಾಕ್, ರಾಜಾಜಿನಗರ, ಬೆಂಗಳೂರು–560010

ನ್ಯಾಯಾಲಯದ ಆದೇಶದಂತೆ ದಿನಾಂಕ 7.8.2022 ರಂದು ನಡೆದ ಐತಿಹಾಸಿಕ ಚುನಾವಣೆಯಲ್ಲಿ ಕೆ. ಶಿವರಾಮು ಅವರ ಅಭಿವೃದ್ಧಿ ತಂಡವನ್ನು ಗೆಲ್ಲಿಸಿದ್ದಕ್ಕಾಗಿ ರಾಜ್ಯದ ಛಲವಾದಿ ಬಂಧುಗಳಿಗೆ ಹೃದಯ ಪೂರ್ವಕ ಧನ್ಯವಾದಗಳು.

ಕರ್ನಾಟಕ ರಾಜ್ಯದ ಜನಪ್ರಿಯ ನಾಯಕರು ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿಯ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪರವರು ಬೆಂಗಳೂರು ನಗರ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಸಮುದಾಯಕ್ಕೆ ಮಂಜೂರು ಮಾಡಿರುವ 2ಎಕರೆ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಛಲವಾದಿ ಭವನವನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ರಾಜ್ಯ ಕಾರ್ಯಕಾರಿಣಿ ಪದಾಧಿಕಾರಿಗಳು ಹಾಗೂ ಸದಸ್ಯರು

ಬಸವರಾಜು ಎಂ
ಉಪಾಧ್ಯಕ್ಷರು

ಶಿವಕುಮಾರ್ ಎಸ್.ಕೆ
ಪ್ರಧಾನ ಕಾರ್ಯದರ್ಶಿ

ನಾಗೇಶ್ ಟಿ.ಆರ್
ಜಂಟಿ ಕಾರ್ಯದರ್ಶಿ

ಹಂಸರಾಜ್ ಎಂ
ಸಂಘಟನಾ ಕಾರ್ಯದರ್ಶಿ

ಮೈಕೋ ನಾಗರಾಜ್
ಖಜಾಂಚಿ

ಉಮೇಶ್ ಎಸ್

ಸಿದ್ಧರಾಜ ಎಸ್

ವಸಂತ ಎಂ

ಗಂಗಾಧರ ಬಿ

ಮಹದೇವಯ್ಯ ಬಿ

ರಾಜಪ್ಪ

ಕೃಷ್ಣಪ್ಪ ಹೆಚ್.ವಿ

ಪರಶುರಾವ್ ಕೆ

ಶಿವಪ್ಪ ಹೆಚ್

ಛಲವಾದಿ ಸಮುದಾಯದ ವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐಎಎಸ್, ಐಪಿಎಸ್, ಕೆಎಎಸ್, ಪಿಡಿಓ, ಪಿಎಸ್‌ಐ ಮತ್ತು ಎಫ್‌ಡಿಎ, ಎಸ್‌ಡಿಎ ಹುದ್ದೆಗಳಿಗೆ ತಯಾರಿ ಮಾಡಲು ವಸತಿ ಸಹಿತ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಲು ಕ್ರಮ ಜರಗಿಸಲಾಗುವುದು.

ಕೆ. ಶಿವರಾಮು, ಐಎಎಸ್ (ನಿ)
ಸಂಸ್ಥಾಪಕ ಅಧ್ಯಕ್ಷರು, ಛಲವಾದಿ ಮಹಸಭಾ, ಚಲನಚಿತ್ರ ನಟರು ಹಾಗೂ ಬಿಜೆಪಿ ಮುಖಂಡರು

ಛಲವಾದಿ ವಧು-ವರರ ವೇದಿಕೆಯನ್ನು ಪ್ರಾರಂಭಿಸಲಾಗುವುದು, ಬೃಹತ್ ಛಲವಾದಿ ಸಮಾವೇಶವನ್ನು ಹಮ್ಮಿಕೊಳ್ಳಲಾಗುವುದು.

ಸೋಮವಾರ, ಆಗಸ್ಟ್ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 240 | ಪುಟ 12 + 2 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಿವೇಕ್ ಸ್ಕಾಲರ್ ಪ್ರೋಗ್ರಾಂ ಮೂಲಕ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ನೆರವಾಗುತ್ತಿದೆ.

ಸೋನಾಲಿ ಪ್ರಕರಣ: ಮೂವರು ಆರೋಪಿಗಳು ವಶಕ್ಕೆ 11
ಸಂಶೋಧನೆ, ಅಭಿವೃದ್ಧಿಗೆ ಸುಜುಕಿಯಿಂದ ಹೊಸ ಕಂಪನಿ 10
ಆಳ-ಅಗಲ: ಕರ್ನಾಟಕ ಹಾಕಿ: ಮಸುಕಾದ ಹೊಳಪು
ಲೈಂಗಿಕ ಕಿರುಕುಳ: ಸಂಧಾನ ಯತ್ನ ವಿಫಲ? 7
ವಿದ್ಯುತ್ ಸ್ಪರ್ಶ: ಕಲಾವಿದ ದಂಪತಿ ಸಾವು 7

‘ವನ್ಯಜೀವಿಧಾಮ’ದ ಸುತ್ತ ಅನುಮತಿಗೆ 24 ಪ್ರಸ್ತಾವನೆ • ಪರಿಸರ ಸೂಕ್ಷ್ಮವಲಯ 1 ಕಿ.ಮೀ.ಗೆ ನಿಗದಿ

ಕಪ್ಪತಗುಡ್ಡಕ್ಕೆ ಗಣಿಗಾರಿಕೆ ಭೀತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಗದಗ ಜಿಲ್ಲೆಯ ಕಪ್ಪತಗುಡ್ಡ ವನ್ಯಜೀವಿಧಾಮದ ‘ಪರಿಸರ ಸೂಕ್ಷ್ಮವಲಯ’ದ 10 ಕಿ.ಮೀ ವ್ಯಾಪ್ತಿಯ ಒಳಗೆ ಗಣಿಗಾರಿಕೆಗೆ ಅನುಮತಿ ಕೋರಿ ರಾಜ್ಯ ವನ್ಯಜೀವಿ ಮಂಡಳಿಗೆ 24 ಪ್ರಸ್ತಾವನೆಗಳು ಸಲ್ಲಿಕೆಯಾಗಿವೆ. ಇದರ ಬೆನ್ನಲ್ಲೆ, ಈ ವನ್ಯಜೀವಿಧಾಮದ ಪರಿಸರ ಸೂಕ್ಷ್ಮವಲಯವನ್ನು ರಾಜ್ಯ ಸರ್ಕಾರ 1 ಕಿಲೊಮೀಟರ್‌ಗೆ ನಿಗದಿಪಡಿಸಿದೆ.

ಆ ಮೂಲಕ, ‘ಉತ್ತರ ಕರ್ನಾಟಕದ ಸಹ್ಯಾದ್ರಿ’ ಎನಿಸಿರುವ ಕಪ್ಪತಗುಡ್ಡದ ಸೆರಗಿನಲ್ಲಿ ಗಣಿಗಾರಿಕೆ ಮತ್ತಷ್ಟು ವ್ಯಾಪಕಗೊಳ್ಳುವುದು ಖಚಿತವಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಮಂಡಳಿಯ ಸಭೆ ಸೆ. 5ರಂದು ನಡೆಯ ಲಿದೆ. ಈ ಸಭೆಯಲ್ಲಿ ಚರ್ಚಿಸಲು ಸಿದ್ಧಪಡಿಸಿದ ಕಾರ್ಯಸೂಚಿಯಲ್ಲಿ ಈ ಪ್ರಸ್ತಾವನೆಗಳಿವೆ. ಪ್ರಸ್ತಾಪಿತ ಪರಿಸರ ಸೂಕ್ಷ್ಮವಲಯದ ಗಡಿಯಿಂದ ಈ ಯೋಜನಾ ಪ್ರಸ್ತಾವನೆಗಳು ಹೊರಗಡೆ ಬರುತ್ತವೆ ಎಂದು ಕಾರ್ಯಸೂಚಿಯಲ್ಲಿ ಉಲ್ಲೇಖಿಸಲಾಗಿದೆ. ಅದರ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಪ್ರಜಾವಾಣಿ ವಿಶೇಷ

ಕಪ್ಪತಗುಡ್ಡ ವನ್ಯಜೀವಿಧಾಮ, ಗುಡೆಕೋಟೆ ಕರಡಿಧಾಮ ಸೇರಿದಂತೆ ನಾಲ್ಕು ವನ್ಯಜೀವಿ ಧಾಮಗಳ ಪರಿಸರ ಸೂಕ್ಷ್ಮವಲಯವನ್ನು 1 ಕಿ.ಮೀಗೆ ನಿಗದಿಪಡಿಸಿ ಇದೇ 25ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

ಕಪ್ಪತಗುಡ್ಡ ವನ್ಯಜೀವಿಧಾಮ ವ್ಯಾಪ್ತಿಯ ಪ್ರಸ್ತಾವನೆಗಳನ್ನು ರಾಜ್ಯ ವನ್ಯಜೀವಿ ಮಂಡಳಿಗೆ ಶಿಫಾರಸು ಮಾಡಿರುವ ಗದಗ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಎಫ್‌ಒ) ದೀಪಿಕಾ ಬಾಜಪೇಯಿ, ‘ಈ ಪ್ರಸ್ತಾವನೆಗಳು ವನ್ಯಜೀವಿ ಧಾಮದ ಗಡಿಯಿಂದ 10 ಕಿ.ಮೀ ಒಳಗಿದ್ದರೂ ವನ್ಯಜೀವಿಧಾಮದ ಮೇಲೆ ಹೆಚ್ಚು ಪರಿಣಾಮ ಬೀರುವುದಿಲ್ಲ. ಪ್ರಸ್ತಾಪಿತ ಗಣಿಗಾರಿಕಾ ಪ್ರದೇಶದ ಸುತ್ತಲೂ ಈಗಾಗಲೇ ಹಲವಾರು ಕ್ವಾರಿಗಳಿರುವುದರಿಂದ ಈ ಪ್ರಸ್ತಾವನೆಗಳಿಗೂ ಅನುಮತಿ ನೀಡಬಹುದು’ ಎಂದಿದ್ದಾರೆ.

ಗದಗ ಜಿಲ್ಲೆಯಲ್ಲಿರುವ ಕಪ್ಪತಗುಡ್ಡ

‘ಸುಪ್ರೀಂ’ ಪ್ರಕಾರ 1 ಕಿ.ಮೀ. ವರೆಗೆ ನಿಷೇಧ

‘ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ವನ್ಯಜೀವಿಧಾಮದ ಕನಿಷ್ಠ 1 ಕಿ.ಮೀ. ವರೆಗೆ ಗಣಿಗಾರಿಕೆಗೆ ಅನುಮತಿ ನೀಡುವಂತಿಲ್ಲ. ಪರಿಸರ ಸೂಕ್ಷ್ಮವಲಯವನ್ನು ರಾಜ್ಯ ಸರ್ಕಾರ ಘೋಷಿಸದೇ ಇದ್ದ ಪಕ್ಷದಲ್ಲಿ, 10 ಕಿ.ಮೀ.ವರೆಗೆ ಡೀಮ್ಡ್ (ಪರಿಭಾವಿತ) ಪರಿಸರ ಸೂಕ್ಷ್ಮವಲಯ ಎಂದು ಪರಿಗಣಿಸಬೇಕು. ಡೀಮ್ಡ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮೋದನೆ ನೀಡಲು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಒಪ್ಪಿಗೆ ಅಗತ್ಯವಿದೆ’ ಎಂದು ಡಿಎಫ್‌ಒ ದೀಪಿಕಾ ಬಾಜಪೇಯಿ ತಿಳಿಸಿದರು.

‘ಈವರೆಗೆ ಪರಿಸರ ಸೂಕ್ಷ್ಮ ವಲಯ ಘೋಷಣೆ ಆಗದೇ ಇದ್ದುದರಿಂದ ನಿರಾಕ್ಷೇಪಣಾ ಪತ್ರ ಕೊಡಲು ಅವಕಾಶ ಇರಲಿಲ್ಲ. ಹೀಗಾಗಿ, ಎಲ್ಲ 24 ಪ್ರಸ್ತಾವನೆಗಳು ವರ್ಷಗಳಿಂದ ಮಂಜೂರಾತಿಗೆ ಬಾಕಿ ಇತ್ತು. ಕನಿಷ್ಠ 1 ಕಿ.ಮೀ ಇರಲೇಬೇಕೆಂದು ಇದೇ ಜೂನ್‌ನಲ್ಲಿ ಸುಪ್ರೀಂ ಕೋರ್ಟ್ ಮತ್ತೆ ಸ್ಪಷ್ಟಪಡಿಸಿದ್ದು, ಕೇಂದ್ರದಿಂದಲೂ ಮಾರ್ಗಸೂಚಿ ಬಂದಿದೆ. ಎಲ್ಲ ಪ್ರಸ್ತಾವನೆಗಳು ವನ್ಯಜೀವಿಧಾಮದಿಂದ 1 ಕಿ.ಮೀ ಹೊರಗಡೆ ಇರುವುದರಿಂದ ರಾಜ್ಯ ವನ್ಯಜೀವಿ ಮಂಡಳಿಗೆ ಕಳುಹಿಸಲಾಗಿದೆ’ ಎಂದರು.

ಈ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಕಪ್ಪತಗುಡ್ಡ ವನ್ಯಜೀವಿಧಾಮದ ಪರಿಸರ ಸೂಕ್ಷ್ಮವಲಯವನ್ನು ನಿಗದಿಪಡಿಸಿದ ನಂತರ ಅದನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಿದೆ. ಕೇಂದ್ರ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಲಿದೆ. ಅಂತಿಮ ಅಧಿಸೂಚನೆ ಹೊರಡಿಸಿದ ಬಳಿಕ 1 ಕಿ.ಮೀ ಹೊರಗೆ ಗಣಿಗಾರಿಕೆ ಸೇರಿದಂತೆ ಯಾವುದೇ ಅಭಿವೃದ್ಧಿ ಚಟುವಟಿಕೆಗೆ ಅನುಮತಿ ನೀಡಲು ರಾಜ್ಯ ಸರ್ಕಾರಕ್ಕೆ ಅವಕಾಶವಿದೆ. ಅಲ್ಲಿಯವರೆಗೆ ರಾಜ್ಯ ವನ್ಯಜೀವಿ ಮಂಡಳಿಯ ಅನುಮೋದನೆಯ ಬಳಿಕ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಬೇಕು’ ಎಂದರು.

10ನೇ ಪುಟ ನೋಡಿ

ಭಾರತಕ್ಕೆ ರೋಚಕ ಜಯ: ಪಾಕ್‌ಗೆ ನಿರಾಶೆ

ದುಬೈ: ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಆಟದಿಂದ ಭಾರತ ಕ್ರಿಕೆಟ್ ತಂಡವು ಭಾನುವಾರ ನಡೆದ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ಎದುರು 5 ವಿಕೆಟ್‌ಗಳಿಂದ ರೋಚಕ ಜಯ ಸಾಧಿಸಿತು.

ಸಂತ್ರಸ್ತ ಬಾಲಕಿಯರ ವೈದ್ಯಕೀಯ ಪರೀಕ್ಷೆ, ಹೇಳಿಕೆ ದಾಖಲು

ಲೈಂಗಿಕ ಕಿರುಕುಳ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದಾಖಲಾದ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ. ಸಂತ್ರಸ್ತ ಬಾಲಕಿಯರನ್ನು ಭಾನುವಾರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಮುರುಘಾ ಮಠದಲ್ಲಿ ಬಂಧನ ಭೀತಿಯ ವಾತಾವರಣ ನಿರ್ಮಾಣವಾಗಿದ್ದು, ತುರುಸಿನ ಬೆಳವಣಿಗೆಗಳು ನಡೆಯುತ್ತಿವೆ. ಶಿವಮೂರ್ತಿ ಶರಣರು ಮಠದಲ್ಲೇ ಇದ್ದು ಭಕ್ತರು, ಬೆಂಬಲಿಗರು ಭೇಟಿ ಮಾಡಿ ಚರ್ಚಿಸಿದ್ದಾರೆ. ಶರಣರ ಪರ ಮತ್ತು ವಿರುದ್ಧ ಪ್ರತಿಭಟನೆಗಳು ನಡೆದವು. ಪ್ರಕರಣದ ಸಂಬಂಧ ಯಾರನ್ನೂ ಪೊಲೀಸರು ಇದುವರೆಗೆ ವಶಕ್ಕೆ ಪಡೆದಿಲ್ಲ.

> ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದಾಖಲಾಗಿರುವ ಪ್ರಕರಣದ ಸತ್ಯಾಂಶ ತನಿಖೆಯ ನಂತರ ಹೊರಬರಲಿದೆ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಸಂತ್ರಸ್ತರ ಹೇಳಿಕೆ ದಾಖಲು: ಲೈಂಗಿಕ ಕಿರುಕುಳ ಪ್ರಕರಣದ ಸಂತ್ರಸ್ತ ಬಾಲಕಿಯರನ್ನು ಮೈಸೂರಿನಿಂದ ಚಿತ್ರದುರ್ಗಕ್ಕೆ ಭಾನುವಾರ ನಸುಕಿನಲ್ಲಿ ಕರೆತರಲಾಗಿದ್ದು, ಇವರಿಗೆ ಬಾಲಕಿಯರ ಬಾಲಮಂದಿರದಲ್ಲಿ ಆಶ್ರಯ ನೀಡಲಾಯಿತು.

ಮಕ್ಕಳ ಕಲ್ಯಾಣ ಸಮಿತಿಯ ಸಮಾಲೋಚಕರು ಮತ್ತು ಮಹಿಳಾ ಪೊಲೀಸರು ಬಾಲಕಿಯರ ಹೇಳಿಕೆಯನ್ನು ದಾಖಲಿಸಿಕೊಂಡರು. ಮೈಸೂರಿನಲ್ಲಿ ನೀಡಿದ ಹೇಳಿಕೆಯನ್ನೇ ಸಮಿತಿಯ ಎದುರು ಸಂತ್ರಸ್ತರು ಪುನರುಚ್ಚರಿಸಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ. ಸಂತ್ರಸ್ತ ಬಾಲಕಿಯರ ಪೋಷಕರೂ ಹೇಳಿಕೆ ದಾಖಲಿಸಿದ್ದಾರೆ.

ವಾಗ್ವಾದ: ಮಕ್ಕಳ ನೆರವಿಗೆ ಧಾವಿಸಿದ್ದ ಒಡನಾಡಿ ಸೇವಾ ಸಂಸ್ಥೆಯ ಸಿಬ್ಬಂದಿ ಹೊರಗಿಟ್ಟು ಹೇಳಿಕೆ ದಾಖಲಿಸಿಕೊಳ್ಳುವ ಪ್ರಯತ್ನವೂ ನಡೆಯಿತು. ಇದಕ್ಕೆ ಆಕ್ಷೇಪಿಸಿದಾಗ ವಾಗ್ವಾದ ನಡೆಯಿತು. ಸರ್ಕಾರಿ ಅಭಿಯೋಜಕರ ಸಲಹೆ, ಸಂತ್ರಸ್ತ ಬಾಲಕಿಯರ ಅಪೇಕ್ಷೆಯ ಮೇರೆಗೆ ಒಡನಾಡಿ ಸೇವಾ ಸಂಸ್ಥೆಯ ಪ್ರತಿನಿಧಿಗಳ ಸಮ್ಮುಖದಲ್ಲಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ.

ಬೆಳಿಗ್ಗೆ 11ಕ್ಕೆ ಬಾಲಭವನ ಪ್ರವೇಶಿಸಿದ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು, ಸಂಜೆ 4ಕ್ಕೆ ಸಂತ್ರಸ್ತ ಬಾಲಕಿಯರನ್ನು ಹೊರಗೆ ಕರೆತಂದರು.

7ನೇ ಪುಟ ನೋಡಿ

ನಿಯಮಬಾಹಿರ ಕಟ್ಟಡ ನೆಲಸಮ

ನೊಯಿಡಾ (ಪಿಟಿಐ): ಸೂಪರ್‌ಟೆಕ್ ಸಂಸ್ಥೆಯು ಕಾನೂನುಬಾಹಿರವಾಗಿ ಇಲ್ಲಿ ನಿರ್ಮಿಸಿದ್ದ ಅವಳಿಗೋಪುರಗಳನ್ನು ಭಾನುವಾರ ಮಧ್ಯಾಹ್ನ ನೆಲಸಮ ಮಾಡಲಾಯಿತು. 11

ಅ. 9ಕ್ಕೆ ‘ರಾಜಧಾನಿ ಚಲೋ’ಗೆ ತೀರ್ಮಾನ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸಲು ಆಗ್ರಹಿಸಿ ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಅ. 9ರಂದು ‘ರಾಜಧಾನಿ ಚಲೋ’ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. 7

ಅ.17ರಂದು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧ್ಯಕ್ಷ ಸ್ಥಾನದ ಚುನಾವಣೆ ಕುರಿತಂತೆ ಇದ್ದ ಊಹಾಪೋಹಗಳಿಗೆ ಕಾಂಗ್ರೆಸ್ ಪಕ್ಷವು ತೆರೆ ಎಳೆದಿದೆ. ಪಕ್ಷವು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಅಕ್ಟೋಬರ್ 17ರಂದು ಮತದಾನ ನಡೆಯಲಿದೆ. ಎರಡು ದಿನಗಳ ಬಳಿಕ ಅಂದರೆ, ಅ. 19ರಂದು ಮತ ಎಣಿಕೆ ಮಾಡಲಾಗುವುದು ಎಂದು ಪಕ್ಷವು ಹೇಳಿದೆ. ಪ್ರಜಾಸತ್ತಾತ್ಮಕವಾಗಿ ಚುನಾವಣೆ ನಡೆಸುತ್ತಿರುವ ಏಕೈಕ ಪಕ್ಷ ತಾನು ಎಂದೂ ಕಾಂಗ್ರೆಸ್ ಹೇಳಿಕೊಂಡಿದೆ.

ಈ ಹಿಂದೆ, 2000ನೇ ಇಸವಿಯ ನವೆಂಬರ್‌ನಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿತ್ತು. ನೆಹರೂ–ಗಾಂಧಿ ಕುಟುಂಬದ ಬಿಗಿಹಿಡಿತದ ಕಾರಣಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ವಂಶಾಡಳಿತದ ಪಕ್ಷ ಎಂದು ಬಿಜೆಪಿ ಸದಾ ಟೀಕಿಸುತ್ತಲೇ ಇದೆ. ಸೋನಿಯಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನದಲ್ಲಿ ಅತಿ ದೀರ್ಘ ಕಾಲ ಇದ್ದವರು ಎಂಬ ದಾಖಲೆಗೆ ಪಾತ್ರರಾಗಿದ್ದಾರೆ. 1998ರಲ್ಲಿ ಈ ಸ್ಥಾನಕ್ಕೆ ಏರಿದರು. 2017–19ರ ಅವಧಿಯಲ್ಲಿ ರಾಹುಲ್ ಗಾಂಧಿ ಅವರು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು. 2019ರಲ್ಲಿ ರಾಹುಲ್ ರಾಜೀನಾಮೆ ನೀಡಿದ ಬಳಿಕ ಸೋನಿಯಾ ಅವರೇ ಮತ್ತೆ ಈ ಸ್ಥಾನಕ್ಕೆ ಬಂದರು.

ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಭಾನುವಾರ ನಡೆಯಿತು. ಚುನಾವಣಾ ವೇಳಾಪಟ್ಟಿಗೆ ಸಭೆಯಲ್ಲಿ ಸರ್ವಾನುಮತದ ಒಪ್ಪಿಗೆ ದೊರೆಯಿತು ಎಂದು ಪಕ್ಷದ ಚುನಾವಣಾ ಸಮಿತಿ ಅಧ್ಯಕ್ಷ ಮಧುಸೂದನ ಮಿಸ್ತ್ರಿ ತಿಳಿಸಿ ದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಚಿಕಿತ್ಸೆಗಾಗಿ ವಿದೇಶದಲ್ಲಿದ್ದಾರೆ. ಅವರ ಮಕ್ಕಳಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಜತೆಗಿದ್ದಾರೆ. ಹಾಗಾಗಿ, ಈ ಮೂವರು ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗಿಯಾದರು. ಸೋನಿಯಾ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಪಕ್ಷದ ಚುನಾವಣಾ ಸಮಿತಿಯು ಸೆ. 22ರಂದು ಚುನಾವಣೆಯ ಅಧಿಸೂಚನೆ ಹೊರಡಿಸಲಿದೆ. ಸೆ. 24ರಿಂದ ಸೆ. 30ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಇದೆ.

10ನೇ ಪುಟ ನೋಡಿ

ಹಿಜಾಬ್: ‘ಸುಪ್ರೀಂ’ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಜಾಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆ ನಡೆಸಲಿದೆ.

ರಾಜ್ಯದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್‌ಗೆ ನಿಷೇಧ ಹೇರುವ ಶಿಕ್ಷಣ ಸಂಸ್ಥೆಗಳ ಕ್ರಮವನ್ನು ಹೈಕೋರ್ಟ್, ಮಾರ್ಚ್ 15ರ ತೀರ್ಪಿನಲ್ಲಿ ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ 24 ಪ್ರತ್ಯೇಕ ಅರ್ಜಿಗಳು ದಾಖಲಾಗಿದ್ದವು. ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಹಾಗೂ ಸುಧಾಂಶು ಧುಲಿಯಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಇವುಗಳ ವಿಚಾರಣೆ ನಡೆಸಲಿದೆ.

ಆಲ್ ಇಂಡಿಯಾ ಡೆಮಾಕ್ರಟಿಕ್ ವಿಮೆನ್ಸ್ ಅಸೋಸಿಯೇಷನ್, ವಿಮೆನ್ಸ್ ವಾಯ್ಸ್, ಫೋರಂ ಫಾರ್ ಸೆಕ್ಯುಲರ್ ಥಿಯೊ–ಡೆಮಾಕ್ರಸಿ, ಮುಸ್ಲಿಂ ಗರ್ಲ್ಸ್ ಆ್ಯಂಡ್ ವಿಮೆನ್ಸ್ ಮೂವ್‌ಮೆಂಟ್, ಮುಸ್ಲಿಂ ವಿಮೆನ್ಸ್ ಸ್ಟಡಿ ಸರ್ಕಲ್ ಸೇರಿದಂತೆ ಹಲವು ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರರು ದಾಖಲಿಸಿರುವ ಅರ್ಜಿಗಳ ವಿಚಾರಣೆಯು ಕೋರ್ಟ್ ಸಂಖ್ಯೆ 7ರಲ್ಲಿ ನಿಗದಿಯಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಕಸದ ತೊಟ್ಟಿಯಾದ ಮರದ ಬೇಲಿ'

ಲಾಲ್‌ಬಾಗ್ ರಸ್ತೆಯ ದಂತ ವೈದ್ಯಕೀಯ ಆಸ್ಪತ್ರೆಯ ಪಕ್ಕದಲ್ಲಿರುವ ಮರವೊಂದು ದೊಡ್ಡದಾಗಿ ಬೆಳೆದಿದೆ. ಆದರೆ, ಅದಕ್ಕೆ ಅಳವಡಿಸಿರುವ ಕಬ್ಬಿಣದ ಬೇಲಿ ತೆಗೆಯದ ಕಾರಣ ಅದು ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ಬಿಬಿಎಂಪಿ ಅಧಿಕಾರಿಗಳು ಕೂಡಲೇ ಬೇಲಿಯನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು.

–**ರೇಖಾ ಮನೋಹರ್**

ಮರಕ್ಕೆ ಅಳವಡಿಸಿರುವ ಕಬ್ಬಿಣದ ಬೇಲಿ

'ರಸ್ತೆ, ಪಾದಚಾರಿ ಮಾರ್ಗ ಸರಿಪಡಿಸಿ'

ಕಾಳಿದಾಸ ಮಾರ್ಗದಲ್ಲಿರುವ ಸಾಗರ್ ಟಾಕೀಸ್ ವೃತ್ತದ ಮುಖ್ಯರಸ್ತೆಯಲ್ಲಿ ನೀರು ನಿಂತಿರುವುದು

ನಗರದ ಕೇಂದ್ರ ಬಿಂದುವಾಗಿರುವ ಮೆಜೆಸ್ಟಿಕ್ ಹಾಳು ಕೊಂಪೆಯಾಗಿ ಮಾರ್ಪಟ್ಟಿದೆ. ಕೆಂಪೇಗೌಡ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಸುಬೇದಾರ್ ಛತ್ರಂನ ಎರಡನೇ ಅಡ್ಡರಸ್ತೆ, ಮೈಸೂರ್ ಬ್ಯಾಂಕ್ ಗಣಪತಿ ದೇವಸ್ಥಾನದ ಮುಂಭಾಗ ಹಾಗೂ ಕಾಳಿದಾಸ ಮಾರ್ಗದ ಸಾಗರ್ ಟಾಕೀಸ್ ವೃತ್ತಗಳಲ್ಲಿನ ರಸ್ತೆಗಳಲ್ಲಿ ವಾಹನಗಳು ಸಂಚಾರ ದುಸ್ತರವಾಗಿದೆ. ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದ್ದು, ವಿದ್ಯಾರ್ಥಿಗಳು, ವೃದ್ಧರು, ಮಹಿಳೆಯರು ಓಡಾಡುವುದು ಕಷ್ಟವಾಗಿದೆ.

–**ಶಿವಪ್ರಸಾದ,** ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗ ದುರಸ್ತಿ ಮಾಡಿ'

'ಹಳೆ ಮದ್ರಾಸ್ ಮುಖ್ಯರಸ್ತೆ ಟ್ರಿನಿಟಿ ಮೆಟ್ರೊ ಸ್ಟೇಷನ್ ಬಳಿಯ ಪಾದಚಾರಿ ಮಾರ್ಗ ಸಂಪೂರ್ಣವಾಗಿ ಹಾಳಾಗಿದೆ. ಇದರಿಂದ ಮಕ್ಕಳು, ವೃದ್ಧರು ಈ ಹಾದಿಯಲ್ಲಿ ಸಾಗುವುದೇ ಕಷ್ಟವಾಗಿದೆ'.

ಟ್ರಿನಿಟಿ ಮೆಟ್ರೊ ಸ್ಟೇಷನ್ ಹತ್ತಿರದ ಪಾದಚಾರಿ ಮಾರ್ಗ ಹಾಳಾಗಿದೆ.

'ಕೇಬಲ್ ಅಳವಡಿಸುವ ಸಲುವಾಗಿ ಕೆಲ ತಿಂಗಳ ಹಿಂದೆ ರಸ್ತೆಯ ಒಂದು ಬದಿಯನ್ನು ಅಗೆದಿದ್ದರು. ಬಳಿಕ ಆ ಜಾಗದಲ್ಲಿ ಮಣ್ಣು ಹಾಕಿ ಹೋಗಿದ್ದರು. ನಿರಂತರವಾಗಿ ಸುರಿದ ಮಳೆಯಿಂದಾಗಿ ಮಣ್ಣು ಕೊಚ್ಚಿಕೊಂಡು ಹೋಗಿದೆ. ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ ಹಾಗೂ ಬೆಸ್ಕಾಂ ಸಿಬ್ಬಂದಿ ತುರ್ತಾಗಿ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು'

ದೀಪಕ್, ರಾಜೇಶ್, ಶಾಲಾ ವಿದ್ಯಾರ್ಥಿಗಳು

ಕುಂಬ್ಳೆ ವೃತ್ತದಿಂದ ಹಳೆ ಮದ್ರಾಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಮಧ್ಯದಲ್ಲಿ ಗುಂಡಿ ಬಿದ್ದಿದೆ.

'ಶೀಘ್ರ ರಸ್ತೆ ಗುಂಡಿ ಮುಚ್ಚಿ'

'ಕುಂಬ್ಳೆ ವೃತ್ತದಿಂದ ಹಳೆ ಮದ್ರಾಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯು ಗುಂಡಿಮಯವಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಗುಂಡಿಗಳಿಂದಾಗಿ ಒಂದಿಲ್ಲೊಂದು ಅಪಘಾತ ಸಂಭವಿಸಿ ನಾಗರಿಕರು ತೊಂದರೆ ಅನುಭವಿಸುತ್ತಿದ್ದಾರೆ. ಮಳೆ ಬಂದರೆ ಗುಂಡಿಗಳಲ್ಲಿ ಕೊಳಚೆ ನೀರು ಸಂಗ್ರಹವಾಗುತ್ತದೆ. ದ್ವಿಚಕ್ರ ವಾಹನ ಸವಾರರು ರಸ್ತೆ ಕಾಣದೆ ಗುಂಡಿಯೊಳಗೆ ವಾಹನ ಇಳಿಸಿ ಉರುಳಿ ಬಿದ್ದ ಉದಾಹರಣೆಗಳೂ ಸಾಕಷ್ಟಿವೆ. ಮಳೆಗಾಲ ಆರಂಭವಾದರೂ ಇದುವರೆಗೂ ಈ ಗುಂಡಿಯನ್ನು ಮುಚ್ಚುವ ಕೆಲಸ ಆಗಿಲ್ಲ. ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು'.

–**ಮಾಲತೇಶ್ ಸುಬೇದಾರ್,** ದ್ವಿಚಕ್ರ ವಾಹನ ಸವಾರ

'ಕೇಬಲ್ ಹಾವಳಿ ತಪ್ಪಿಸಿ'

ನಗರದ ಲಿಡೋ ಮಾಲ್ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ಕೇಬಲ್‌ಗಳು ಬಿದ್ದಿರುವುದರಿಂದ ಸಾರ್ವಜನಿಕರು ಓಡಾಡಲು ಪ್ರಯಾಸ ಪಡಬೇಕಾಗಿದೆ. ಪ್ರತಿ ಬಾರಿ ಮಳೆ ಬಂದಾಗ ಈ ಸಮಸ್ಯೆ ಆರಂಭವಾಗುತ್ತದೆ. ಕೇಬಲ್‌ಗಳನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಅನಧಿಕೃತವಾಗಿ ಹಲವಾರು ಜನ ಕೇಬಲ್‌ಗಳನ್ನು ಅಳವಡಿಸಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ಸಮಸ್ಯೆಯಾಗುತ್ತಿದೆ. ಅಧಿಕಾರಿಗಳು ಕೂಡಲೇ ಕೇಬಲ್ ಹಾವಳಿ ತಪ್ಪಿಸಲು ಕಾನೂನು ಕ್ರಮ ಕೈಗೊಳ್ಳಬೇಕು.

ಲಿಡೋ ಮಾಲ್ ಮುಂಭಾಗದ ಮಾರ್ಗದಲ್ಲಿ ಕೇಬಲ್ ಬಿದ್ದಿರುವುದರಿಂದ ಪಾದಚಾರಿಗಳಿಗೆ ತೊಂದರೆಯಾಗಿದೆ.

–**ರಿತೇಶ್, ಕರಣ್ ಶ್ರೀವಾತ್ಸವ್,** ಪಾದಚಾರಿಗಳು.

ಕೃಷಿ–ತಂತ್ರಜ್ಞಾನ ವಲಯದ ನವೋದ್ಯಮಗಳಲ್ಲಿ ಹೂಡಿಕೆ ಹೆಚ್ಚಳ

• ಪ್ರತೀಕ್ ದೇಸಾಯಿ

ಬೆಂಗಳೂರು: ಕೃಷಿ ಮತ್ತು ಕೃಷಿ ಆಧಾರಿತ ತಂತ್ರಜ್ಞಾನ ವಲಯದ ನವೋದ್ಯಮಗಳು ಈ ವರ್ಷದಲ್ಲಿ ಒಟ್ಟು ₹ 10,556 ಕೋಟಿ ಬಂಡವಾಳ ಸಂಗ್ರಹ ಮಾಡಿವೆ. ಹಿಂದಿನ ವರ್ಷದಲ್ಲಿ ಆಗಿದ್ದ ಬಂಡವಾಳ ಸಂಗ್ರಹಕ್ಕೆ ಹೋಲಿಸಿದರೆ ಇದು ಆರು ಪಟ್ಟು ಹೆಚ್ಚು.

ಈ ವಲಯದಲ್ಲಿ ಮುಂದಿನ ದಿನಗಳಲ್ಲಿ ಬೆಳವಣಿಗೆಗೆ ಇನ್ನಷ್ಟು ಅವಕಾಶಗಳು ಇವೆ ಎಂದು ಉದ್ಯಮದ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ತಾಂತ್ರಿಕವಾಗಿ ಆಗಿರುವ ಬೆಳವಣಿಗೆಗಳು ಹಾಗೂ ಡಿಜಿಟಲೀಕರಣಕ್ಕೆ ದೊರೆತಿರುವ ಒತ್ತಾಸೆಯು ಕೃಷಿ ನವೋದ್ಯಮಗಳ ಬೆಳವಣಿಗೆಗೆ ಕಾರಣವಾಗಿದೆ ಎಂದು ತಜ್ಞರು ಹೇಳುತ್ತಾರೆ. ಕೋವಿಡ್ ಸಾಂಕ್ರಾಮಿಕವು ಐದು ವರ್ಷಗಳಲ್ಲಿ ಆಗಬಹುದಾಗಿದ್ದ ಬೆಳವಣಿಗೆಯನ್ನು ಎರಡು ವರ್ಷಗಳಲ್ಲಿ ಸಾಧ್ಯವಾಗಿಸಿದೆ ಎಂದು ಪಿಡಬ್ಲ್ಯುಸಿ ಸಂಸ್ಥೆಯ ಕೃಷಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಶಶಿಕಾಂತ ಸಿಂಗ್ ಹೇಳುತ್ತಾರೆ.

'ದೇಶದ ಕೃಷಿ ತಂತ್ರಜ್ಞಾನ ವಲಯದ ಸಾಮರ್ಥ್ಯದ ಬಗ್ಗೆ ಯಾವತ್ತೂ ಯಾವ ಅನುಮಾನವೂ ಇರಲಿಲ್ಲ. ಆದರೆ, ಈಗ ಈ ವಲಯದಲ್ಲಿ ಕಂಡುಬಂದಿರುವ ಚುರುಕಿನ ಬೆಳವಣಿಗೆಗೆ ಕಾರಣ ನೀತಿಗಳು ಪೂರಕವಾಗಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ಸ್ಮಾರ್ಟ್‌ಫೋನ್ ಹಾಗೂ ಇಂಟರ್ನೆಟ್ ಬಳಕೆ ಜಾಸ್ತಿಯಾಗುತ್ತಿರುವುದು' ಎಂದು ಸಿಂಗ್ ತಿಳಿಸಿದರು.

ನಿರ್ದಿಷ್ಟ ವಲಯದಲ್ಲಿನ ಮೂಲಸೌಕರ್ಯಗಳ ಕೊರತೆ ಹಾಗೂ ಅಸಾಮರ್ಥ್ಯಗಳು ಅಲ್ಲಿಗೆ ಹೆಚ್ಚಿನ ಹೂಡಿಕೆಗಳು ಹರಿದುಬರುವಂತೆ ಮಾಡಿವೆ.

ಇದು ಆ ವಲಯವು ಹೂಡಿಕೆದಾರರು ಮತ್ತು ಉದ್ಯಮಿಗಳ ಪಾಲಿಗೆ ಫಲವತ್ತಾದ ನೆಲವಾಗಿ ಪರಿವರ್ತನೆ ಕಾಣುವಂತೆ ಮಾಡಿವೆ ಎಂದು ನವೋದ್ಯಮ ಕಂಪನಿ ರೇಶಮಂಡಿ ಸಹಸಂಸ್ಥಾಪಕ ಸೌರಭ್ ಅಗರ್ವಾಲ್ ಹೇಳಿದರು.

'ನಳಿನ್ ಬದಲಾವಣೆ ಚರ್ಚೆಯೇ ನಡೆದಿಲ್ಲ'

ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯಿಂದ ನಳಿನ್ ಕುಮಾರ್ ಕಟೀಲ್ ಅವರನ್ನು ಬದಲಾವಣೆ ಮಾಡುವ ಕುರಿತು ಚರ್ಚೆಯೇ ನಡೆದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಳಿನ್ ಕುಮಾರ್ 3 ವರ್ಷಗಳಿಂದ ರಾಜ್ಯದಲ್ಲಿ ಪಕ್ಷವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಎಂಟರಿಂದ ಹತ್ತು ಬಾರಿ ರಾಜ್ಯ ಪ್ರವಾಸ ಮಾಡಿದ್ದಾರೆ. ಬೂತ್ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಪಕ್ಷವನ್ನು ಸಂಘಟನೆ ಮಾಡಿದ್ದಾರೆ' ಎಂದರು.

'ಗ್ರಾಮ ಪಂಚಾಯಿತಿ, ವಿಧಾನ ಪರಿಷತ್ ಚುನಾವಣೆ ಎಲ್ಲವನ್ನೂ ನಳಿನ್ ನೇತೃತ್ವದಲ್ಲಿ ಪಕ್ಷ ಸಮರ್ಥವಾಗಿ ಎದುರಿಸಿದೆ. ಮುಂದೆಯೂ ಅವರ ನೇತೃತ್ವ ಪಕ್ಷಕ್ಕೆ ಇನ್ನಷ್ಟು ಬಲ ನೀಡಲಿದೆ' ಎಂದರು.

42 ಬಗೆಯ ತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಟ್ಟಹಲಸೂರು ಪಂಚಾಯಿತಿ ವ್ಯಾಪ್ತಿಯಲ್ಲಿ ₹ 1.75 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ 'ಇಕೋ ಹಬ್' ಸಮಗ್ರ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಚಾಲನೆ ನೀಡಲಾಯಿತು.

ದಿ ಅನನ್ಯಮಸ್ ಇಂಡಿಯನ್ ಚಾರಿಟಬಲ್ ಟ್ರಸ್ಟ್ ಮತ್ತು ಬೆಟ್ಟ ಹಲಸೂರು ಪಂಚಾಯಿತಿ ಸಹಭಾಗಿತ್ವದಲ್ಲಿ ಎಂಬೆಸ್ಸಿ ರಿಯಲ್ ಎಸ್ಟೇಟ್ ಸಂಸ್ಥೆಯ (ಆರ್.ಇ.ಐ.ಟಿ) ಧನಸಹಾಯದೊಂದಿಗೆ 'ಇಕೋ ಗ್ರಾಮ್' ಯೋಜನೆ ಅಡಿಯಲ್ಲಿ 2 ಎಕರೆ ಪ್ರದೇಶದಲ್ಲಿ ಈ ಘಟಕ ನಿರ್ಮಿಸಲಾಗಿದೆ.

ಘಟಕದಲ್ಲಿ ಒಣ- ಹಸಿ ಕಸ, ಔಷಧಿ, ಪ್ಲಾಸ್ಟಿಕ್, ಪೇಪರ್, ಲೋಹ, ಗಾಜು ಸೇರಿದಂತೆ ಪ್ರತಿದಿನ 42 ಬಗೆಯ ಸುಮಾರು 3 ಟನ್‌ನಷ್ಟು ಒಣತ್ಯಾಜ್ಯ ಬೇರ್ಪಡಿಸಲು ವ್ಯವಸ್ಥೆ ಮಾಡಲಾಗಿದೆ.

ಶಾಸಕ ಕೃಷ್ಣಬೈರೇಗೌಡ ಮಾತನಾಡಿ, ಹಳ್ಳಿಗಳಲ್ಲಿ ಕಸ ನಿರ್ವಹಣೆಯು ದೊಡ್ಡ ಸವಾಲಾಗಿ ಪರಿಣಮಿಸಿರುವ ಈ ಸಂದರ್ಭದಲ್ಲಿ ಇಕೋ ಗ್ರಾಮ್ ಸಂಸ್ಥೆಯವರು ಪಂಚಾಯಿತಿಯ ಸಹ ಭಾಗಿತ್ವದಲ್ಲಿ ಜನರಿಗೆ ಕಸನಿರ್ವಹಣೆ ಬಗ್ಗೆ ಅರಿವು ಮೂಡಿಸಿ, ಮನೆಗಳಲ್ಲೆ ಕಸವನ್ನು ಬೇರ್ಪಡಿಸಿ, ನೀಡುವ ರೀತಿಯಲ್ಲಿ ಮನವೊಲಿಸಿರುವುದು ಶ್ಲಾಘನೀಯ ಕಾರ್ಯ ಎಂದರು.

ಪಂಚಾಯಿತಿ ಅಧ್ಯಕ್ಷ ಬಿ.ಎಂ. ನಾಗೇಶ್, ಪಿಡಿಒ ನಾಗರಾಜ್, ಕೃಷಿಕ ಸಮಾಜದ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ಬಿ.ಕೆ.ಮಂಜುನಾಥ ಗೌಡ, ಪಂಚಾಯಿತಿ ಸದಸ್ಯರಾದ ಬಿ.ಆರ್.ಪ್ರವೀಣ್ ಹಾಜರಿದ್ದರು.

ಬೆಟ್ಟಹಲಸೂರು ಗ್ರಾಮದಲ್ಲಿ ನಿರ್ಮಿಸಿರುವ ಸಮಗ್ರ ತ್ಯಾಜ್ಯ ನಿರ್ವಹಣಾ ಘಟಕವನ್ನು ಶಾಸಕ ಕೃಷ್ಣಬೈರೇಗೌಡ ಉದ್ಘಾಟಿಸಿದರು. ಬಿ.ಎಂ.ನಾಗೇಶ್ ಮೊದಲಾದವರು ಹಾಜರಿದ್ದರು

'ಸಹಜೀವನ' ಕೌಟುಂಬಿಕ ಸಂಬಂಧಗಳ ಸ್ವರೂಪ ಒಳಗೊಳ್ಳಬಹುದು: 'ಸುಪ್ರೀಂ'

ನವದೆಹಲಿ (ಪಿಟಿಐ): 'ಸಹಜೀವನ ನಡೆಸುವವರ ಅಥವಾ ಲೈಂಗಿಕ ಅಲ್ಪಸಂಖ್ಯಾತರ ನಡುವಣ ಸಂಬಂಧಗಳು ಕೌಟುಂಬಿಕ ಸಂಬಂಧಗಳ ಸ್ವರೂಪವನ್ನು ಒಳಗೊಳ್ಳಬಹುದು. ಅಸಾಂಪ್ರದಾಯಿಕ ಕುಟುಂಬ ಘಟಕದ ಸ್ವರೂಪವೂ ಸಾಂಪ್ರದಾಯಿಕ ಪ್ರತಿರೂಪದಂತೆಯೇ ನೈಜವಾಗಿರಲಿದೆ. ಅದು ಕಾನೂನಿ ನಡಿ ರಕ್ಷಣೆ ಪಡೆಯಲು ಅರ್ಹವಾಗಿರಲಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಅಪ್ಪ, ಅಮ್ಮ ಮತ್ತು ಮಕ್ಕಳನ್ನು ಒಳಗೊಂಡಿರುವುದೇ ಕುಟುಂಬ ಎಂಬ ಕಲ್ಪನೆ ಸಮಾಜದಲ್ಲಿದೆ. ಕಾನೂನು ಕೂಡ ಇದನ್ನೇ ಪ್ರತಿಪಾದಿಸುತ್ತದೆ. ಕೆಲ ಸಂದರ್ಭಗಳು ಒಬ್ಬರ ಕೌಟುಂಬಿಕ ರಚನೆಯಲ್ಲಿ ಬದಲಾವಣೆಗೆ ಕಾರಣವಾಗಬಹುದು. ಅನೇಕ ಕುಟುಂಬಗಳು ಈ ಬದಲಾವಣೆಯನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ ಎಂಬುದು ಸತ್ಯ' ಎಂದು ನ್ಯಾ. ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ಪೀಠ ತಿಳಿಸಿದೆ.

ಸಾಮಾಜಿಕ ಕಾರ್ಯಕರ್ತರು, ಎಲ್‌ಜಿಬಿಟಿ ಸಮುದಾಯಕ್ಕೆ ಸೇರಿದವರ ವಿವಾಹ ಹಾಗೂ ಇತರ ಸಮಸ್ಯೆಗಳ ಕುರಿತು ಧ್ವನಿ ಎತ್ತಿರುವ ಸಂದರ್ಭದಲ್ಲಿ ನ್ಯಾಯಾಲಯವು ಹೀಗೆ ಅಭಿಪ್ರಾಯ ಪಟ್ಟಿರುವುದು ಮಹತ್ವದ್ದೆನಿಸಿದೆ.

ಮಹಿಳೆ ಸಾವು

ಶ್ರೀರಂಗಪಟ್ಟಣ: ಹೆದ್ದಾರಿ ಪಕ್ಕ ನಿಲ್ಲಿಸಿದ್ದ ಇನೊವಾ ಕಾರಿಗೆ ಆಲ್ಟೊ ಕಾರು ಡಿಕ್ಕಿಯಾಗಿ ಆಲ್ಟೊ ಕಾರಿನಲ್ಲಿದ್ದ ಮಹಿಳೆ ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡ ಘಟನೆ ಗಣಂಗೂರು ಬಳಿ ಭಾನುವಾರ ನಡೆದಿದೆ.

ಬೆಂಗಳೂರಿನ ವಿಜಯನಗರದ ಉಷಾ ತಿಮ್ಮಯ್ಯ (48) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಾಲಕಿ ಭಾನುಶ್ರೀ ಮೋಹನ್ ಅವರ ಬಲಗೈ ಮೂಳೆ ಮುರಿದಿದೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಹಸಿರು ಗಣಪ, ಬೀಜ ಗಣಪ’ ಅಭಿಯಾನಕ್ಕೆ ಉತ್ತಮ ಸ್ಪಂದನೆ • ‘ಗಿನ್ನಿಸ್’ ದಾಖಲೆ ನಿರ್ಮಾಣ

ಪರಿಸರ ಸ್ನೇಹಿ ಗಣೇಶನಿಗೆ ಜನರ ಸಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳು, ವೃದ್ಧರು ಸೇರಿ ಎಲ್ಲ ವಯೋಮಾನದವರೂ ಉತ್ಸಾಹದಿಂದ ಜೇಡಿಮಣ್ಣಿನಲ್ಲಿ ಗಣೇಶ ವಿಗ್ರಹಗಳನ್ನು ತಯಾರಿಸುವ ಮೂಲಕ ಪರಿಸರ ಸ್ನೇಹಿ ಹಬ್ಬದ ಆಶಯಕ್ಕೆ ಸಾಥ್ ನೀಡಿದರು.

ಇದರಿಂದಾಗಿ ‘ಹಸಿರು ಗಣಪ ಬೀಜ ಗಣಪ’ ಅಭಿಯಾನದಡಿ 5 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ಮೂಲಕ ‘ಗಿನ್ನಿಸ್’ ದಾಖಲೆ ನಿರ್ಮಾಣಕ್ಕೆ ನೆರವಾದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಹಾಗೂ ಶ್ರೀ ವಿದ್ಯಾರಣ್ಯ ಯುವಕರ ಸಂಘ ಜಂಟಿಯಾಗಿ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 3,800 ವಿಗ್ರಹ ನಿರ್ಮಾಣದ ಮೂಲಕ ನೂತನ ದಾಖಲೆ ನಿರ್ಮಾಣವಾಯಿತು.

ನಗರದ ವಿವಿಧೆಡೆಯಿಂದ ಕುಟುಂಬ ಸಮೇತರಾಗಿ ಬಂದ ಜನರು, ಕಲಾವಿದರ ಮಾರ್ಗದರ್ಶನದಲ್ಲಿ ಹಸಿರು ಗಣೇಶ ಮೂರ್ತಿಗಳನ್ನು ತಯಾರಿಸಿದರು.

ಜನರಿಗೆ ಟಿ ಶರ್ಟ್, ವಿಗ್ರಹ ನಿರ್ಮಾಣಕ್ಕೆ ಜೇಡಿಮಣ್ಣಿನೊಂದಿಗೆ ವಿವಿಧ ಹೂವು ಹಾಗೂ ಔಷಧ ಗಿಡಗಳ ಬೀಜಗಳನ್ನು ವಿತರಿಸಲಾಯಿತು. ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳೂ ಪಾಲ್ಗೊಂಡಿದ್ದರು.

ಗಿನ್ನಿಸ್ ದಾಖಲೆ ಪ್ರಯತ್ನವನ್ನು ವೀಕ್ಷಿಸಿದ ನಿರ್ಣಾಯಕರ ತಂಡ, ಮೂರ್ತಿಗಳ ನಿರ್ಮಾಣದ ಬಳಿಕ ನೂತನ ದಾಖಲೆ ನಿರ್ಮಾಣ ಆಗಿರುವುದಾಗಿ ಘೋಷಿಸಿದರು. ಪ್ರಮಾಣ ಪತ್ರವನ್ನು ಕೆಎಸ್‌ಪಿಸಿಬಿ ಹಾಗೂ ಶ್ರೀ ವಿದ್ಯಾರಣ್ಯ ಯುವಕರ ಸಂಘದ ಪ್ರತಿನಿಧಿಗಳಿಗೆ ಅವರು ಹಸ್ತಾಂತರಿಸಿತು.

‘ಈ ಹಿಂದೆ 2,138 ವಿಗ್ರಹಗಳನ್ನು ಒಂದೆಡೆ ತಯಾರಿಸಲಾಗಿತ್ತು. ಈಗ ನೂತನ ದಾಖಲೆ ನಿರ್ಮಾಣವಾಗಿದೆ’ ಎಂದು ನಿರ್ಣಾಯಕರು ತಿಳಿಸಿದರು.

‘ಈ ಅಭಿಯಾನದಲ್ಲಿ ತಯಾರಿಸಲಾಗುವ ಮೂರ್ತಿಗಳನ್ನು ಸಾರ್ವಜನಿಕರು ತಮ್ಮ ಮನೆಗಳಲ್ಲಿ ‘ಗಣೇಶ ಚತುರ್ಥಿ’ಯಂದು ಪ್ರತಿಷ್ಠಾಪಿಸಿ, ಬಳಿಕ ಪರಿಸರಸ್ನೇಹಿಯಾದ ಕ್ರಮದಲ್ಲಿಯೇ ಮಣ್ಣಿನ ಕುಂಡಗಳಲ್ಲಿ ಮೂರ್ತಿಯನ್ನು ವಿಸರ್ಜಿಸಬೇಕು’ ಎಂದು ಆಯೋಜಕರು ಮನವಿ ಮಾಡಿಕೊಂಡರು.

ಕೆಎಸ್‌ಪಿಸಿಬಿ ಕಳೆದ ವರ್ಷ 10 ಲಕ್ಷ ಅರಿಸಿನ ಗಣೇಶ ನಿರ್ಮಿಸಿ ವಿಶ್ವ ದಾಖಲೆಯನ್ನು ನಿರ್ಮಿಸಿತ್ತು. ಅಲ್ಲದೆ, ಅರಿಸಿನ ಗಣಪತಿ ತಯಾರಿಕೆ ಮತ್ತು ಅದರ ಮಹತ್ವವನ್ನು ಕುರಿತು ಅರಿವು ಮೂಡಿಸಲು ಮಂಡಳಿ ತನ್ನ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಿದ್ದ ವಿಡಿಯೊ ಅನ್ನು ಕಳೆದ ವರ್ಷ ಒಂದು ಕೋಟಿ ಜನರು ವೀಕ್ಷಣೆ ಮಾಡಿದ್ದರು.

‘ಹಸಿರು ಗಣಪ ಬೀಜ ಗಣಪ’ ಅಭಿಯಾನದಡಿ ಜನರು ಜೇಡಿಮಣ್ಣಿನಿಂದ ಗಣೇಶ ವಿಗ್ರಹ ತಯಾರಿಸಿದರು – ಪ್ರಜಾವಾಣಿ ಚಿತ್ರ

ಗಣೇಶೋತ್ಸವ: ಸೂಕ್ಷ್ಮ ಪ್ರದೇಶದಲ್ಲಿ 24 ಗಂಟೆ ಭದ್ರತೆ

ಬೆಂಗಳೂರು: ನಗರದಲ್ಲಿ ಗಣೇಶೋತ್ಸವ ಆಚರಣೆಗೆ ದಿನಗಣನೆ ಶುರುವಾಗಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಭದ್ರತೆ ಕೈಗೊಳ್ಳಲು ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ.

ಚಾಮರಾಜಪೇಟೆ ಮೈದಾನ ಹಾಗೂ ಇತರೆ ವಿವಾದಿತ ಸ್ಥಳಗಳಲ್ಲಿ ಗಣೇಶೋತ್ಸವ ಆಚರಣೆ ಬಗ್ಗೆ ಹಲವು ಚರ್ಚೆಗಳು ನಡೆಯುತ್ತಿವೆ. ಇಂಥ ಸ್ಥಳಗಳಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಮಾಹಿತಿ ಇರುವುದರಿಂದ, ಭದ್ರತೆ ಬಿಗಿಗೊಳಿಸಲು ಕಮಿಷನರ್ ಪ್ರತಾಪ್ ರೆಡ್ಡಿ ಅವರು ಡಿಸಿಪಿಗಳಿಗೆ ಸೂಚನೆ ನೀಡಿದ್ದಾರೆ.

ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಸಾರ್ವಜನಿಕ ಸ್ಥಳಗಳ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕಿದ್ದಾರೆ. ಪ್ರತಿ ಸ್ಥಳದಲ್ಲೂ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿದೆ. ‘ಚಾಮರಾಜಪೇಟೆ, ಪಾದರಾಯನಪುರ, ಚಂದ್ರಾಲೇಔಟ್, ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ), ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ), ಗೋವಿಂದಪುರ ಪ್ರದೇಶಗಳನ್ನು ಅತೀ ಸೂಕ್ಷ್ಮವೆಂದು ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿ ದಿನದ 24 ಗಂಟೆಯೂ ಪೊಲೀಸರು ಮೂರು ಪಾಳಿಯಲ್ಲಿ ಗಸ್ತು ತಿರುಗಲಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. ‘ಮೂರ್ತಿ ಮೆರವಣಿಗೆ ಸಾಗುವ ರಸ್ತೆಗಳ ಪಟ್ಟಿ ಮಾಡಲಾಗಿದೆ. ಈ ಭಾಗದಲ್ಲಿರುವ ಪ್ರಾರ್ಥನಾ ಮಂದಿರಗಳಿಗೂ ಭದ್ರತೆ ನೀಡಲಾಗುವುದು’ ಎಂದೂ ತಿಳಿಸಿದರು.

ಪರಿಸರ ಗಣಪ.. ಬೆಂಗಳೂರಿನ ಹನುಮಂತನಗರದ ಶ್ರೀ ರಾಮಾಂಜನೇಯ ದೇವಸ್ಥಾನದ ಆವರಣದಲ್ಲಿ ಪ್ರಯೋಗ ಮಂಟಪ ಹಾಗೂ ರಂಗ ಚಂದಿರ ಭಾನುವಾರ ಆಯೋಜಿಸಿದ್ದ ಪರಿಸರ ಗಣಪ ಕಾರ್ಯಾಗಾರದಲ್ಲಿ ಮಕ್ಕಳು ಗಣಪನ ಮೂರ್ತಿ ತಯಾರಿಸಿದರು ಪ್ರಜಾವಾಣಿ ಚಿತ್ರ

ಬಿಜೆಪಿ ವಿರುದ್ಧ ‘ಚಾರ್ಜ್ ಶೀಟ್’: ಕಾಂಗ್ರೆಸ್

ಬೆಂಗಳೂರು: ರಾಜ್ಯ ಬಿಜೆಪಿ ಸರ್ಕಾರದ ವೈಫಲ್ಯಗಳ ಚಾರ್ಜ್ ಶೀಟ್ (ಆರೋಪ ಪಟ್ಟಿ) ಸಿದ್ಧಪಡಿಸಿ ಜನರ ಬಳಿಗೆ ತೆಗೆದುಕೊಂಡು ಹೋಗಲು ಬಿಬಿಎಂಪಿ ಕಾಂಗ್ರೆಸ್ ಪ್ರಣಾಳಿಕಾ ಸಮಿತಿ ನಿರ್ಧರಿಸಿದೆ. ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ರಸ್ತೆಗುಂಡಿ, ಆರೋಗ್ಯ ಸಮಸ್ಯೆ ಸೇರಿ ಬೆಂಗಳೂರಿಗೆ ಸಂಬಂಧಿಸಿದಂತೆ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು 15 ದಿನಗಳಲ್ಲಿ ಪಟ್ಟಿ ಮಾಡಿ, ಜನರ ಮುಂದೆ ತೆಗೆದುಕೊಂಡು ಹೋಗಲು ಕಾಂಗ್ರೆಸ್ ನಾಯಕರು ತೀರ್ಮಾನಿಸಿದ್ದಾರೆ.

ಜನಜಾಗೃತಿ ಅಭಿಯಾನ: ‘ಸರ್ಕಾರದ ಜನೋತ್ಸವದ ವಿರುದ್ಧ ಜನಜಾಗೃತಿ ಅಭಿಯಾನಕ್ಕೆ ಕಾಂಗ್ರೆಸ್ ನಿರ್ಧರಿಸಿದೆ. ನಾಯಕರಾದ ಸಿದ್ದರಾಮಯ್ಯ, ಸುರ್ಜೇವಾಲಾ, ಡಿ.ಕೆ ಶಿವಕುಮಾರ್ ಸೋಮವಾರ ಈ ಬಗ್ಗೆ ಅಧಿಕೃತ ಘೋಷಣೆ ಮಾಡಲಿದ್ದಾರೆ’ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ ನೇತೃತ್ವದ ‘ಭಾರತ ಒಗ್ಗೂಡಿಸಿ ಯಾತ್ರೆ’

ರಾಜ್ಯದಲ್ಲಿ 21ದಿನ ಪಾದಯಾತ್ರೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿರುವ ‘ಭಾರತ ಒಗ್ಗೂಡಿಸಿ’ (ಭಾರತ್ ಜೋಡೋ) ಪಾದಯಾತ್ರೆ ಸೆಪ್ಟೆಂಬರ್ 7ರಂದು ಕನ್ಯಾಕುಮಾರಿಯಲ್ಲಿ ಆರಂಭಗೊಂಡು ರಾಜ್ಯಕ್ಕೆ ಸೆ. 30ರಂದು ಗುಂಡ್ಲುಪೇಟೆ ಮೂಲಕ ಪ್ರವೇಶಿಸಲಿದೆ. ಮೈಸೂರು, ಮಂಡ್ಯ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ರಾಯಚೂರುವರೆಗೆ 21 ದಿನ 511 ಕಿ.ಮೀ ಈ ಯಾತ್ರೆ ಸಾಗಲಿದೆ.

ಯಾತ್ರೆಯ ಲಾಂಛನವನ್ನು ಭಾನುವಾರ ಬಿಡುಗಡೆ ಮಾಡಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಪಾದಯಾತ್ರೆಯಲ್ಲಿ ಒಂದೊಂದು ದಿನ ಯಾವ ಮುಖಂಡರು ಪಾಲ್ಗೊಳ್ಳಬೇಕೆಂದು ನಿಶ್ಚಯಿಸಲಾಗಿದೆ. ನಿತ್ಯ 25 ಕಿ.ಮೀ ಪಾದಯಾತ್ರೆ ಮಾಡುತ್ತೇವೆ’ ಎಂದರು.

‘ಬೆಲೆ ಏರಿಕೆಯಿಂದ ಪ್ರತಿ ಕುಟುಂಬ ತತ್ತರಿಸುತ್ತಿದೆ. ಅದರಲ್ಲೂ ಮಹಿಳೆಯರಿಗೆ ಆರ್ಥಿಕ, ಮಾನಸಿಕ ಶಕ್ತಿ ತುಂಬಬೇಕಿದೆ. ನಿರುದ್ಯೋಗ ಹೆಚ್ಚಿದ್ದು, ಯುವಕರಿಗೆ ಉದ್ಯೋಗ ಸಿಗಬೇಕು. ರಾಜ್ಯದಲ್ಲಿ ಭ್ರಷ್ಟಾಚಾರರಹಿತ ಸರ್ಕಾರ ರಚನೆ ಆಗಬೇಕು. ರೈತರು ಹಾಗೂ ಕಾರ್ಮಿಕರ ಬದುಕು ಹಸನಾಗಬೇಕು. ಈ ಉದ್ದೇಶದೊಂದಿಗೆ ಎಲ್ಲ ವರ್ಗದವರನ್ನು ರಕ್ಷಿಸಲು ಈ ಯಾತ್ರೆ ನಡೆಯಲಿದೆ’ ಎಂದು ವಿವರಿಸಿದರು.

‘ಶಿಕ್ಷಕರು, ನಿವೃತ್ತ ಅಧಿಕಾರಿಗಳು, ಸಂಘ ಸಂಸ್ಥೆಗಳು, ರೈತರು, ಕಾರ್ಮಿಕರು ಪಾದಯಾತ್ರೆಯಲ್ಲಿ ಭಾಗವಹಿಸುವರು. ರಾಜ್ಯದ ಪ್ರಮುಖ ನಾಯಕರೆಲ್ಲರೂ ಕನ್ಯಾಕುಮಾರಿಯಲ್ಲಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇವೆ’ ಎಂದರು.

‘ಬಳ್ಳಾರಿಯಲ್ಲಿ ಸಾರ್ವಜನಿಕ ಸಮಾವೇಶ ಹಮ್ಮಿಕೊಳ್ಳಲಾಗುವುದು. ಅಕ್ಟೋಬರ್ 4-5ರಂದು ದಸರಾ ಹಬ್ಬ ನಡೆಯಲಿದ್ದು, ಈ ದಿನ ಯಾವ ರೀತಿ ಮಾಡಬೇಕು ಎಂಬುದನ್ನು ವರಿಷ್ಠರ ಜತೆ ಚರ್ಚಿಸಿ ತೀರ್ಮಾನಿಸುತ್ತೇವೆ’ ಎಂದರು.

ಸಿದ್ದರಾಮಯ್ಯ ಮಾತನಾಡಿ, ‘ದೇಶದ ಜನರನ್ನು ಒಗ್ಗೂಡಿಸಲು, ನಾವೆಲ್ಲರೂ ಭಾರತೀಯರು, ಮನುಷ್ಯರು ಎಂಬ ಭಾವನೆಗಳ ಮೂಲಕ ಜನರನ್ನು ಒಗ್ಗೂಡಿಸಲು ಪಕ್ಷವು ಈ ಪಾದಯಾತ್ರೆ ಹಮ್ಮಿಕೊಂಡಿದೆ. ರಾಹುಲ್ ಗಾಂಧಿಯವರು 150 ದಿನಗಳಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ 3,500 ಕಿಲೋಮೀಟರ್ ಪಾದಯಾತ್ರೆ ಮಾಡಲಿದ್ದಾರೆ’ ಎಂದರು.

‘ರಾಹುಲ್ ಗಾಂಧಿಯವರ ಜೊತೆ 125 ನಾಯಕರು ಭಾರತ ಯಾತ್ರಿಗಳಾಗಿ ಎಲ್ಲ ರಾಜ್ಯಗಳಲ್ಲೂ ಹೆಜ್ಜೆ ಹಾಕಲಿದ್ದಾರೆ. ರಾಜ್ಯ ಹಾಗೂ ಬೇರೆ ಬೇರೆ ರಾಜ್ಯದವರು ಸೇರಿ ಕನಿಷ್ಠ 300 ಮಂದಿ ಸದಾ ಪಾದಯಾತ್ರೆಯಲ್ಲಿ ಭಾಗವಹಿಸುತ್ತಾರೆ. ಅವರ ಜೊತೆ ಸ್ಥಳೀಯ ನಾಯಕರು ಹಾಗೂ ಸ್ಥಳೀಯ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ’ ಎಂದರು.

ಮುರುಘಾಶ್ರೀಗಳ ವಿರುದ್ಧದ ಲೈಂಗಿಕ ಕಿರುಕುಳ ಆರೋಪದ ಕುರಿತು ಪ್ರತಿಕ್ರಿಯಿಸಲು ಕಾಂಗ್ರೆಸ್ ನಾಯಕರು ನಿರಾಕರಿಸಿದರು.

‘ಭಾರತ ಒಗ್ಗೂಡಿಸಿ’ ಯಾತ್ರೆಯ ಲಾಂಛನ ಬಿಡುಗಡೆ ಸಂದರ್ಭದಲ್ಲಿ ಶಾಸಕರಾದ ಪ್ರಿಯಾಂಕ್ ಖರ್ಗೆ, ಕೆ.ಜೆ. ಜಾರ್ಜ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಇದ್ದರು ಪ್ರಜಾವಾಣಿ ಚಿತ್ರ

ಪಾದಯಾತ್ರೆಗೆ ಶಾಸಕರ ಹಾಜರಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೆಪ್ಟೆಂಬರ್ 30ರಿಂದ 21 ದಿನ ನಡೆಯಲಿರುವ ‘ಭಾರತ ಒಗ್ಗೂಡಿಸಿ’ (ಭಾರತ್ ಜೋಡೋ) ಪಾದಯಾತ್ರೆಯಲ್ಲಿ ಪಕ್ಷದ ಎಲ್ಲ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಕಡ್ಡಾಯವಾಗಿ ಪಾಲ್ಗೊಳ್ಳಬೇಕು ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಸೂಚನೆ ನೀಡಲಾಗಿದೆ.

ಪಾದಯಾತ್ರೆಯ ಸ್ವರೂಪ, ಸಿದ್ಧತೆ ಮತ್ತಿತರ ವಿವರಗಳನ್ನು ಚರ್ಚಿಸುವುದಕ್ಕಾಗಿಯೇ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಭಾನುವಾರ ರಾತ್ರಿ ಸಭೆ ನಡೆಯಿತು.

‘ನಮ್ಮ ಕ್ಷೇತ್ರದಲ್ಲಿ ಪಾದಯಾತ್ರೆ ಸಾಗುವುದಿಲ್ಲ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಯಾವುದೇ ಶಾಸಕರು ಕಾರ್ಯಕ್ರಮದಿಂದ ದೂರ ಉಳಿಯಬಾರದು. ಎಲ್ಲ ಶಾಸಕರೂ ತಮಗೆ ನಿಗದಿಪಡಿಸಿದ ದಿನದಂದು ಪಾದಯಾತ್ರೆಯಲ್ಲಿ ಭಾಗವಹಿಸಲೇಬೇಕು’ ಎಂದು ಸಿದ್ದರಾಮಯ್ಯ ಸೇರಿದಂತೆ ನಾಯಕರು ಸೂಚನೆ ನೀಡಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪಾದಯಾತ್ರೆಯಲ್ಲಿ ಭಾಗವಹಿಸುವ ಜನರಿಗೆ ಊಟ, ವಸತಿ ವ್ಯವಸ್ಥೆ ಮಾಡಬೇಕು. ಯಾತ್ರೆ ಸಾಗುವ ಮಾರ್ಗದಲ್ಲಿನ ಸಾಹಿತಿಗಳು, ಚಿಂತಕರ ಜತೆ ಚರ್ಚೆ ನಡೆಸುವುದಕ್ಕೆ ಪೂರಕವಾಗಿ ಕಾರ್ಯಕ್ರಮ ರೂಪಿಸಬೇಕು. ಪ್ರತಿ ದಿನವೂ ಕೆಲವು ಕಡೆ ಸಭೆಗಳನ್ನು ನಡೆಸುವುದಕ್ಕೆ ಸ್ಥಳ ಗುರುತಿಸಿ, ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂಬ ಸೂಚನೆಯನ್ನೂ ನೀಡಲಾಗಿದೆ.

‘ಭಾರತ ಒಗ್ಗೂಡಿಸಿ’ ಕಾರ್ಯಕ್ರಮದ ರೂಪುರೇಷೆ, ನಡೆದಿರುವ ಸಿದ್ಧತೆಗಳ ಕುರಿತು ಶಾಸಕರಿಗೆ ಸಭೆಯಲ್ಲಿ ವಿವರಿಸಲಾಯಿತು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯದಲ್ಲಿ ಪಾದಯಾತ್ರೆಯ ಉಸ್ತುವಾರಿಯೂ ಆಗಿರುವ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್ ದತ್, ಮಯೂರ್ ಜಯಕುಮಾರ್, ವಿಷ್ಣುನಾಥನ್, ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಆರ್. ಧ್ರುವನಾರಾಯಣ ಸೇರಿ ಹಲವು ನಾಯಕರು ಸಭೆಯಲ್ಲಿದ್ದರು.

ಸುರ್ಜೇವಾಲಾ ಮನವೊಲಿಕೆ: ಪಕ್ಷ ತೊರೆಯಲ್ಲ ಮುನಿಯಪ್ಪ

ಬೆಂಗಳೂರು: ಪಕ್ಷದ ರಾಜ್ಯ ಘಟಕದ ನಾಯಕರ ಜೊತೆ ಮುನಿಸಿಕೊಂಡಿದ್ದ ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಅವರನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಭಾನುವಾರ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಇತ್ತೀಚೆಗೆ ಸಚಿವ ಡಾ.ಕೆ. ಸುಧಾಕರ್ ಜೊತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನೆಗೆ ಮುನಿಯಪ್ಪ ಭೇಟಿ ನೀಡಿದ್ದರು. ಈ ಬೆಳವಣಿಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಅಸಮಾಧಾನಗೊಂಡಿರುವ ಮುನಿಯಪ್ಪ ಅವರನ್ನು ಮನವೊಲಿಸಲು ಯತ್ನಿಸಿದ ಸುರ್ಜೇವಾಲಾ, ಪಕ್ಷ ತ್ಯಜಿಸುವ ತೀರ್ಮಾನ ಮಾಡದಂತೆ ಮನವಿ ಮಾಡಿದ್ದಾರೆಂದು ಗೊತ್ತಾಗಿದೆ.

ಭೇಟಿ ಬಳಿಕ ಮಾತನಾಡಿದ ಸುರ್ಜೇವಾಲಾ ‘ಮುನಿಯಪ್ಪ ನನಗೆ ಹಿರಿಯ ಸಹೋದರ ಇದ್ದಂತೆ. ಎಐಸಿಸಿ ಸೂಚನೆಯಂತೆ ನಾನು ಅವರನ್ನು ಭೇಟಿ ಮಾಡಿಲ್ಲ. ಅವರ ಮನೆ ನೋಡಬೇಕೆಂದು ಬಂದಿದ್ದೆ. ಪಕ್ಷದಲ್ಲಿ ಅವರಿಗೆ ಯಾವುದೇ ಸಮಸ್ಯೆ ಇಲ್ಲ. ಪಕ್ಷದ ‘ಭಾರತ ಒಗ್ಗೂಡಿಸಿ’ ಯಾತ್ರೆ ಬಗ್ಗೆ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ’ ಎಂದು ಹೇಳಿದರು.

ಮುನಿಯಪ್ಪ ಮಾತನಾಡಿ, ‘ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಅವರು ನನ್ನ ಮನೆಗೆ ಬಂದಿಲ್ಲ. ಕುಟುಂಬದ ಸದಸ್ಯರಾಗಿ ಸುರ್ಜೇವಾಲಾ ಬಂದಿದ್ದರು. ಪಕ್ಷ ಸಂಘಟನೆ ಕುರಿತಂತೆ ಕೆಲವು ವಿಚಾರಗಳನ್ನು ಚರ್ಚಿಸಿದ್ದೇವೆ’ ಎಂದರು.

‘ನನ್ನ ಎಲ್ಲ ವಿಚಾರಗಳನ್ನು ಹೈಕಮಾಂಡ್‌ಗೆ ತಿಳಿಸಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿ ಇದ್ದೇನೆ, ಇರುತ್ತೇನೆ. ಬೇರೆ ಯಾವುದೇ ಚರ್ಚೆ ನಡೆದಿಲ್ಲ. ಎಲ್ಲವೂ ಸಮಾಧಾನವಾಗಿ ನಡೆಯುತ್ತಿದೆ’ ಎಂದರು.

ನಗರದಲ್ಲಿ ಇಂದು

ಟಿ.ಆರ್. ಶಾಮಣ್ಣನವರ 32ನೇ ವರ್ಷದ ಸಂಸ್ಮರಣೆ: ಅಧ್ಯಕ್ಷತೆ: ಸುರೇಶ ಕಲ್ಲಗಟಗಿ, ಅತಿಥಿಗಳು: ವೆಂಕಟರಮಣಯ್ಯ. ಡಿ.ಎನ್., ಟಿ.ಎಸ್. ರವಿಚಂದ್ರ, ಆಯೋಜನೆ: ವಿನಾಯಕ ವಿದ್ಯಾಸಂಸ್ಥೆ, ಶ್ರೀನಿವಾಸನಗರ, ಬೆಳಿಗ್ಗೆ 10

ಬಿಲ್ಕಿಸ್ ಭಾನು ನಿಮ್ಮೊಂದಿಗೆ ನಾವಿದ್ದೇವೆ ಸಮಾವೇಶ: ಭಾಷಣಕಾರರು: ರವಿವರ್ಮಾ ಕುಮಾರ್, ಹೇಮಲತಾ ಮಹಿಷಿ, ಐರೋಮ್ ಶರ್ಮಿಳಾ, ಬಿ.ಎಂ. ಹನೀಫ್, ಅಧ್ಯಕ್ಷತೆ: ಎಂ.ಎನ್. ಮಂಜುಳಾ, ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ: ಯುವಿಸಿಇ ಅಲುಮ್ನಿ ಅಸೋಸಿಯೇಷನ್ ಸಭಾಂಗಣ, ಬೆಳಿಗ್ಗೆ 10.30

ಪುನರ್‌ಮನನ ಮತ್ತು ಸ್ವಾಗತ ಕಾರ್ಯಕ್ರಮ: ಅತಿಥಿಗಳು: ಗೋವಿಂದ್ ಪದ್ಮನಾಭನ್, ಮೌನ ಗುಡ್ಡೆಮನೆ, ಅಧ್ಯಕ್ಷತೆ: ಎಚ್. ಜಿ. ಬಾಲಗೋಪಾಲ್, ಆಯೋಜನೆ: ವಿವೇಕಾನಂದ ಪಿಯು ಕಾಲೇಜ್, ಕೆಂಗೇರಿ, ಬೆಳಿಗ್ಗೆ 10.30

ರಾಷ್ಟ್ರೀಯ ಕ್ರೀಡಾ ದಿನಾಚರಣೆ: ಚಾಲನೆ: ಬಸವರಾಜ ಬೊಮ್ಮಾಯಿ, ಏಕಲವ್ಯ, ಜೀವಮಾನ ಸಾಧನೆ ಮತ್ತು ಕ್ರೀಡಾ ರತ್ನ ಹಾಗೂ ಕ್ರೀಡಾ ಪೋಷಕ ಪ್ರಶಸ್ತಿ ಪ್ರದಾನ, ಸ್ಥಳ: ಬ್ಯಾಂಕ್ವೆಟ್ ಹಾಲ್ ವಿಧಾನಸೌಧ, ಬೆಳಿಗ್ಗೆ 11

ರಾಮಕೃಷ್ಣ ಹೆಗಡೆ ಅವರ ಜನ್ಮದಿನಾಚರಣೆ, ಜನತಾ ಪಾರ್ಟಿಯ ನೂತನ ಕಚೇರಿ ಉದ್ಘಾಟನೆ: ಅಧ್ಯಕ್ಷತೆ: ಬಿ.ಟಿ. ಲಲಿತಾ ನಾಯಕ್, ಎನ್.ಪಿ. ಅಮೃತೇಶ್, ರಮೇಶ್‌ಗೌಡ, ಉದಯ ಶಂಕರ್, ಆಯೋಜನೆ: ಜನತಾ ಪಾರ್ಟಿ, ಸ್ಥಳ: ಶೇಷಾದ್ರಿಪುರ, ಬೆಳಿಗ್ಗೆ 11.30



ರಾಮಕೃಷ್ಣ ಹೆಗಡೆ

ಪರಿಸರ ಸ್ನೇಹಿ ಗಣಪತಿ ಹಬ್ಬದ ಅಭಿಯಾನ: ಅತಿಥಿಗಳು: ಆನಂದ್ ಸಿಂಗ್, ಶಾಂತ್.ಎ. ತಿಮ್ಮಯ್ಯ, ಶ್ರೀನಿವಾಸಲು, ಆಯೋಜನೆ: ಪರಿಸರ ರತ್ನ, ಸ್ಥಳ: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ, ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆ, ಪ್ರಕಾಶನಗರ, ಮಧ್ಯಾಹ್ನ 2.30

ರಾಮಕೃಷ್ಣ ಹೆಗಡೆ–96: ಉದ್ಘಾಟನೆ: ಸಿದ್ದರಾಮಯ್ಯ, ಉಪನ್ಯಾಸ: ಸೀತಾರಾಂ ಯಚೂರಿ, ಅಧ್ಯಕ್ಷತೆ: ಮಮತಾ ನಿಚ್ಚಾನಿ, ಶಾಮನೂರು ಶಿವಶಂಕರಪ್ಪ, ಪ್ರಭಾಕರ ಕೋರೆ, ಆಯೋಜನೆ: ರಾಷ್ಟ್ರೀಯ ನವ ನಿರ್ಮಾಣ ವೇದಿಕೆ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4.30

ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 107ನೇ ಜಯಂತಿ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಗೊ.ರು. ಚನ್ನಬಸಪ್ಪ, ಅಬ್ದುಲ್ ಕರೀಂ, ಅಧ್ಯಕ್ಷತೆ: ಮಲೆಯೂರು ಗುರುಸ್ವಾಮಿ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜಯನಗರ, ಸಂಜೆ 5

'ಸ್ಮಾರ್ಟ್ ಸಿಟಿ' ಯೋಜನೆ ಸಮಯ ಮುಗಿದಿದ್ದರೂ ಕೆಲವು ಕಾಮಗಾರಿ ಆರಂಭವಾಗಿಲ್ಲ

ಯೋಜನೆ ಸೇರ್ಪಡೆ ಇನ್ನೂ ನಿಂತಿಲ್ಲ

• ಆರ್. ಮಂಜುನಾಥ್

ಬೆಂಗಳೂರು: 'ಸ್ಮಾರ್ಟ್ ಸಿಟಿ' ಯೋಜನೆಯಡಿ ವಿಧಾನಸೌಧಕ್ಕೆ ಎಲ್‌ಇಡಿ ವ್ಯವಸ್ಥೆ, ಪೊಲೀಸ್ ಆಯುಕ್ತರ ಕಚೇರಿ ಕಟ್ಟಡ ನವೀಕರಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹಣ ವೆಚ್ಚ ಮಾಡಲಾಗುತ್ತಿದೆ. ಇದರಲ್ಲಿ ರಸ್ತೆಗೆ ಸಿಂಹಪಾಲು. ನಂತರ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಆದ್ಯತೆ ನೀಡಲಾಗಿದೆ. ಸಿಲಿಕಾನ್‌ಸಿಟಿಗೆ ಮತ್ತಷ್ಟು ಐಟಿ ವ್ಯವಸ್ಥೆ ಕಲ್ಪಿಸಲು ನೂರಕ್ಕೂ ಹೆಚ್ಚು ಕೋಟಿ ವಿನಿಯೋಗಿಸಲಾಗುತ್ತಿದೆ. ಎಂದಿನಂತೆ ಶಿಕ್ಷಣಕ್ಕೆ ಮಾತ್ರ ಕೊನೆ ಆದ್ಯತೆ.

'ಸ್ಮಾರ್ಟ್ ಸಿಟಿ' ಯೋಜನೆಯಡಿ ನಿರ್ಮಾಣವಾಗುತ್ತಿರುವ ರಸ್ತೆಗಳಿಂದ ಜನರು ಸಾಕಷ್ಟು ಸಂಕಷ್ಟ ಎದುರಿಸಿದರು. ರಸ್ತೆ ಕೆಲಸ ಮುಗಿದ ಮೇಲೆ ಎಲ್ಲ 'ಯುಟಿಲಿಟಿ ಡಕ್ಟ್' ಇರುತ್ತವೆ. ರಸ್ತೆ ಅಗೆಯುವ ಪ್ರಶ್ನೆಯೇ ಇಲ್ಲ ಎಂದು ಹೇಳಲಾಗಿತ್ತು. ಆದರೆ, ಎಂದಿನಂತೆ ಇಲ್ಲೂ ಗುಂಡಿಗಳು ಕಾಣುತ್ತಿವೆ. ಅಲ್ಲಲ್ಲಿ ತೇಪೆ ಮಾಡಲಾಗಿದೆ. ಅಲ್ಲದೆ, ಒಳಚರಂಡಿ, ಬೆಸ್ಕಾಂನವರು ಎಂದು ರಸ್ತೆಯನ್ನು ಅಗೆಯುತ್ತಿದ್ದಾರೆ. ಇದಕ್ಕೆ ಕಸ್ತೂರಬಾ ರಸ್ತೆ ಉತ್ತಮ ಉದಾಹರಣೆ.

ನಗರದಲ್ಲಿ ₹930 ಕೋಟಿ ವೆಚ್ಚದಲ್ಲಿ 34 ಕಾಮಗಾರಿಗಳನ್ನು 'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ನಿರ್ವಹಿಸಲಾಗುತ್ತಿದೆ. ಐದು ವರ್ಷದಲ್ಲಿ ಮುಗಿಯಬೇಕಿದ್ದ ಈ ಯೋಜನೆಗಳು ಇಂದೂ ಮರುಪರಿಶೀಲನೆ, ಹೊಸ ಸೇರ್ಪಡೆ, ಹಳೆಯದ್ದನ್ನು ಕೈಬಿಡುವ ಯೋಜನೆಗಳಾಗುತ್ತಿವೆ. ಕಬ್ಬನ್‌ಪಾರ್ಕ್‌ನಲ್ಲಿ ಕೆಲಸ ವಿಳಂಬವಾಗಿರುವುದಕ್ಕೆ 'ಏನೋ ಒಂದು' ಮಾಡಿ ಮುಗಿಸಿಬಿಡಬೇಕೆಂಬ ಆತುರವಿದೆ. ಒಂದು ವರ್ಷದಲ್ಲಿ ಮುಗಿಯಬೇಕಾದ ರಸ್ತೆಗಳು ಮೂರು ವರ್ಷವಾದರೂ ಇನ್ನೂ ಮುಗಿದಿಲ್ಲ. ಇತ್ತೀಚೆಗೆ 'ಸ್ಮಾರ್ಟ್ ಸಿಟಿ' ಯೋಜನೆಗೆ ಸೇರಿಕೊಂಡಿರುವ ಬಹುಅಂತಸ್ತಿನ ಕಾರ್ ಪಾರ್ಕಿಂಗ್, ಇವಿ ಚಾರ್ಜಿಂಗ್ ಸ್ಟೇಷನ್ ಆರಂಭವೇ ಆಗಿಲ್ಲ. ಹೀಗಾಗಿ 'ಸ್ಮಾರ್ಟ್ ಸಿಟಿ' ಒಂದು ವರ್ಷ ಹೆಚ್ಚಿನ ಕಾಲಾವಕಾಶ ಪಡೆದುಕೊಂಡರೂ 2023ರ ಅಂತ್ಯದವರೆಗೂ ಮುಗಿಯುವ ಲಕ್ಷಣಗಳಿಲ್ಲ.



ಐಸಿಸಿಸಿ: 14 ಇಲಾಖೆಗೆ 'ಒಂದೇ ಸಹಾಯವಾಣಿ'

ನಗರದಲ್ಲಿರುವ 14 ಇಲಾಖೆಗಳ ಬಗ್ಗೆ ದೂರು ಅಥವಾ ಸಮಸ್ಯೆಯನ್ನು ಹೇಳಿಕೊಳ್ಳಲು ನಾಗರಿಕರಿಗೆ ಒಂದೇ ವೇದಿಕೆ 'ಸ್ಮಾರ್ಟ್ ಸಿಟಿ' ಯೋಜನೆಯಡಿ ನಿರ್ಮಾಣವಾಗುತ್ತಿದೆ. ಬಿಬಿಎಂಪಿಯ ಕೇಂದ್ರ ಕಚೇರಿಯಲ್ಲಿ 'ಇಂಟಿಗ್ರೇಟೆಡ್ ಕಮ್ಯಾಂಡ್ ಕಂಟ್ರೋಲ್ ಸೆಂಟರ್' (ಐಸಿಸಿಸಿ) ಸ್ಥಾಪನೆಯಾಗಲಿದೆ. ಈ ಮೂಲಕ ಕರೆ, ಮೊಬೈಲ್ ಆ್ಯಪ್, ಆನ್‌ಲೈನ್ ವೆಬ್, ಕೈಬರಹಗಳಿಂದ ನಾಗರಿಕರು ದೂರು ಸಲ್ಲಿಸಬಹುದು. ಈ ದೂರುಗಳನ್ನು ಐಸಿಸಿಸಿ ಕೇಂದ್ರದಲ್ಲಿ ವಿಂಗಡಿಸಿ, ಸಂಬಂಧಪಟ್ಟ ಇಲಾಖೆಗೆ ರವಾನಿಸಲಾಗುತ್ತದೆ. ಅವರು ತೆಗೆದುಕೊಂಡ ಪರಿಹಾರವನ್ನು ನಾಗರಿಕರಿಗೆ ತಿಳಿಸಲಾಗುತ್ತದೆ. ಈಗ ಇಲಾಖೆಗಳಲ್ಲಿ ಪ್ರತ್ಯೇಕ ಕಂಟ್ರೋಲ್ ರೂಂಗಳಿವೆ. ಅವುಗಳೆಲ್ಲವನ್ನೂ ಒಟ್ಟುಗೂಡಿಸಿ ನಾಗರಿಕರಿಗೆ 'ಏಕಗವಾಕ್ಷಿ' ಕೇಂದ್ರದಂತೆ ಪರಿಹಾರ ಕಲ್ಪಿಸುವುದು ಈ ಯೋಜನೆಯ ಉದ್ದೇಶ. ಇದರ ಒಳಾಂಗಣ ವಿನ್ಯಾಸ ಇನ್ನು ಒಂದು ತಿಂಗಳಲ್ಲಿ ಮುಗಿಯಲಿದೆ. ಬಿಬಿಎಂಪಿಯ ಕಂಟ್ರೋಲ್‌ರೂಂ ಇಲ್ಲಿ ಕಾರ್ಯನಿರ್ವಹಿಸಬಹುದು. ಆದರೆ, 14 ಇಲಾಖೆಗಳ ಒಟ್ಟಾರೆ ದೂರುಗಳ ಸಂಪರ್ಕಕೊಂಡಿಯಾಗಲು ಸಾಕಷ್ಟು ತಿಂಗಳು ಬೇಕಾಗುತ್ತದೆ.

ಯಾವ ಇಲಾಖೆಗಳು?

ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಟಿಸಿ, ನಮ್ಮ ಮೆಟ್ರೊ, ಬೆಂಗಳೂರು ಟ್ರಾಫಿಕ್ ಪೊಲೀಸ್, ಬೆಂಗಳೂರು ನಗರ ಪೊಲೀಸ್, ಬೆಸ್ಕಾಂ, ರಾಜ್ಯ ನೈಸರ್ಗಿಕ ವಿಪತ್ತು ನಿಗಾ ಕೇಂದ್ರ, ಮಾಲಿನ್ಯ ನಿಯಂತ್ರಣ ಮಂಡಳಿ, ಅಗ್ನಿ ಮತ್ತು ತುರ್ತು ಸೇವೆ, ರಾಜ್ಯ ಆರೋಗ್ಯ ಇಲಾಖೆ, ರಾಜ್ಯ ರಿಮೋಟ್ ಸೆನ್ಸಿಂಗ್ ಅಪ್ಲಿಕೇಷನ್ ಸೆಂಟರ್, ಸಾರಿಗೆ ಇಲಾಖೆ, ಕೆಎಸ್‌ಆರ್‌ಟಿಸಿ

ಮಾರ್ಚ್‌ಗೆ ಶೇ 95 ಪೂರ್ಣ

'ಸ್ಥಳೀಯರ ವಿರೋಧ ಹಾಗೂ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ವಿಳಂಬವಾಗಿರುವುದರಿಂದ ಕೆಲವು ಕಡೆ ಕಾಮಗಾರಿ ತಡವಾಗಿದೆ. ಸ್ಮಾರ್ಟ್ ಯೋಜನೆಗಳಲ್ಲಿ ಬಹುತೇಕ ಎಲ್ಲವೂ ಪೂರ್ಣಗೊಂಡಿವೆ. ಶಿಕ್ಷಣ, ಬಸ್, ಆರೋಗ್ಯ ಕ್ಷೇತ್ರ ಎಲ್ಲ ಯೋಜನೆಗಳನ್ನು ಕಾರ್ಯಗತವಾಗಿವೆ. ಮಾರ್ಚ್‌ನಲ್ಲಿ ಎಲ್ಲ ಕಾಮಗಾರಿಗಳು ಶೇ 95ರಷ್ಟು ಮುಗಿಯಲಿವೆ. ಇನ್ನು ಕೆಲವು ಯೋಜನೆಗಳು ಇದೀಗ ಸೇರ್ಪಡೆಯಾಗಿರುವುದರಿಂದ ಅವು ಸ್ವಲ್ಪ ತಡವಾಗಲಿವೆ' ಎಂದು ಸ್ಮಾರ್ಟ್ ಸಿಟಿ ಯೋಜನೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಎನ್. ಸುಶೀಲಮ್ಮ ತಿಳಿಸಿದರು.

ಸಂಕಷ್ಟ ಇನ್ನೂ ಮುಗಿದಿಲ್ಲ

'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ಚೆನ್ನಾಗಿರುವುದನ್ನೆಲ್ಲ ಅಗೆದು ಮತ್ತೆ ಕಾಮಗಾರಿ ಮಾಡಿದ್ದಾರೆ. ವಿಐಪಿಗಳು ಓಡಾಡುತ್ತಾರೋ ಅಲ್ಲಿ ಅಭಿವೃದ್ಧಿ ಮಾಡಿದ್ದಾರೆ. ಉಳಿದ ಕಡೆ ಇನ್ನೂ ಕಸವೇ ಇದೆ. ಅವೆನ್ಯೂ ರಸ್ತೆ ಇದಕ್ಕೆ ಸ್ಪಷ್ಟ ಉದಾಹರಣೆ. ಇಲ್ಲಿ ಜನ ಸಂಕಷ್ಟದಲ್ಲಿದ್ದರೂ ರಸ್ತೆ ಅಭಿವೃದ್ಧಿ ಮೂರು ವರ್ಷದಿಂದ ಮುಗಿದಿಲ್ಲ. ಇನ್ನು ಕಬ್ಬನ್‌ಪಾರ್ಕ್‌ನಲ್ಲಿ ಕೆಲವು ಒಳ್ಳೆಯ ಕೆಲಸ ಆಗಿದೆ. ಆದರೆ ವಿಳಂಬವಾಗಿದೆ. ಆದಷ್ಟು ಬೇಗ ಯೋಜನೆಗಳನ್ನು ಮುಗಿಸಿ, ಅವುಗಳು ಹಾಗೆಯೇ ಉಳಿಯುವಂತೆ ನೋಡಿಕೊಳ್ಳಬೇಕು.

ಡಾ. ಉಮೇಶ್, ಅಧ್ಯಕ್ಷ, ಕಬ್ಬನ್‌ಪಾರ್ಕ್ ನಡಿಗೆದಾರರ ಸಂಘ

ಯಾವ ಕ್ಷೇತ್ರಗಳಲ್ಲಿ ಎಷ್ಟು ವೆಚ್ಚ?





ಬಿಎಂಟಿಸಿಗೆ ನೀಡಲಾಗಿರುವ ಎಲೆಕ್ಟ್ರಿಕ್ ಬಸ್

ಯಾವುದಕ್ಕೆ ಎಷ್ಟು ವೆಚ್ಚ?

₹96 ಕೋಟಿ ಇಂಟಿಗ್ರೇಟೆಡ್ ಕಂಟ್ರೋಲ್ ಸೆಂಟರ್

₹50 ಕೋಟಿ ಇ–ಮೊಬಿಲಿಟಿ: ಬಿಎಂಟಿಸಿಗೆ 90 ಎಲೆಕ್ಟ್ರಿಕಲ್ ಬಸ್

₹17 ಕೋಟಿ ಇವಿ–ಚಾರ್ಜಿಂಗ್ ಸ್ಟೇಷನ್

ಹದಗೆಟ್ಟಿರುವ ಕಸ್ತೂರ ಬಾ ರಸ್ತೆ

ಇವಿ–ಚಾರ್ಜಿಂಗ್ ಸ್ಟೇಷನ್ ನೀಲನಕ್ಷೆ

ಇ–ಚಾರ್ಜಿಂಗ್ ಸ್ಟೇಷನ್ಸ್

ಶೀಘ್ರ ಚಾರ್ಜಿಂಗ್ ಸೌಲಭ್ಯವನ್ನು ಒದಗಿಸುವ ತಾಣ ಇ-ಚಾರ್ಜಿಂಗ್ ಸ್ಟೇಷನ್ಸ್. ವೈಫೈ, ಕಾಫಿ-ಲಾಂಜ್, ಚಾರ್ಜಿಂಗ್ ಹಬ್, ಬಯೊ-ಟಾಯ್ಲೆಟ್, ಸೋಲಾರ್ ರೂಫ್ ಒಳಗೊಂಡಿರುತ್ತದೆ. ₹17 ಕೋಟಿ ವೆಚ್ಚದಲ್ಲಿ ಈ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಎಂಟು ಸ್ಥಳಗಳಲ್ಲಿ ಈ ಸ್ಟೇಷನ್‌ಗಳನ್ನು ಸ್ಥಾಪಿಸುವ ಉದ್ದೇಶವಿತ್ತು. ಆದರೆ, ಇದಿನ್ನು ಅಂತಿಮಗೊಂಡಿಲ್ಲ. ಈ ಯೋಜನೆ ಕಾರ್ಯಗತವಾಗುತ್ತದೆಯೇ ಇಲ್ಲವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಸುದ್ದಿ 2 ನಿಮಿಷ

'ವಿದ್ಯಾರ್ಥಿನಿಯರಿಗೆ ನ್ಯಾಯ ಸಿಗಲಿ'

ಬೆಂಗಳೂರು: 'ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಕೇಳಿಬಂದಿದ್ದು, ಈ ಪ್ರಕರಣದಲ್ಲಿ ಪೊಲೀಸ್ ಇಲಾಖೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆಗ್ರಹಿಸಿದ್ದಾರೆ.

'ಈ ಪ್ರಕರಣವು ಜನರಲ್ಲಿ ಗಾಬರಿ ಉಂಟು ಮಾಡಿದೆ. ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಅಪಾರ ಭರವಸೆಯೊಂದಿಗೆ ಬಡ ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಇಂಥ ಸಂಸ್ಥೆಗಳ ವಿದ್ಯಾರ್ಥಿನಿಲಯಗಳಲ್ಲಿ ಉಳಿದುಕೊಂಡು ಶಿಕ್ಷಣ ಪಡೆಯಲು ಕಳುಹಿಸುತ್ತಾರೆ. ಅವರ ನಂಬಿಕೆ ನಾಶಗೊಳಿಸುವುದು ಮತ್ತು ಮಕ್ಕಳ ಮುಗ್ಧತೆಗೆ ಧಕ್ಕೆ ಉಂಟು ಮಾಡುವುದು ಅಕ್ಷಮ್ಯ ಅಪರಾಧ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಇಂತಹ ಘಟನೆಗಳಿಂದ ಮಕ್ಕಳ ಮನಸ್ಸಿಗೆ ಆಘಾತವಾಗಲಿದೆ. ಪ್ರಕರಣದ ಕುರಿತು ಕೂಲಂಕಷ ತನಿಖೆ ನಡೆಸಬೇಕು. ಪಕ್ಷಪಾತಕ್ಕೆ ಮಣೆ ಹಾಕದೆ ಕಾನೂನು ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ನೊಂದ ಮನಸ್ಸುಗಳಿಗೆ ನ್ಯಾಯ ನೀಡುವುದು ಮೊದಲ ಆದ್ಯತೆ ಆಗಬೇಕು. ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಲ್ಲಿ ಭರವಸೆ ಮೂಡಿಸುವ ವಾತಾವರಣ ನಿರ್ಮಾಣವಾಗಬೇಕು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

'ಸಚಿವ ಸೋಮಣ್ಣ ಸುಳ್ಳುಗಾರ'

ಬೆಂಗಳೂರು: 'ಸಚಿವ ಸೋಮಣ್ಣ ಸುಳ್ಳುಗಾರ. ಅವರ ಬಗ್ಗೆ ಚರ್ಚೆ ಮಾಡದಿರುವುದೇ ಒಳ್ಳೆಯದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಗೋವಿಂದರಾಜನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಸದಸ್ಯ ಜೆಡಿಎಸ್‌ನ ಡಿ. ಉಮಾಶಂಕರ್ ಮತ್ತು ಅವರ ಬೆಂಬಲಿಗರು ಸೇರಿ ಸುಮಾರು 30 ಮಂದಿಯನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ಬಡವರ ಪರವಾದ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದೇನೆ. ಆದರೆ, ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಎಲ್ಲವನ್ನು ನಿಲ್ಲಿಸುತ್ತಿದೆ. ವಸತಿ ಸಚಿವ ವಿ. ಸೋಮಣ್ಣ ಒಬ್ಬ ಸುಳ್ಳುಗಾರ. ಬಡ ಜನರಿಗೆ ಮನೆ ನಿರ್ಮಿಸು ಎಂದರೆ ಕಮಿಷನ್ ಪಡೆದು ತನ್ನ ಮನೆ ಕಟ್ಟಿಸಿಕೊಳ್ಳುತ್ತಿದ್ದಾನೆ' ಎಂದರು.

'ಗೋವಿಂದರಾಜನಗರ ಕ್ಷೇತ್ರದಲ್ಲಿ ಪ್ರಿಯಕೃಷ್ಣ ಅವರು ಸೋಮಣ್ಣ ವಿರುದ್ಧ ಗೆಲ್ಲುವುದು ನೂರಕ್ಕೆ ನೂರು ಖಚಿತ. ಅಷ್ಟೇ ಅಲ್ಲ, ಎಂ. ಕೃಷ್ಣಪ್ಪ ಅವರು ಕೂಡಾ ವಿಜಯನಗರ ಕ್ಷೇತ್ರದಿಂದ ಗೆಲ್ಲಲಿದ್ದಾರೆ. ಆ ಮೂಲಕ, ರಾಜ್ಯದಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಪಘಾತ: ವಸ್ತ್ರವಿನ್ಯಾಸಕಿ ಸಾವು

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಹಾಗೂ ಟ್ರಕ್ ನಡುವೆ ಅಪಘಾತ ಸಂಭವಿಸಿದ್ದು, ವೈಶಾಲಿ ಪಟೇಲ್ (32) ಎಂಬುವವರು ಮೃತಪಟ್ಟಿದ್ದಾರೆ.

'ಗುಜರಾತ್‌ನ ವೈಶಾಲಿ, ವಸ್ತ್ರವಿನ್ಯಾಸಕಿ ಆಗಿದ್ದರು. ಕೆಲಸಕ್ಕಾಗಿ ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಭಾನುವಾರ ಬೆಳಿಗ್ಗೆ ಸ್ನೇಹಿತನ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಅವಘಡ ಸಂಭವಿಸಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Situation Required

WANTED
B.E MECH (Fresher)
ACCOUNTANT (Male)
QUALITY ENGINEER
Rush resume to alm.hr2005@gmail.com

Teachers/ Professors

WANTED TEACHERS with BA/MA (Eng, Hindi and SS) with BEd, BCA/MCA. Salary 14000 to 25000. Contact Sidhartha International School, Peenya, Dasarahalli. Contact No. 9620100046, 9964670328.

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

JOB'S REQUIREMENTS Salary: 18k Banking Fieldwork, Telecaller backend, Kalyanimotors, Sancity. Qualification: SSLC, PUC Degree: 7483096378

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

BUSINESS

Business to Business

Finance

TIRED OF trading with different platforms. Experience completely new form of trading and secure gurantee income on your investment. We will give you best services and new way of trading. For more details visit- www.globalshippingandtrading.com Contact:9699500429/ 9324124538

Business Offers

Finance

NRI'S INVESTMENT
And Finance Available
On Low Interest
Against Properties,
Land&
Building,Sites,Flats,
Converted&
Agriculture Lands
Call:7411265189

OM NAMAH Shivay Loan Avail @ 3.5% per Annum Personal, Business, Projects takeover all types loan. Call & whatsApp ::7678360713.

Business For Sale

ELECTRONIC MANUFACTURING Services Company Engaged in PCB Assembly & Allied works is for Sale in Banashankari 2nd Stage. For more Details Contact: +919901232553. Email: ems.pcb.bsk@gmail.com

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 8527650177

REAL ESTATE SELLING

Sites

Arkavathi Layout

20X30 2 Plots For Sale in Arkavathy Layout- 7th Block EAST & west Facing Contact 9341222019

PERSONAL

Change of Name

USHA DEVI, Wife/o 6396194M HAV/HK, RAMBABOO BAGHEL Vill- Parbati Colony, Budhpura, Lahar, Bhind, Madhya Pradesh, changed name from USHA DEVI to USHA DEVI BAGHEL, 25/08/2022, Notary K.V. Mani, Bangalore

I, SHAMBULING, changed my name-to SHAMBULING KALBURGI dated:25-08-2022. Sworn before notary H.S.Sakalesh Aradhya,Bengaluru.

Book Your Classifieds Ads
Online Log in to dhclassifieds.com
DH DECCAN HERALD ಪ್ರಜಾವಾಣಿ
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಒತ್ತಡವೇ ಆರೋಗ್ಯ ಹದಗೆಡಲು ಕಾರಣ – ಗಣ್ಯರ ಅಭಿಮತ • ಡಾ. ಗಿರಿಧರ ಕಜೆ ಅವರ 'ಪ್ರಕೃತಿ' ಬಿಡುಗಡೆ

ಆಹಾರವೇ ಔಷಧಿ ಆಗಲಿ: ವೀರೇಂದ್ರ ಹೆಗ್ಗಡೆ

ಪ್ರಜಾವಾಣಿ ವಾರ್ತೆ

ಉಜಿರೆ: 'ಪಂಚೇಂದ್ರಿಯಗಳ ನಿಯಂತ್ರಣ ಮತ್ತು ಹಿತ-ಮಿತವಾದ ಆಹಾರ ಸೇವನೆಯಿಂದ ಆರೋಗ್ಯ ರಕ್ಷಣೆ ಮತ್ತು ಆಯುಷ್ಯ ವೃದ್ಧಿಯೊಂದಿಗೆ ನಾವು ಆರೋಗ್ಯ ಭಾಗ್ಯವನ್ನೂ ಹೊಂದಬಹುದು' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹೇಳಿದರು.

ಆಯುರ್ವೇದ ವೈದ್ಯ ಡಾ. ಗಿರಿಧರ ಕಜೆ ಅವರ 'ಪ್ರಕೃತಿ' ಕೃತಿಯನ್ನು ಧರ್ಮಸ್ಥಳದಲ್ಲಿ ಭಾನುವಾರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಆಯುರ್ವೇದ ಪದ್ಧತಿ ಮೇಲಿನ ವಿಶ್ವಾಸ ಹೆಚ್ಚಾಗಬೇಕು. ನಮ್ಮನ್ನು ನಾವು ತಿಳಿದುಕೊಂಡು, ಪೌಷ್ಟಿಕ ಆಹಾರವನ್ನು ಸೇವಿಸಬೇಕು. ಆಹಾರ ಔಷಧಿಯಾಗಬೇಕೇ ವಿನಾ ಔಷಧಿಯೇ ಆಹಾರವಾಗಬಾರದು. ಆಧುನಿಕ ಜೀವನಶೈಲಿ, ಆಹಾರ- ವಿಹಾರ, ಒತ್ತಡದ ಕೆಲಸಗಳೇ ಆರೋಗ್ಯ ಹದಗೆಡಲು ಕಾರಣ. ಶತಮಾನಗಳಿಂದ ಬಳಸುತ್ತಿದ್ದ ಪ್ರಕೃತಿ ಚಿಕಿತ್ಸಾ ಪದ್ಧತಿ, ಯೋಗಾಭ್ಯಾಸ, ಆಯುರ್ವೇದ ಪದ್ಧತಿಯಿಂದ ಆರೋಗ್ಯದ ರಕ್ಷಣೆ ಸಾಧ್ಯ. ಉಡುಪಿಯಲ್ಲಿರುವ ಎಸ್.ಡಿ.ಎಂ. ಆಯುರ್ವೇದ ಆಸ್ಪತ್ರೆಯಲ್ಲಿ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ' ಎಂದು ಹೆಗ್ಗಡೆ ಅವರು ಹೇಳಿದರು.

ಧರ್ಮಸ್ಥಳದಲ್ಲಿ ಭಾನುವಾರ ನಡೆದ ಆಯುರ್ವೇದ ವೈದ್ಯ ಡಾ. ಗಿರಿಧರ ಕಜೆ ಅವರ 'ಪ್ರಕೃತಿ' ಕೃತಿ ಬಿಡುಗಡೆ ಸಮಾರಂಭವನ್ನು ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು. ಲೇಖಕ ಗಿರಿಧರ ಕಜೆ, ರಂಗನಾಥ್ ಭಾರಧ್ವಾಜ್, ಸಚಿವ ಎಸ್. ಅಂಗಾರ ಮೋಹನ ಭಾಸ್ಕರ ಹೆಗಡೆ ಇದ್ದರು

> ಆಯುರ್ವೇದ ಪದ್ಧತಿ ಬಗ್ಗೆ ಉನ್ನತ ಅಧ್ಯಯನ ಹಾಗೂ ಸಂಶೋಧನೆಗಳು ನಡೆಯಬೇಕು. ಸಂಶೋಧನಾ ಫಲಿತಾಂಶವನ್ನು ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಬಳಸಬೇಕು.
> **ಡಿ.ವೀರೇಂದ್ರ ಹೆಗ್ಗಡೆ,** ಧರ್ಮಾಧಿಕಾರಿ

ಸಚಿವ ಎಸ್. ಅಂಗಾರ ಮಾತನಾಡಿ, ಧರ್ಮದ ನೆಲೆಯಲ್ಲಿ ಕರ್ಮ ಮಾಡಿ ಗೌರವಯುತ ಜೀವನ ನಡೆಸಬೇಕು. ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯಿಂದ ನಾವು ವಿಮುಖರಾಗಿರುವುದೇ ಹೆಚ್ಚಿನ ರೋಗಗಳಿಗೆ ಕಾರಣವಾಗಿದೆ. ಡಾ. ಗಿರಿಧರ ಕಜೆ ಅವರ ಆಯುರ್ವೇದ ಚಿಕಿತ್ಸಾ ಪದ್ಧತಿಯ ಶುಶ್ರೂಷೆಯಿಂದ ನಾನು ಕೋವಿಡ್‌ನಿಂದ ಮುಕ್ತಿ ಪಡೆದೆ ಎಂದರು.

ಪತ್ರಕರ್ತ ರಂಗನಾಥ್ ಭಾರದ್ವಾಜ್ ಮಾತನಾಡಿ, 'ಸ್ವಚ್ಛ ಭಾರತ ನಿರ್ಮಾಣದ ಆಶಯದಂತೆ ಸ್ವಸ್ಥ ಭಾರತವೂ ನಮ್ಮ ಗುರಿಯಾಗಬೇಕು. ನಮ್ಮ ಮನಸ್ಸು ಕಲ್ಮಶ ರಹಿತವಾಗಿದ್ದು, ಮಾನವೀಯ ಸಂಬಂಧಗಳೊಂದಿಗೆ ಜೀವನ ಮೌಲ್ಯಗಳನ್ನು ಉಳಿಸಿ, ಬೆಳೆಸಿದಾಗ ಆರೋಗ್ಯವಂತರಾಗಲು ಸಾಧ್ಯ' ಎಂದು ಅವರು ಹೇಳಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮಾತನಾಡಿ, 'ಆಯುರ್ವೇದ ನಮ್ಮ ಜೀವನ ಪದ್ಧತಿಯಾಗಬೇಕು. ಆಗ ನಮ್ಮ ಆರೋಗ್ಯ, ಆಯುಷ್ಯ ಮತ್ತು ಆನಂದ ವೃದ್ಧಿಯಾಗಿ ಸುಖ-ಶಾಂತಿ, ನೆಮ್ಮದಿಯ ಜೀವನ ನಡೆಸಬಹುದು' ಎಂದು ಅವರು ಅಭಿಪ್ರಾಯಪಟ್ಟರು.

'ಪ್ರಕೃತಿ' ಕೃತಿಯ ಬಗ್ಗೆ ಲೇಖಕ ಡಾ. ಗಿರಿಧರ ಕಜೆ ಮಾಹಿತಿ ನೀಡಿದರು. ಸೆಲ್ಕೊ ಸಂಸ್ಥೆಯ ಸಿಇಒ ಮೋಹನ ಭಾಸ್ಕರ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಗೋವಿಂದ ಪ್ರಸಾದ್ ಕಜೆ ಸ್ವಾಗತಿಸಿದರು. ಶ್ರೀನಿವಾಸರಾವ್ ಧರ್ಮಸ್ಥಳ ವಂದಿಸಿದರು.

ಗಿನ್ನಿಸ್ ದಾಖಲೆಗಾಗಿ 250 ಮಂದಿ ಏಕಕಾಲದಲ್ಲಿ ಎರಡು ನಿಮಿಷಗಳವರೆಗೆ ಧನುರಾಸನ ಪ್ರದರ್ಶಿಸಿದ ಕ್ಷಣ

ಅಕ್ಷರ ಯೋಗ ಸಂಸ್ಥೆಯಿಂದ ಗಿನ್ನಿಸ್ ದಾಖಲೆಗಾಗಿ ಯೋಗ

ಬೆಂಗಳೂರು: 'ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್'ಗಾಗಿ ಖ್ಯಾತ ಯೋಗ ಗುರು ಹಿಮಾಲಯನ್ ಸಿದ್ಧ ಅಕ್ಷರ್ ಮಾರ್ಗದರ್ಶನದಲ್ಲಿ ಬೆಟ್ಟಹಲಸೂರು ಸಮೀಪದ ಪಡುಕೋಣೆ-ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್ ಕ್ರೀಡಾಂಗಣದಲ್ಲಿ ಶನಿವಾರ 250 ಯೋಗಪಟುಗಳು ಎರಡು ನಿಮಿಷಗಳ ಧನುರಾಸನ ಭಂಗಿಯನ್ನು ಪ್ರದರ್ಶಿಸಿದರು.

ಗಿನ್ನಿಸ್ ದಾಖಲೆ ಸೃಷ್ಟಿಯಾಗುತ್ತಿದ್ದಂತೆ 250 ಯೋಗಪಟುಗಳು ಹರ್ಷ ವ್ಯಕ್ತಪಡಿಸಿದರು. ಈ ದಾಖಲೆ ಸೃಷ್ಟಿಗಾಗಿ ಯೋಗ ಗುರು ಹಿಮಾಲಯನ್ ಸಿದ್ಧ ಅಕ್ಷರ್ ಕಠಿಣ ತರಬೇತಿ ನೀಡಿದ್ದರು.

'ಯೋಗದ ಶಕ್ತಿಯ ಬಗ್ಗೆ ಜಗತ್ತಿಗೆ ಸಂದೇಶ ಸಾರುವುದು ಮತ್ತು ಯೋಗಾಭ್ಯಾಸದ ಮೂಲಕ ಪ್ರತಿಯೊಬ್ಬರೂ ತಮ್ಮ ಜೀವನವನ್ನು ಹೇಗೆ ಸುಂದರವಾಗಿಸಿಕೊಳ್ಳಬಹುದು ಎಂಬುದನ್ನು ಜಗತ್ತಿಗೆ ತಿಳಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ' ಎಂದು ಹಿಮಾಲಯನ್ ಸಿದ್ಧ ಅಕ್ಷರ್ ಹೇಳಿದರು.

ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವವರು, ದೇಶದ ವಿವಿಧ ರಾಜ್ಯಗಳ ಶಾಲಾ-ಕಾಲೇಜುಗಳು, ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಗಿನ್ನಿಸ್ ದಾಖಲೆಯ ಈ ಪ್ರಯತ್ನದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಹಿಮಾಲಯ ಯೋಗ ಆಶ್ರಮ, ವಿಶ್ವ ಯೋಗ ಸಂಸ್ಥೆ, ಇಂಟರ್ ನ್ಯಾಷನಲ್ ಸಿದ್ಧ ಫೌಂಡೇಷನ್, ಯೂ ಯೋಗ ಸೇರಿ ಹಲವು ಸಂಸ್ಥೆಗಳು ಬೆಂಬಲ ನೀಡಿದ್ದವು.

ಪರಿಶಿಷ್ಟ ವಿದ್ಯಾರ್ಥಿಗಳಿಗಾಗಿ 100 ಹೊಸ ವಿದ್ಯಾರ್ಥಿನಿಲಯ ಸ್ಥಾಪನೆ: ಸಿ.ಎಂ

ಭೋವಿ ಸಮುದಾಯದ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದಲ್ಲಿ ಭೋವಿ ಜನಾಂಗದ ರಾಜ್ಯ ಮಟ್ಟದ ಸಮಾವೇಶವು ಇಲ್ಲಿನ ಅಮಾನಿಕೆರೆಯ ಗಾಜಿನಮನೆಯಲ್ಲಿ ಭಾನುವಾರ ನಡೆಯಿತು.

ವಿವಿಧ ಜಿಲ್ಲೆಗಳಿಂದ ಸಾವಿರಾರು ಜನರು ಭಾಗವಹಿಸಿದ್ದು, ಸಮುದಾಯದ ಬಲ ಪ್ರದರ್ಶಿಸಿದರು. ನಗರ ಹಲವು ಸಮುದಾಯಗಳ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಗುತ್ತಿದೆ.

ಹಿಂದೆ ಕುರುಬರು, ಮಡಿವಾಳರ ರಾಜ್ಯಮಟ್ಟದ ಸಮಾವೇಶ ನಡೆದಿದ್ದವು. ಈಗ ಎರಡು ಸಮುದಾಯಗಳ ಸಮಾವೇಶಗಳು 2 ದಿನಗಳ ಅಂತರದಲ್ಲಿ ನಡೆದಿವೆ.

ರಾಷ್ಟ್ರೀಯ ಸಿದ್ಧರಾಮೇಶ್ವರ ಓಡ್ (ಭೋವಿ) ಯುವ ವೇದಿಕೆಯ ವತಿಯಿಂದ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಭೋವಿ ಜನಜಾಗೃತಿ ಸಮಾವೇಶದಲ್ಲಿ ಮುಖಂಡರು ವಿವಿಧ ಬೇಡಿಕೆಗಳ ಹಕ್ಕೊತ್ತಾಯ ಮಂಡಿಸಿದರು.

'ಕಲ್ಲು ಗಣಿಗಾರಿಕೆ ವೇಳೆ ಮೃತಪಟ್ಟವರ ಕುಟುಂಬಕ್ಕೆ ಸರ್ಕಾರದಿಂದ ₹10 ಲಕ್ಷ ಪರಿಹಾರ ನೀಡಬೇಕು. ಭೋವಿ ಸಮುದಾಯದವರು ಆರ್ಥಿಕವಾಗಿ ಸಬಲರಾಗಲು ಕಲ್ಲುಗಣಿಗಾರಿಕೆಯಲ್ಲಿ ಶೇ 50 ಮೀಸಲಾತಿ ಕಲ್ಪಿಸಬೇಕು. ಪ್ರತಿ ಜಿಲ್ಲೆಗೊಂದು ಸಿದ್ಧರಾಮೇಶ್ವರ ಭವನ ನಿರ್ಮಾಣಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಅವರು ಒತ್ತಾಯಿಸಿದರು.

ಮುಖ್ಯಮಂತ್ರಿ ಬೊಮ್ಮಾಯಿ ಅವರು, 'ಭೋವಿ ಅಭಿವೃದ್ಧಿ ನಿಗಮಕ್ಕೆ ಈ ವರ್ಷ ₹175 ಕೋಟಿ ಯೋಜನೆ ರೂಪಿಸಲು ಸೂಚಿಸಲಾಗಿದೆ. ನಿಗಮಕ್ಕೆ ವಾರದಲ್ಲಿ ಅಧ್ಯಕ್ಷರನ್ನು ನೇಮಿಸಲಾಗುವುದು' ಎಂದರು.

ಪರಿಶಿಷ್ಟ ಜಾತಿ, ಪಂಗಡಗಳ ವಿದ್ಯಾರ್ಥಿಗಳಿಗಾಗಿ 100 ವಿದ್ಯಾರ್ಥಿ ನಿಲಯಗಳನ್ನು ಹೊಸದಾಗಿ ಪ್ರಾರಂಭಿಸಲಾಗುತ್ತಿದೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಮಂಗಳೂರು ಸೇರಿದಂತೆ ಐದು ಕಡೆ 1 ಸಾವಿರ ವಿದ್ಯಾರ್ಥಿಗಳು ಉಳಿದುಕೊಳ್ಳಲು ಅವಕಾಶವಿರುವ ವಿದ್ಯಾರ್ಥಿ ನಿಲಯಗಳನ್ನು ಶುರು ಮಾಡಲಾಗುವುದು' ಎಂದರು.

ಸಮಾವೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಸಂಸದ ಜಿ.ಎಸ್.ಬಸವರಾಜು, ಮುಖ್ಯಮಂತ್ರಿಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಯುವ ವೇದಿಕೆಯ ರಾಷ್ಟ್ರೀಯ ಅಧ್ಯಕ್ಷ ಕೊತ್ತೂರು ಹನುಮಂತರಾಯಪ್ಪ, ಮುಖಂಡರಾದ ಜನಾರ್ದನ ಸ್ವಾಮಿ, ಕೆ.ಆರ್.ನಾಗೇಶ್ ಇದ್ದರು

ಸಾವರ್ಕರ್ ಅಧ್ಯಯನ ಪೀಠಕ್ಕೆ ನೆರವು

ತುಮಕೂರು ವಿಶ್ವವಿದ್ಯಾಲಯದಲ್ಲಿ ವಿನಾಯಕ ದಾಮೋದರ ಸಾವರ್ಕರ್ ಅಧ್ಯಯನ ಪೀಠ ಸ್ಥಾಪನೆ ಮಾಡುವುದು ವಿಶ್ವವಿದ್ಯಾಲಯಕ್ಕೆ ಬಿಟ್ಟ ವಿಚಾರ. ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ದೊರೆತಿದ್ದರೆ ಖಂಡಿತವಾಗಿ ಪೀಠ ಸ್ಥಾಪನೆಯಾಗುತ್ತದೆ. ಅದಕ್ಕೆ ಏನು ಸಹಾಯ ಬೇಕೋ ಅದನ್ನು ಸರ್ಕಾರದಿಂದ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಒಂದೊಂದು ಕಾಲದಲ್ಲಿ ಒಂದೊಂದು ರೀತಿಯ ಅಧ್ಯಯನ ಪೀಠ, ಸಂಶೋಧನಾ ಕೇಂದ್ರ ಶುರು ಮಾಡಿದ್ದಾರೆ. ಅವೆಲ್ಲ ಆಗಿನ ಕಾಲದ ಒತ್ತಡಕ್ಕೆ ಮಾಡಿದ್ದಷ್ಟೆ ಎಂದರು.

ಪ್ರಜಾವಾಣಿ
ಸೋಮವಾರ • ಆಗಸ್ಟ್ 29, 2022

ಸಾರ್ಥಕ, ಯಶಸ್ವಿ 3 ವರ್ಷಗಳು

ಮೂರು ವರ್ಷಗಳ ಅಧಿಕಾರ ಪೂರೈಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್

ದಣಿವರಿಯದ ಶ್ರಮಜೀವಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪ್ರಮುಖರೊಂದಿಗೆ ಶ್ರೀಯುತ ನಳಿನ್ ಕುಮಾರ್ ಕಟೀಲ್

ಸಂಸದ, ಮುಖಂಡ ಶ್ರೀಯುತ ನಳಿನ್ ಕುಮಾರ್ ಕಟೀಲ್ ಅವರು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿ ಮೂರು ವರ್ಷಗಳ ಅಧಿಕಾರವಧಿಯನ್ನು ಯಶಸ್ವಿಯಾಗಿ ಪೂರೈಸುತ್ತಿದ್ದಾರೆ. ಈ ಅವಧಿಯಲ್ಲಿ ಪಕ್ಷವು ರಾಜ್ಯದಲ್ಲಿ ಸಂಘಟನೆಯ ಜೊತೆಗೆ ಆಡಳಿತದ ದೃಷ್ಟಿಯಿಂದಲೂ ಸದೃಢವಾಗಿ ಬೆಳೆದಿದೆ. ಮೂರು ವರ್ಷಗಳಲ್ಲಿ ರಾಜ್ಯದ 37 ಸಂಘಟನಾ ಜಿಲ್ಲೆಗಳಲ್ಲಿ ಪ್ರವಾಸವನ್ನು ಕೈಗೊಂಡಿದ್ದು, ತಳಮಟ್ಟದಿಂದ ಕಾರ್ಯಕರ್ತರು ಮತ್ತು ಜನನಾಡಿಯನ್ನು ಅಧ್ಯಯನ ಮಾಡಿದ್ದಾರೆ.

ರಾಜ್ಯದ ಮಂಡಲಗಳಿಗೆ ಭೇಟಿ ನೀಡಿದ್ದು, ನಿರಂತರವಾಗಿ ಕಾರ್ಯಕರ್ತರ ಸಂಪರ್ಕದಲ್ಲಿ ಇದ್ದರಲ್ಲದೆ, ಅವರಿಗೆ ಉತ್ತೇಜನವನ್ನು ನೀಡಿ ಗಣನೀಯವಾಗಿ ಕೆಲಸ ಮಾಡುವಂತೆಯೂ ಮಾಡಿದ್ದಾರೆ. ಕೇಂದ್ರ ಮತ್ತು ರಾಜ್ಯದ ಎಲ್ಲ ಜನಪರವಾದ ಯೋಜನೆಗಳನ್ನು ಬೂತ್ ಮಟ್ಟಕ್ಕೆ ಒಯ್ಯುವುದರ ಮೂಲಕ ಫಲಾನುಭವಿಗಳಿಗೆ ಸವಲತ್ತುಗಳನ್ನು ತಲುಪಿಸುವ ಕೆಲಸ ಮಾಡುವುದರಲ್ಲಿ ಕಟೀಲ್ ಅವರು ಮುಂಚೂಣಿಯಲ್ಲಿದ್ದಾರೆ.

ನಳಿನ್ ಕುಮಾರ್ ಕಟೀಲ್ ಅವರು ಮೂರು ವರ್ಷಗಳ ಹಿಂದೆ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಾಗ ಹೊಣೆಗಾರಿಕೆಯು ಹೂವಿನ ಹಾದಿ ಏನಾಗಿರಲಿಲ್ಲ. ಆಗಷ್ಟೇ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ರಚನೆಯಾಗಿತ್ತು. ಅತಿವೃಷ್ಟಿಯಿಂದಾಗಿ ನಾಡಿನ ನಾನಾ ಜಿಲ್ಲೆಗಳು ತತ್ತರಿಸಿದ್ದವು. ಪರಿಸ್ಥಿತಿಯನ್ನು ನಿರ್ವಹಿಸಲು ಅವರು ಸರ್ಕಾರದೊಂದಿಗೆ ಸಾತ್ ನೀಡಿದರು. ಪಕ್ಷವು ತನ್ನ ಕಾರ್ಯಕರ್ತರ ಮೂಲಕ ಸಂತ್ರಸ್ತರ ನೆರವಿಗೆ ಧಾವಿಸಿತು. ಪಕ್ಷವು ಮುಳ್ಳಿನ ಹಾದಿಯಂತಿದ್ದ ಸವಾಲುಗಳ ದಾರಿಯನ್ನು ಕಟೀಲ್ ಅವರ ನೇತೃತ್ವದಲ್ಲಿ ದಾಟಿದ್ದು ಈಗ ಇತಿಹಾಸ. ಅದರಲ್ಲೂ ಮಲೆನಾಡು ಹಾಗೂ ಕರಾವಳಿ ಭಾಗದಲ್ಲಿ ಒಂದು ರೀತಿಯ ಸಂಕಷ್ಟವಾದರೆ ಉತ್ತರ ಕರ್ನಾಟಕದ ಭಾಗದಲ್ಲಿ ನೆರೆ ರಾಜ್ಯಗಳ ಜಲಾಶಯಗಳಿಂದ ಹರಿದು ಬಂದ ನೀರು ನರಕ ದೃಶ್ಯ ವಾತಾವರಣವನ್ನೇ ಸೃಷ್ಟಿಸಿತ್ತು ಎಲ್ಲೆಡೆಯೂ ಪಕ್ಷದ ಕಾರ್ಯಕರ್ತರನ್ನು ಸೇವೆಗಿಳಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದು ಇದರ ಬೆನ್ನಲ್ಲೇ ಉಪಚುನಾವಣೆಗಳು ಎದುರಾದವು. ಜನಸೇವೆಯ ಬಲದಿಂದಾಗಿ ಉಪ ಚುನಾವಣೆಗಳನ್ನೂ ಗೆದ್ದು ಬೀಗುವಂತಾಯಿತು.

ಇದಕ್ಕೆ ಜೊತೆಯಾದದ್ದು ಬಿ.ಎಸ್.ಯಡಿಯೂರಪ್ಪ ಮತ್ತು ನಳಿನ್ ಕುಮಾರ್ ಕಟೀಲ್ ಅವರ ಮಾರ್ಗದರ್ಶನದ ಸಾಮೂಹಿಕ ನಾಯಕತ್ವ. ಸರ್ಕಾರರ ಸ್ಥಾಪನೆಯಾದ ಬಳಿಕ ಸಂಪುಟ ವಿಸ್ತರಣೆಗಿದ್ದ ಪೈಪೋಟಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಎಷ್ಟರ ಮಟ್ಟಿಗೆ ತಲೆನೋವಾಗಿತ್ತು. ಪಕ್ಷದ ಅಧ್ಯಕ್ಷರಾದ ನಳಿನ್ ಕುಮಾರ್ ಕಟೀಲ್ ಅವರ ಅವರ ಮುಂದೆಯೂ ಸವಾಲಾಗಿ ಪರಿಣಮಿಸಿತ್ತು. ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಈ ಪರೀಕ್ಷೆಯಲ್ಲಿಯೂ ಯಶಸ್ವಿಯಾಗಿದ್ದು ಈಗ ಇತಿಹಾಸ. ಪಕ್ಷವನ್ನು ಪುನರ್ರಚನೆ ಮಾಡಿ ಸಂಘಟನೆಯನ್ನು ಗಟ್ಟಿಗೊಳಿಸಿದ್ದು ಅಲ್ಲದೆ ಸರ್ಕಾರ ಮತ್ತು ಪಕ್ಷದ ಮಧ್ಯೆ ಸಮನ್ವಯತೆ ಸಾಧಿಸಿದ್ದು ಚರಿತ್ರೆ. ರಾಜ್ಯದಲ್ಲಿ ಪಕ್ಷದ ಅಡಿಪಾಯವನ್ನು ಇನ್ನಷ್ಟು ಬಲಪಡಿಸಿದ ನಳಿನ್ ಕುಮಾರ್ ಕಟೀಲ್ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಯಶಸ್ವಿಯಾಗಿ ಮೂರನೇ ವರ್ಷ ಪೂರೈಸಿದ್ದಾರೆ.

ಮೌನದಲ್ಲಿ ಸಾಧನೆಗೈದ ನಾಯಕ

ದೇಶದಲ್ಲಿ ಹೇಗೋ ಹಾಗೆ ರಾಜ್ಯದಲ್ಲೂ ಭಾರತೀಯ ಜನತಾ ಪಕ್ಷವು ಅತ್ಯಂತ ಪ್ರಮುಖ ರಾಜಕೀಯ ಶಕ್ತಿಯಾಗಿದೆ. ರಾಜ್ಯದಲ್ಲಿ ಬಿಜೆಪಿ ಈ ಮಟ್ಟಕ್ಕೆ ಬೆಳೆಯಲು ನಾಲ್ಕು ದಶಕಗಳ ಪರಿಶ್ರಮ, ಹೋರಾಟ, ಸೈದ್ಧಾಂತಿಕ ಬದ್ಧತೆ ಮತ್ತು ಜನ ಸಮುದಾಯಗಳೊಂದಿಗೆ ನಡೆಸಿರುವ ಜನಪರ ಆಂದೋಲನಗಳು ಮುಂತಾದವುಗಳ ಕೊಡುಗೆ ಮೌಲಿಕವಾಗಿದೆ.

ಸ್ವತಂತ್ರ ಭಾರತದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದಿಟ್ಟ ಮತ್ತು ಗಟ್ಟಿಯಾದ ಪರ್ಯಾಯ ರಾಜಕಾರಣದ ಸಂಸ್ಕೃತಿ ಪ್ರತಿಷ್ಠಾಪಿಸಿದ ಕೀರ್ತಿ ನಿಸ್ಸಂಶಯವಾಗಿ ಬಿಜೆಪಿಗೆ ಸಲ್ಲಬೇಕು. ಈ ನೆಲದ ಸಂಸ್ಕೃತಿ, ಧರ್ಮ, ನಂಬಿಕೆ, ಪರಂಪರೆ, ತಿಳಿವಳಿಕೆಗಳಿಗೆ ಬದ್ಧವಾಗಿರುವ ಪಕ್ಷವೆಂದರೆ, ಅದು ಬಿಜೆಪಿ ಮಾತ್ರ.

ಇಂತಹ ಸಕಾರಾತ್ಮಕ ದೃಷ್ಟಿಕೋನ ಮತ್ತು ನಿಲುವು/ವಿಚಾರಗಳನ್ನು ಹೊಂದಿರುವ ನಮ್ಮ ಪಕ್ಷದ ರಾಜ್ಯ ಘಟಕದ ಚುಕ್ಕಾಣಿ ಹಿಡಿದಿರುವರು ನಳಿನ್ ಕುಮಾರ್ ಕಟೀಲ್ ಅವರು. ರಾಜ್ಯ ಘಟಕದ ಅಧ್ಯಕ್ಷರಾಗಿ ಅವರು ಈಗ ಯಶಸ್ವಿಯಾಗಿ ಮೂರು ವರ್ಷಗಳನ್ನು ಪೂರೈಸಿದ್ದಾರೆ. ಈ ಅವಧಿಯಲ್ಲಿ ಶ್ರೀ ಕಟೀಲ್ ಅವರು ಪಕ್ಷ ಮತ್ತು ಸರ್ಕಾರಗಳ ನಡುವೆ ಯಾವ ಹಂತದಲ್ಲೂ ಸಂಘರ್ಷವಾಗದಂತೆ, ಪರಿಪೂರ್ಣತೆ ಹಾಗೂ ಸಮನ್ವಯತೆ ಸಾಧಿಸಿದ್ದು, ಪಕ್ಷಕ್ಕೆ ಹೊಸ ನೆಲೆ ತಂದುಕೊಡುವಲ್ಲಿ ಅಭೂತಪೂರ್ವ ಯಶಸ್ಸು ಸಾಧಿಸಿದ್ದಾರೆ. ಇದು ನಿಜಕ್ಕೂ ಅಭಿಮಾನದ ಸಂಗತಿಯಾಗಿದೆ.

ಒಂದು ಪಕ್ಷ ಬೆಳವಣಿಗೆಯ ಹಂತದಲ್ಲಿ ಇರುವಾಗ ಅದನ್ನು ಮುನ್ನಡೆಸುವ ಕ್ರಮಕ್ಕೂ, ಗಟ್ಟಿಯಾಗಿ ಬೆಳೆದು ನಿಂತ ಬಳಿಕ ಮುನ್ನಡೆಸುವುದಕ್ಕೂ ವ್ಯತ್ಯಾಸಗಳಿವೆ. ಇವುಗಳಲ್ಲಿ ಎರಡನೆಯ ಬಗೆಯ ಕಾಲಘಟ್ಟದಲ್ಲಿ ಎದುರಾಗುವ ಸವಾಲುಗಳು ಮತ್ತು ಸಂಕೀರ್ಣವಾಗಿರುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಂತಹ ಸವಾಲಿನ ಸಂದರ್ಭದಲ್ಲಿ ಪಕ್ಷದ ಕೇಂದ್ರ ಮತ್ತು ರಾಜ್ಯ ಮಟ್ಟದ ನಾಯಕರು, ಪದಾಧಿಕಾರಿಗಳು ಹಾಗೂ ಲಕ್ಷಾಂತರ ಕಾರ್ಯಕರ್ತರ ಒತ್ತಾಸೆಯಂತೆ ಬಿಜೆಪಿ ರಾಜ್ಯ ಘಟಕದ ಚುಕ್ಕಾಣಿ ಹಿಡಿದವರು ಶ್ರೀ ನಳಿನ್ ಕುಮಾರ್ ಕಟೀಲ್ ಅವರು.

ಶ್ರೀ ಕಟೀಲ್ ಅವರು ಇನ್ನೊಂದೆಡೆ ಪಕ್ಷದ ಸಂಸದರೂ ಆಗಿದ್ದಾರೆ. ಅಂದ ಮೇಲೆ, ಸಹಜವಾಗಿಯೇ ಆ ಹೊಣೆಗಾರಿಕೆಯೂ ಅವರ ಮೇಲಿದೆ. ಇದರ ನಡುವೆಯೂ ಪಕ್ಷ ಮುನ್ನಡೆಸಲು ಹೆಗಲು ಕೊಟ್ಟ ಅವರ ನಿಸ್ಪೃಹತೆ ಮತ್ತು ಪಕ್ಷದ ಪರ ಕಾಳಜಿಗಳು ನಿಜಕ್ಕೂ ಅನುಕರಣೀಯ ಮತ್ತು ಪ್ರಶಂಸಾರ್ಹವಾಗಿವೆ.

ಬಿಜೆಪಿಯು ರಾಜ್ಯದಲ್ಲಿ ಶ್ರೀ ಕಟೀಲ್ ಅವರ ಅಧ್ಯಕ್ಷತೆಯಲ್ಲಿ ಸಾಮಾಜಿಕವಾಗಿ ತನ್ನ ವ್ಯಾಪ್ತಿಯನ್ನು ಹಿಂದೆಂದೂ ಇಲ್ಲದಂತೆ ಹಿಗ್ಗಿಸಿಕೊಂಡಿದೆ. ಜೊತೆಗೆ, ಅವರ ಅವಿರತ ಮತ್ತು ದಣಿವಿಲ್ಲದ ಪ್ರಯತ್ನಗಳಿಂದಾಗಿ ಸಣ್ಣಪುಟ್ಟ ಸಮುದಾಯಗಳ ಜನರೂ ಬಿಜೆಪಿಯನ್ನು ತೆರೆದ ಮನಸ್ಸಿನಿಂದ ಸ್ವೀಕರಿಸುವಂತಹ ವಿದ್ಯಮಾನ ಸಂಭವಿಸಿದೆ. ಇಂತಹ ಒಂದು ಯಶಸ್ಸು, ಉಳಿದ ಯಾವ ಪಕ್ಷಗಳಿಗೂ ಸಾಧ್ಯವಾಗಿಲ್ಲ. ಒಂದು ರಾಜಕೀಯ ಪಕ್ಷಕ್ಕೆ ಇಂತಹ ಯಶಸ್ಸು ಚೇತೋಹಾರಿಯಾದುದು.

ಮೂರು ವರುಷಗಳಲ್ಲಿ ಶ್ರೀ ಕಟೀಲ್ ಅವರ ಮುಂದಾಳತ್ವದಲ್ಲಿ ಬಿಜೆಪಿ ಅನೇಕ ಚುನಾವಣೆ, ಉಪ ಚುನಾವಣೆಗಳನ್ನೂ ಎದುರಿಸಿದೆ. ಇವುಗಳಲ್ಲೆಲ್ಲ ಬಿಜೆಪಿ ಜಯಭೇರಿ ಬಾರಿಸಿದೆ. ಶ್ರೀ ಕಟೀಲ್ ಅವರು ನಿರಂತರವಾಗಿ ಪಕ್ಷದ ಶ್ರೇಯೋಭಿವೃದ್ಧಿ ಮತ್ತು ಬಲವರ್ಧನೆಗಾಗಿ ಹಗಲಿರುಳೂ ರಾಜ್ಯದ ಉದ್ದಗಲ 20ಕ್ಕೂ ಹೆಚ್ಚು ಬಾರಿ ಕರ್ನಾಟಕದ ಮೂಲೆಮೂಲೆಗಳಲ್ಲಿ ಮಿಂಚಿನ ಪ್ರವಾಸ ಕೈಗೊಂಡಿದ್ದಾರೆ. ಇದು ನಿಜಕ್ಕೂ ಒಂದು ವಿಕ್ರಮವೇ ಸರಿ.

ಶ್ರೀ ನಳಿನ್ ಕುಮಾರ್ ಕಟೀಲ್ ಅವರು ಹೆಚ್ಚು ಮಾತನಾಡುವವರಲ್ಲ. ಬದಲಿಗೆ ಮೌನವಾಗಿ ಇದ್ದುಕೊಂಡು ಕಾರ್ಯತತ್ಪರರಾಗುವುದು ಅವರು ಮೈಗೂಡಿಸಿ ಕೊಂಡಿರುವ ವಿಶಿಷ್ಟ ಶೈಲಿಯಾಗಿದೆ. ಕಳೆದ ಮೂರು ವರ್ಷಗಳಲ್ಲಿ ಇವರು ಪಕ್ಷಕ್ಕೆ ತುಂಬಿರುವ ಶಕ್ತಿಗೆ ಬೆಲೆ ಕಟ್ಟಲಾಗದು. ಕಾರ್ಯಕರ್ತರ ನಾಡಿಮಿಡಿತ, ಜನ ಸಮುದಾಯಗಳ ನಿರೀಕ್ಷೆ, ಪಕ್ಷವು ಇಡಬೇಕಾದ ಹೆಜ್ಜೆಗಳು, ಸಮಕಾಲೀನ ರಾಜಕಾರಣದ ಒಲವುಗಳು ಎಲ್ಲವನ್ನೂ ಸರಿಯಾಗಿ ಗ್ರಹಿಸಿ, ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಿರುವ ಹಿರಿಮೆಗೆ ಕಟೀಲ್ ಪಾತ್ರರಾಗಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಮೂರು ವರ್ಷಗಳನ್ನು ಪೂರೈಸಿರುವ ಈ ಶುಭ ಸಂದರ್ಭದಲ್ಲಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಸಲ್ಲಬೇಕು.

ಮಂಗಳೂರಿನಲ್ಲಿದ್ದರೆ ಬೆಳಿಗ್ಗೆಯೇ ಕಚೇರಿಗೆ...

ಸಾಮಾನ್ಯವಾಗಿ ಸರ್ಕಾರಿ ಕಚೇರಿಗಳು ಹಾಗೂ ಜನಪ್ರತಿನಿಧಿಗಳ ಕಚೇರಿಗಳು ಬೆಳಿಗ್ಗೆ 10 ಗಂಟೆಗೆ ತೆರೆದುಕೊಂಡರೆ ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ಎರಡನೇ ಮಹಡಿಯಲ್ಲಿರುವ ದಕ್ಷಿಣ ಕನ್ನಡ ಸಂಸದ ನಳಿನ್ ಕುಮಾರ್ ಕಟೀಲ್ ಅವರ ಕಚೇರಿಯು ಹೆಚ್ಚಾಗಿ ಬೆಳಿಗೆ 7.30 ಕ್ಕೆ ತೆರೆದುಕೊಳ್ಳುತ್ತದೆ. ಸಂಸದರು ಮಂಗಳೂರಿನಲ್ಲಿದ್ದರೆ ಬೆಳಿಗ್ಗೆ 7.30ಕ್ಕೆ ಕಚೇರಿಗೇ ಹಾಜರಾಗುತ್ತಾರೆ.

ನಿಗದಿತ ಪ್ರವಾಸ ಕಾರ್ಯಕ್ರಮವು ಇಲ್ಲದಿದ್ದರೆ ರಾತ್ರಿ 9.00ರ ತನಕವೂ ಕಚೇರಿಯಲ್ಲಿದ್ದು ಜನರಿಂದ ಅಹವಾಲುಗಳನ್ನು ಆಲಿಸುವ, ಪರಿಹಾರ ಸೂಚಿಸುವ ಅಪರೂಪದ ಜನನಾಯಕ, ದಣಿವರಿಯದ ಕಾಯಕಯೋಗಿ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಹಲವಾರು ಅನುದಾನಗಳನ್ನು ತರುವ ಮೂಲಕ ಜಿಲ್ಲೆಯಲ್ಲಿ ಶೈಕ್ಷಣಿಕ, ಔದ್ಯೋಗಿಕ, ಸಾಮಾಜಿಕ ಸೇರಿದಂತೆ ಎಲ್ಲಾ ದಿಕ್ಕುಗಳಲ್ಲಿಯೂ ಅಭಿವೃದ್ಧಿಯತ್ತ ಮುನ್ನಡೆಸುತ್ತಿದ್ದಾರೆ.

ಸಂಸದನಾಗಿ ಹ್ಯಾಟ್ರಿಕ್ ಜಯ

ಜಿಲ್ಲೆಯ ಗ್ರಾಮ ಗ್ರಾಮಗಳಿಗೆ ಭೇಟಿ ನೀಡಿದ್ದ ಅವರು ಕ್ಷೇತ್ರದ ಅಭಿವೃದ್ಧಿ ಹಾಗೂ ಪಕ್ಷದ ಸಂಘಟನೆ ಎರಡೂ ಕೆಲಸವನ್ನು ಯಶಸ್ವಿಯಾಗಿ ಕೊಂಡೊಯ್ಯುವಲ್ಲಿ ಯಶಸ್ಸು ಸಾಧಿಸಿದರು. ಕ್ಷೇತ್ರದ ಜನರ ಮನಗೆದ್ದ ಪರಿಣಾಮ, 2009ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯು ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಹೊಸ ಪ್ರಯೋಗಕ್ಕೆ ಮುಂದಾಯಿತು.

ಸಾಮಾನ್ಯ ಕಾರ್ಯಕರ್ತನಾಗಿದ್ದ ನಳಿನ್ ಕುಮಾರ್ ಕಟೀಲ್ ಅವರನ್ನು ಲೋಕಸಭೆ ಚುನಾವಣೆಯ ಕಣಕ್ಕಿಳಿಸಿತು. ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಬಿ.ಜನಾರ್ದನಪೂಜಾರಿ ಅವರನ್ನು 40,420 ಮತಗಳ ಅಂತರದಿಂದ ತಮ್ಮ ಮೊದಲ ಚುನಾವಣೆಯಲ್ಲಿ ಸೋಲಿಸಿದ ನಳಿನ್ ಅವರು ಸಂಸತ್ ಮೆಟ್ಟಿಲೇರಿದರು. ನಂತರ 2014ರ ಚುನಾವಣೆಯಲ್ಲಿ 1,43,790 ಮತಗಳ ಅಂತರದಿಂದ ಜಯ ಸಾಧಿಸಿದರೆ, ಮುಂದೆ 2019ರ ಚುನಾವಣೆಯಲ್ಲಿ ದಾಖಲೆಯ 2,74,621 ಮತಗಳ ಅಂತರದ ಗೆದ್ದರು. ಈ ಮೂಲಕ ಹ್ಯಾಟ್ರಿಕ್ ಗೆಲುವು ಪಡೆದ ಹಿರಿಮೆಗೆ ಪಾತ್ರರಾದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನಳಿನ್ ಕುಮಾರ್ ಕಟೀಲ್ ಸಾಧನೆಗಳು

ಆಗಸ್ಟ್ 2019ರಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕಟೀಲ್ ಅವರು ಈ ಮೂರು ವರ್ಷಗಳು ಅಂದರೆ 36 ತಿಂಗಳ ಅವಧಿಯಲ್ಲಿ ಒಟ್ಟು 21 ಬಾರಿ ರಾಜ್ಯ ಪ್ರವಾಸ ಮಾಡಿದ್ದಾರೆ.

ಒಟ್ಟು 13 ಬಾರಿ ಸಾಂಸ್ಥಿಕ ಪ್ರವಾಸ ಕೈಗೊಂಡಿದ್ದರೆ, 4ಬಾರಿ ಚುನಾವಣಾ ಪ್ರವಾಸ, 3 ಬಾರಿ ಕೋವಿಡ್ ಪ್ರವಾಸ ಮಾಡಿದ್ದಾರೆ, 1 ಬಾರಿ ಜಿಲ್ಲಾ ಕಚೇರಿ ತಪಾಸಣೆ ಕಾರ್ಯದ ಪ್ರವಾಸವನ್ನು ಕೈಗೊಂಡಿದ್ದಾರೆ. ಅಲ್ಲದೆ, ರಾಜ್ಯದಲ್ಲಿರುವ 312 ಮಂಡಲಗಳ ಪೈಕಿ 304 ಮಂಡಲಗಳಿಗೆ ನೀಡಿ ಕಾರ್ಯಕರ್ತರಿಗೆ ಉತ್ತೇಜನ ನೀಡಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷರಾಗಿ ನಳಿನ್ ಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ ಎದುರಿಸಲಾದ ವಿಧಾನಸಭೆ, ವಿಧಾನ ಪರಿಷತ್ತು, ಸ್ಥಳೀಯ ಸಂಸ್ಥೆಗಳು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಒಕ್ಕೂಟಗಳು ಮತ್ತು ಎಲ್ಲಾ ರೀತಿಯ ಚುನಾವಣೆಗಳಲ್ಲಿ ಬಿಜೆಪಿಯ ಗರಿಷ್ಠ ಸಂಖ್ಯೆಯ ಸ್ಥಾನಗಳನ್ನು ಗೆದ್ದುಕೊಂಡಿದೆ.

ಕೋವಿಡ್ ಅವಧಿಯಲ್ಲಿ ಪ್ರವಾಸ

ಕೋವಿಡ್ ಸಂಕಷ್ಟದ ಅವಧಿಯಲ್ಲಿ 3 ಬಾರಿ ರಾಜ್ಯದಾದ್ಯಂತ ಅಧ್ಯಯನ ಪ್ರವಾಸ ಮತ್ತು ಪರಿಹಾರ ಕಾರ್ಯಕ್ಕೆ ಒತ್ತು ನೀಡಿದ್ದಾರೆ.

ಈ ಅವಧಿಯಲ್ಲಿ 50 ಲಕ್ಷ ಆಹಾರ ಧಾನ್ಯ ಕಿಟ್, 2 ಕೋಟಿ ಆಹಾರ ಪ್ಯಾಕೆಟ್‌ಗಳು, 1.5 ಲಕ್ಷಕ್ಕೂ ಹೆಚ್ಚು ಜನರಿಗೆ ಔಷಧ ವಿತರಣೆ ಮತ್ತು ಮೇಲ್ವಿಚಾರಣೆ ನಡೆಸಲಾಗಿದೆ.

400ಕ್ಕೂ ಹೆಚ್ಚು ವಿಡಿಯೊ ಕಾನ್ಫರೆನ್ಸ್ ಹಾಗೂ 800ಕ್ಕೂ ಹೆಚ್ಚು ಆಡಿಯೊ ಕಾನ್ಫರೆನ್ಸ್‌ಗಳಲ್ಲಿ ಪಾಲ್ಗೊಂಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರೊಂದಿಗೆ ಶ್ರೀಯುತ ನಳಿನ್ ಕುಮಾರ್ ಕಟೀಲ್

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ನಳಿನ್ ಕುಮಾರ್ ಕಟೀಲ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಅಭಿನಂದನೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಅಭಿನಂದನೆ



ಪಕ್ಷ ಇನ್ನಷ್ಟು ಬಲಗೊಳ್ಳಲಿ

"ರಾಜ್ಯ ಬಿಜೆಪಿಯ ಅಧ್ಯಕ್ಷರಾಗಿ ಮೂರು ವರ್ಷಗಳನ್ನು ಅತ್ಯಂತ ಕ್ರಿಯಾಶಲತೆಯಿಂದ ಯಶಸ್ವಿಯಾಗಿ ಪೂರೈಸಿರುವ ಶ್ರೀ ನಳಿನ್ ಕುಮಾರ್ ಕಟೀಲ್ ಅವರಿಗೆ ಹಾರ್ದಿಕ ಅಭಿನಂದನೆಗಳು. ಮುಂದಿನ ದಿನಗಳಲ್ಲಿ ಪಕ್ಷವು ತಮ್ಮ ನೇತೃತ್ವದಲ್ಲಿ ರಾಜ್ಯದಲ್ಲಿ ಇನ್ನಷ್ಟು ಬಲಗೊಳ್ಳಲಿ, ಸರ್ವ ವ್ಯಾಪಿ ಸರ್ವ ಸ್ಪರ್ಶಿಯಾಗಿ ಬೆಳೆಯಲಿ ಎಂದು ಶುಭ ಹಾರೈಸುತ್ತೇನೆ" :

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ದೇವರು ಇನ್ನಷ್ಟು ಶಕ್ತಿ ದಯಪಾಲಿಸಲಿ

ಬಿಜೆಪಿ ರಾಜ್ಯ ಘಟಕದ ರಾಜ್ಯಾಧ್ಯಕ್ಷರಾಗಿ ಯಶಸ್ವಿ ಮೂರು ವರ್ಷಗಳನ್ನು ಪೂರೈಸಿರುವ ಶ್ರೀ ನಳಿನ್ ಕುಮಾರ್ ಕಟೀಲ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ಜನಸೇವೆ ಹಾಗೂ ಪಕ್ಷ ಸಂಘಟನೆ ನಡೆಸುವ ಶಕ್ತಿಯನ್ನು ದೇವರು ಅವರಿಗೆ ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಬಿ.ಎಸ್. ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿಗಳು, ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯರು

ಸರ್ಕಾರ, ಪಕ್ಷದ ನಡುವಿನ ಕೊಂಡಿ

ನಳಿನ್ ಕುಮಾರ್ ಕಟೀಲ್ ಅವರು ರಾಜ್ಯ ಘಟಕದ ಯಶಸ್ವಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಿರಂತರ ಪ್ರವಾಸದಿಂದ ಸಂಘಟನೆಯನ್ನು ವಿಸ್ತರಿಸಿದ್ದಾರೆ. ಪಕ್ಷ, ಸರ್ಕಾರದ ಸಮನ್ವಯದ ಕೊಂಡಿಯಾಗಿ ಎಲ್ಲರನ್ನು ವಿಶ್ವಾಸಕ್ಕೆ ಪಡೆಯುವ ಮೂಲಕ ವಿಶ್ವಾಸದೊಂದಿಗೆ ಪಕ್ಷ ಮುನ್ನಡೆಸುತ್ತಿರುವ ಯಶಸ್ವಿ ಸಂಘಟಕರಾದ ನಳಿನ್‌ಕುಮಾರ್ ಕಟೀಲ್ ಅವರಿಗೆ ಶುಭವಾಗಲಿ. 2023ರ ವಿಧಾನಸಭೆ ಚುನಾವಣೆಯಲ್ಲಿ ನಳಿನ್‌ಕುಮಾರ್ ಕಟೀಲ್ ಅವರ ಸಾರ್ಥಕ, ಪರಿಣಾಮಕಾರಿ ನೇತೃತ್ವದಲ್ಲಿ 145ಕ್ಕೂ ಹೆಚ್ಚು ಸ್ಥಾನವನ್ನು ಗೆದ್ದು ಮತ್ತೆ ಅಧಿಕಾರಕ್ಕೆ ಬರುತ್ತೇವೆ.

ಅರುಣ್ ಸಿಂಗ್, ರಾಜ್ಯ ಬಿಜೆಪಿ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಕಟೀಲ್ ಸಾಧನೆ – ಪ್ರಮುಖರ ಮೆಲುಕು

ಪಕ್ಷವನ್ನು ಎತ್ತರಕ್ಕೇರಿಸಿದ ಹಿರಿಮೆ

ನಳಿನ್ ಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಬಿಜೆಪಿಯು ರಾಜ್ಯದಲ್ಲಿ ಅತ್ಯಂತ ಎತ್ತರದ ಸ್ಥಾನಕ್ಕೆ ತಲುಪಿದೆ. ಇದಕ್ಕೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ನಳಿನ್ ಅವರ ಕಾರ್ಯವೈಖರಿಯೇ ಕಾರಣ.

ಮುರುಗೇಶ ಆರ್. ನಿರಾಣಿ, ಕೈಗಾರಿಕಾ ಸಚಿವ

ಸಂಘಟನಾ ಕೌಶಲಕ್ಕೆ ಮತ್ತೊಂದು ಹೆಸರು

ನಳಿನ್ ಕುಮಾರ್ ಕಟೀಲ್ ಒಬ್ಬ ಅತ್ಯುತ್ತಮ ಸಂಘಟಕ. ಅವರ ಸಂಘಟನಾ ಕೌಶಲದಿಂದಾಗಿಯೇ ರಾಜ್ಯದಲ್ಲಿ ಬಿಜೆಪಿಯು ಪ್ರತಿ ಬೂತ್ ಹಂತದಲ್ಲೂ ಸದೃಢವಾಗಿ ಬೆಳೆದಿದೆ. ಅಧ್ಯಕ್ಷರಾಗಿ ಮೂರು ವರ್ಷಗಳ ಅವಧಿಯಲ್ಲಿ ಜನರನ್ನು ಪಕ್ಷದತ್ತ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಬಿ.ಸಿ. ಪಾಟೀಲ, ಕೃಷಿ ಸಚಿವ

ಸಾಮಾನ್ಯ ಕಾರ್ಯಕರ್ತನ ಜೊತೆಗೂ ಸರಳ ಮಾತು

ನಳಿನ್ ಕುಮಾರ್ ಕಟೀಲ್ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ ಪಕ್ಷದ ಕಾರ್ಯಕರ್ತರ ಜತೆ ನೇರವಾಗಿ ಸಂಪರ್ಕ ಸಾಧಿಸುವ ಕೆಲಸ ಮಾಡಿದ್ದಾರೆ. ಸಾಮಾನ್ಯ ಕಾರ್ಯಕರ್ತ ಕೂಡ ಪಕ್ಷದ ಅಧ್ಯಕ್ಷರ ಜತೆ ಮಾತಾಡಲು ಸಾಧ್ಯ ಎಂಬ ವಾತಾವರಣ ನಿರ್ಮಿಸಿದ್ದಾರೆ. ಇದು ಪಕ್ಷಕ್ಕೆ ಅಗಾಧವಾದ ಶಕ್ತಿ ತುಂಬಿದೆ.

ಹಾಲಪ್ಪ ಆಚಾರ್, ಗಣಿ ಮತ್ತು ಭೂ ವಿಜ್ಞಾನ ಸಚಿವ

ಕಾರ್ಯಕರ್ತರಿಗೆ ಉತ್ತೇಜನ, ಸ್ಫೂರ್ತಿ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಮತ್ತು ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್ ಅವರು ಸಂಘಟನಾತ್ಮಕ ಜಿಲ್ಲೆಗಳಲ್ಲಿ 2/3 ಬಾರಿ ಪ್ರವಾಸ ಮಾಡಿ, ಕಾರ್ಯಕರ್ತರಿಗೆ ಸ್ಫೂರ್ತಿದಾಯಕವಾಗಿದ್ದಾರೆ. ಇವರ ಅವಧಿಯಲ್ಲಿ ನಡೆದ ಎಲ್ಲ ಉಪ ಚುನಾವಣೆಯಲ್ಲಿ ಬಿಜೆಪಿಯ 100ಕ್ಕೆ ಶೇ 98 % ಗೆಲುವುದು ಸಾಧಿಸಿದೆ ಎಂಬುದು ಗಮನಾರ್ಹ. ವಿಧಾನಸಭೆ, ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಗೆಲುವು. ಬಹುಮುಖ್ಯವಾಗಿ ಮೂರು ಸಮಾವೇಶಗಳನ್ನು ಆಯೋಜಿಸಿ, ರಾಜ್ಯದ ಮೂಲೆ ಮೂಲೆ ಪ್ರವಾಸ ಕೈಗೊಳ್ಳುವ ಮೂಲಕ, ಸಂಘಟನೆಗೆ ಹೊಸ ಹುರುಪು ಮೂಡಿಸಿ ಯುವ ಪೀಳಿಗೆಗೆ ಸಂಘಟನಾತ್ಮಕ ಪರಿಚಯ ಮೂಡಿಸಿ 2500ಕ್ಕೂ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳನ್ನು ಗೆಲ್ಲಿಸಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗೆಲುವು ಇವರ ನಾಯಕತ್ವಕ್ಕೆ ಸಂದ ಜಯವಾಗಿದೆ.

ಅಶ್ವತ್ಥನಾರಾಯಣ್, ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ ಕರ್ನಾಟಕ

ಮಹಿಳಾ ಮೋರ್ಚಾಗೆ ಹೆಚ್ಚಿನ ಬಲ

ಶ್ರೀಯುತ ನಳೀನ್ ಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ ರಾಜ್ಯದ ಉದ್ದಗಲಕ್ಕೂ ಸಂಘಟನೆಗೆ ಮೂರು ವರ್ಷಗಳಲ್ಲಿ ವೇಗ ಸಿಕ್ಕಿದೆ. ಬೇರು ಮಟ್ಟದಲ್ಲಿ ಬೂತ್ ಸಮಿತಿ, ಪೇಜ್ ಪ್ರಮುಖ ಹಾಗೂ ಪೇಜ್ ಸಮಿತಿಯ ತನಕ ಕಾರ್ಯಕರ್ತರನ್ನು ಜೋಡಿಸುವ ಕೆಲಸವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಅವರು ಪ್ರೇರಣೆ ನೀಡಿದ್ದಾರೆ. ವಿಶೇಷವಾಗಿ ಮಹಿಳಾ ಮೋರ್ಚಾವು ಹಿಂದೆಂದಿಗಿಂತಲೂ ಹೆಚ್ಚು ಸಕ್ರಿಯವಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ಮಾಡಲು, ಪ್ರಶಿಕ್ಷಣ ವರ್ಗಗಳನ್ನು ನಡೆಸಲು, ರಚನಾತ್ಮಕ ಕಾರ್ಯವನ್ನು ಕೈಗೊಳ್ಳಲು ಅವರ ಮಾರ್ಗದರ್ಶನವು ಅಮೂಲ್ಯವಾಗಿತ್ತು.

ಶ್ರೀಮತಿ ಗೀತಾ ವಿವೇಕಾನಂದ, ಅಧ್ಯಕ್ಷೆ, ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಘಟಕ

ಅಸಾಧಾರಣ ಸಂಘಟನಾ ಚತುರ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಶ್ರೀ ನಳಿನ್ ಕುಮಾರ್ ಕಟೀಲ್ ಸಾಧಾರಣ ವ್ಯಕ್ತಿ, ಆದರೆ ಅಸಾಧಾರಣ ಸಂಘಟನಾ ಚತುರ. ಮೂರು ವರ್ಷ ಪಕ್ಷವನ್ನು ನಡೆಸಿದ ಅವರು ನಾಯಕರು ಮತ್ತು ಕಾರ್ಯಕರ್ತರಲ್ಲಿ ಬೆರೆತು, ಹುರಿದುಂಬಿಸಿ ಇಡೀ ಹಿರಿಯ ಮುತ್ಸದ್ದಿ ರಾಜಕಾರಣಿ ಶ್ರೀ ಬಿ.ಎಸ್.ಯಡಿಯೂರಪ್ಪ ಅವರಿಂದ ಹಿಡಿದು ಸಾಮಾನ್ಯ ಕಾರ್ಯಕರ್ತನವರೆಗೆ ಒಬ್ಬೊಬ್ಬರನ್ನೂ ಜೋಡಿಸುವ ಮೂಲಕ ಪಕ್ಷ ಎಲ್ಲ ಚುನಾವಣೆಗಳಿಗೂ ಸಜ್ಜುಗೊಳಿಸಿದ್ದಾರೆ. ಅವರೊಂದಿಗೆ ಕೆಲಸ ಮಾಡುವುದು ಸಂತೋಷದ ಸಂಗತಿ. ಸರಳ, ಸಜ್ಜನಿಕೆಯಿಂದ ಬೆರೆತರೂ ಕಾರ್ಯದಲ್ಲಿ ಕಟ್ಟುನಿಟ್ಟಾಗಿ ವರ್ತಿಸುವ ಗುಣ ಅವರದು. ನಗುಮುಖದಿಂದಲೇ ಕಾರ್ಯಕರ್ತರನ್ನು ಸೆಳೆದು ಸಾಧನೆ ಮಾಡುವ ಚತುರ ನಾಯಕತ್ವದ ಗುಣಗಳನ್ನು ಯಾರಾದರೂ ಮೆಚ್ಚಲೇಬೇಕು. ಇಂತಹ ಚತುರ ಸ್ನೇಹಜೀವಿ ಅಧ್ಯಕ್ಷರ ಸಹಯೋಗದಲ್ಲಿ ನಾನೂ ಎಸ್.ಸಿ.ಮೋರ್ಚಾ ಅಧ್ಯಕ್ಷರಾಗಿ, ವಕ್ತಾರನಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದು ಸಂತಸದ ಸಂಗತಿ. ಮೂರು ವರ್ಷದ ಸಾಧನೆಗಳಿಗೆ ಶುಭಾಶಯ ಕೋರುತ್ತೇನೆ.

ಛಲವಾದಿ ನಾರಾಯಣಸ್ವಾಮಿ, ಶಾಸಕರು, ಅಧ್ಯಕ್ಷರು, ಎಸ್.ಸಿ.ಮೋರ್ಚಾ ಹಾಗೂ ಮಾಧ್ಯಮ ವಕ್ತಾರರು

ಸಂಘಟನಾ ಚಾತುರ್ಯದ ಅನಾವರಣ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ಸಂಸದರಾದ ಶ್ರೀ ನಳಿನ್‌ಕುಮಾರ್ ಕಟೀಲ್ ಜೀ ಅವರದು ಕ್ರಿಯಾಶೀಲ ನಾಯಕತ್ವ. ಮೂರು ವರ್ಷಗಳಿಂದ ಅಧ್ಯಕ್ಷರು, ಸಂಸದರೂ ಆಗಿರುವ ಕಟೀಲ್ ಜೀ ಅವರ ಕಾರ್ಯವೈಖರಿ ಗಮನಿಸುತ್ತಿದ್ದೇನೆ. ಕೋವಿಡ್ ಸಂಕಷ್ಟದ ನಡುವೆಯೂ ಸಂಸದರ ಕಾರ್ಯಭಾರದ ಜೊತೆ ನಿರಂತರವಾಗಿ ಕರ್ನಾಟಕ ರಾಜ್ಯ ಪ್ರವಾಸ ಮಾಡಿ ತಮ್ಮ ಸಂಘಟನಾ ಸಾಮರ್ಥ್ಯವನ್ನು ಅವರು ಅನಾವರಣಗೊಳಿಸಿದ್ದಾರೆ. ಮಂಡಲ, ಜಿಲ್ಲೆಗಳು ಮಾತ್ರವಲ್ಲದೆ ಎಲ್ಲ ಕಾರ್ಯಕರ್ತರವನ್ನು ತಲುಪಿದ್ದಾರೆ. ತಿಂಗಳಿಗೊಮ್ಮೆ ರಾಜ್ಯ ಪದಾಧಿಕಾರಿಗಳ ಸಭೆ, ಮೂರು ತಿಂಗಳಿಗೆ ಒಂದು ಬಾರಿ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಮತ್ತು ಸಚಿವರ ಜೊತೆ ಸಭೆ ನಡೆಸಿ ಕ್ರಮಬದ್ಧವಾಗಿ ಸರಕಾರ ನಡೆಸಲು ಪಕ್ಷದ ಪರ ಸಲಹೆ, ಸೂಚನೆಗಳನ್ನು ನೀಡುತ್ತಿದ್ದಾರೆ.

ಎಂ. ಶಂಕರಪ್ಪ, ಉಪಾಧ್ಯಕ್ಷರು, ಬಿಜೆಪಿ, ರಾಜ್ಯ ಘಟಕ.

ತಳಹಂತದವರೆಗೂ ಪಕ್ಷಕ್ಕೆ ಬಲ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಮತ್ತು ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್ ಅವರು ಮೂರು ವರ್ಷಗಳ ಅಧ್ಯಕ್ಷ ಅವಧಿಯಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಿ ಕಾರ್ಯಕರ್ತರಿಗೆ ನಿರಂತರವಾಗಿ ಪ್ರೇರಣೆಯನ್ನು ನೀಡುವ ಕೆಲಸ ಮಾಡುತ್ತಿದ್ದಾರೆ. ವೈಚಾರಿಕವಾದ ಸ್ಪಷ್ಟತೆಯ ಜೊತೆಯಲ್ಲೇ ಸಂಘಟನೆಯ ಪದ್ಧತಿಗಳನ್ನು ತಳಹಂತದವರೆಗೆ ಅನುಷ್ಠಾನಗೊಳ್ಳುವಂತೆ ಮಾಡಿದ ಹೆಗ್ಗಳಿಕೆಯು ಅವರದ್ದಾಗಿದೆ. ಅವರ ಅವಧಿಯಲ್ಲಿ ರಾಜ್ಯ ಘಟಕದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಅನುಭವ ಬಹುಕಾಲ ಉಳಿಯುವಂತದ್ದಾಗಿದೆ.

ವಿನಯ್ ಬಿದರೆ, ರಾಜ್ಯ ಕಾರ್ಯದರ್ಶಿ ಬಿಜೆಪಿ ಕರ್ನಾಟಕ

ಅಲ್ಪಸಂಖ್ಯಾತ ಮೋರ್ಚಾಗೆ ಹೆಚ್ಚಿನ ಶಕ್ತಿ

ಶ್ರೀ ನಳಿನ್ ಕುಮಾರ್ ಕಟೀಲ್ ರವರು, ಅಧ್ಯಕ್ಷರಾಗಿ ಮೂರು ವರುಷಗಳಲ್ಲಿ ರಾಜ್ಯದ 39 ಸಂಘಟನಾತ್ಮಕ ಜಿಲ್ಲೆಗಳು ಹಾಗೂ 310 ಮಂಡಲಗಳಲ್ಲಿ 2 ಲಕ್ಷ ಕಿಲೋ ಮೀಟರ್ ಸುತ್ತಾಡಿ ಪಕ್ಷದ ಸಂಘಟನೆ ಮಾಡಿದ್ದಾರೆ. ಎಲ್ಲ ಉಪ ಚುನಾವಣೆಗಳು ಹಾಗೂ ಮೊದಲ ಬಾರಿಗೆ ಹಜ್ ಕಮಿಟಿ ಮತ್ತು ವಕ್ಫ್ ಕಮಿಟಿಗಳಲ್ಲಿಯೂ ಪಕ್ಷವು ಗೆಲವು ಸಾಧಿಸಿರುವುದು ಮತ್ತು ಅಲ್ಪಸಂಖ್ಯಾತ ಮೋರ್ಚಾವನ್ನು ರಾಜ್ಯದಲ್ಲಿ ಸದೃಢವಾಗಿ ಕಟ್ಟುವಲ್ಲಿ ಕಟೀಲ್ ಜೀ ಅವರು ಯಶಸ್ವಿಯಾಗಿದ್ದಾರೆ. ಅವರ ನಾಯಕತ್ವದಲ್ಲಿ ಬಿಜೆಪಿಯು ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸ ನನ್ನದು.

ಸೈಯದ್ ಸಲಾಂ, ಅಧ್ಯಕ್ಷರು, ಅಲ್ಪಸಂಖ್ಯಾತ ಮೋರ್ಚಾ, ಬಿಜೆಪಿ ಕರ್ನಾಟಕ

ಸಂಘಟನಾತ್ಮಕ ಶಕ್ತಿ ತುಂಬಿದ ಹೆಮ್ಮೆಯ ನಾಯಕ



ಬಿಜೆಪಿಯ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾಗಿ ಮೂರು ವರ್ಷ ಅತ್ಯಂತ ಯಶಸ್ವಿಯಾಗಿ ತನ್ನ ಜವಾಬ್ದಾರಿಯನ್ನು ನಿಭಾಯಿಸಿದವರು ಶ್ರೀಯುತ ನಳಿನ್ ಕುಮಾರ್ ಕಟೀಲ್. 3 ವರ್ಷಗಳಲ್ಲಿ 21 ಭಾರಿ ರಾಜ್ಯವ್ಯಾಪಿ ಪ್ರವಾಸವನ್ನು ಮಾಡಿ ಬಿಜೆಪಿಗೆ ಸಂಘಟನಾತ್ಮಕವಾದ ಶಕ್ತಿಯನ್ನು ತುಂಬಿದ ಹೆಮ್ಮೆಯ ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀಯುತ ನಳೀನ್ ಕುಮಾರ್ ಕಟೀಲ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ನಾರಾಯಣ್, ಜಿಲ್ಲಾಧ್ಯಕ್ಷ, ಬೆಂಗಳೂರು ಉತ್ತರ ಜಿಲ್ಲೆ, ಬಿಜೆಪಿ

ಸಂಘಟನಾ ಚತುರ, ಕ್ರಿಯಾಶೀಲ ನಾಯಕ

ಶ್ರೀ ನಳಿನ್ ಕುಮಾರ್ ಕಟೀಲ್ ಅವರು ಭಾರತೀಯ ಜನತಾ ಪಾರ್ಟಿಯ ನಿಜವಾದ ಸ್ಫೂರ್ತಿ, ಶಕ್ತಿಯೇ ಅದರ ಸಂಘಟನಾತ್ಮಕ ಬಲ. ಈ ಸಂಘಟನಾತ್ಮಕ ಶಕ್ತಿ ಪಕ್ಷಕ್ಕೆ ಬರುವುದು ಪ್ರಾಮಾಣಿಕ, ಬದ್ಧತೆಯುಳ್ಳ ಕಾರ್ಯಕರ್ತರನ್ನು ಗುರುತಿಸಿ ಬೆಳೆಸಿದಾಗ ಮಾತ್ರ. ಅತ್ಯಂತ ತಳಮಟ್ಟದಿಂದ, ದೊಡ್ಡ ಜವಾಬ್ದಾರಿಗಳವರೆಗೆ ಬೆಳೆದ ಕಟೀಲ್ ಅವರಲ್ಲಿರುವ ಶಕ್ತಿ ಸಾಮರ್ಥ್ಯ ಗುರುತಿಸುವ ಬಗೆ, ಕಾರ್ಯಕರ್ತರನ್ನು ಸಂಘಟನಾ ಕಾರ್ಯದ ಜೊತೆಗೆ ಜೋಡಿಸುವ ಕೌಶಲವು ಕರಗತವಾಗಿದೆ. ಕಟೀಲ್ ಅವರು, ಬಿಜೆಪಿಯ ಸಾಮಾನ್ಯ ಕಾರ್ಯಕರ್ತ. ಸಂಘಟನೆಯ ಶಕ್ತಿ ಇದ್ದಾಗ ಏನೆಲ್ಲ ಸಾಧಿಸಬಹುದು ಎಂಬುದನ್ನು ಪ್ರತಿಹಂತದಲ್ಲೂ ರುಜುವಾತು ಮಾಡಿದ್ದಾರೆ.
ಮಂಗಳೂರು ಕ್ಷೇತ್ರದ ಸಂಸದರಾಗಿ ಸತತ ಮೂರು ಬಾರಿ ಆಯ್ಕೆಯಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಘಟನೆಯ ಹಿರಿಯರು, ಕಾರ್ಯಕರ್ತರ ಮನ್ನಣೆಗೆ ಪಾತ್ರರಾದವರು. ರಾಜ್ಯ ಘಟಕದ ಅಧ್ಯಕ್ಷರಾಗಿ 3 ವರ್ಷದಲ್ಲಿ ರಾಜ್ಯದ ಸರ್ವ ಜಿಲ್ಲೆಗಳಿಗೂ 21 ಬಾರಿ ಪ್ರವಾಸ ಮಾಡಿದ್ದಾರೆ. 312 ಮಂಡಲಗಳಲ್ಲಿ 304 ಮಂಡಲಗಳಿಗೆ ಭೇಟಿ. ಬೂತ್ ಮಟ್ಟದ ಸಶಕ್ತೀಕರಣ ಸೇರಿ, ಸ್ಥಳೀಯ ಭಿನ್ನಮತ ಸರಿಪಡಿಸಿ ಹೊಸ ಹುಮ್ಮಸ್ಸು ತುಂಬಿದ್ದಾರೆ.

ನನ್ನಂತಹ ಸಾಮಾನ್ಯ ಕಾರ್ಯಕರ್ತನಿಗೆ ಬಿಜೆಪಿ ಯುವಮೋರ್ಚಾ ರಾಜ್ಯ ಅಧ್ಯಕ್ಷ ಸ್ಥಾನ ನೀಡಿ ಗುರುತಿಸಿ ಪ್ರಮುಖ ಜವಾಬ್ದಾರಿ ನೀಡಿದ್ದಕ್ಕೆ, ಸಂಘಟನೆಗೆ ಬಲ ತುಂಬಿದ್ದಕ್ಕೆ ರಾಜ್ಯ ಬಿಜೆಪಿ ಯುವಮೋರ್ಚಾದಿಂದ ಕೃತಜ್ಞತೆ ಸಲ್ಲಿಸುತ್ತೇನೆ. ಅವರ ಮಾರ್ಗದರ್ಶನ, ನೇತೃತ್ವದಲ್ಲಿ ಪಕ್ಷವು ರಾಜ್ಯದಲ್ಲಿ ಇನ್ನಷ್ಟು ಎತ್ತರಕ್ಕೆ ಏರಲಿದೆ ಎಂಬ ವಿಶ್ವಾಸ ನನ್ನದು.

ಡಾ.ಸಂದೀಪ್ ಕುಮಾರ್, ರಾಜ್ಯ ಘಟಕದ ಅಧ್ಯಕ್ಷ, ಬಿಜೆಪಿ ಯುವಮೋರ್ಚಾ, ಕರ್ನಾಟಕ, ಬೆಂಗಳೂರು

ಪ್ರತಿಭೆಯ ಹೊಳಪಿಗೆ 'ವಿವೇಕ'ದ ಬೆಳಕು

ವಿವೇಕ ಸ್ಕಾಲರ್ ಕಾರ್ಯಕ್ರಮಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳು ಮೈಸೂರಿನಲ್ಲಿ ನಡೆದ 'ಯುವಪಯಣ'ದಲ್ಲಿ ಪಾಲ್ಗೊಂಡಿದ್ದ ದೃಶ್ಯ

ಓದಿಯೇ ಏನಾದರೂ ಸಾಧಿಸಬೇಕು ಎಂದು ಕನಸು ಕಟ್ಟಿಕೊಂಡಿದ್ದ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಿವೇಕ ಸ್ಕಾಲರ್ ಪ್ರೋಗ್ರಾಂ ಮೂಲಕ ನೆರವಾಗುತ್ತಿದೆ ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್ ಸಂಸ್ಥೆ. ಈ ಕಾರ್ಯಕ್ರಮವು ನೂರಾರು ಪ್ರತಿಭೆಗಳ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದೆ.

ಎಂ.ಮಹೇಶ

ಮೈಸೂರು ಜಿಲ್ಲೆಯ ಡಿ.ಬಿ.ಕುಪ್ಪೆ ಸಮೀಪದ ವಡಕನಹಳ್ಳಿಯ ಮಣಿಕಂಠ ಗುವಾಹಟಿಯ ಐಐಟಿಯಲ್ಲಿ ಪಿಎಚ್.ಡಿ ಮಾಡುತ್ತಿದ್ದಾರೆ. ಅವರ ಈ ಉನ್ನತ ವ್ಯಾಸಂಗಕ್ಕೆ ಮೆಟ್ಟಿಲಾಗಿದ್ದು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್(ಎಸ್‌ವಿವೈಎಂ) ಸಂಸ್ಥೆಯ ಉಪಕ್ರಮವಾದ ವಿವೇಕ ಸ್ಕಾಲರ್ ಪ್ರೋಗ್ರಾಂ(ವಿಎಸ್‌ಪಿ).

ಮಣಿಕಂಠ ಮಾತ್ರವಲ್ಲ, ಎಚ್.ಡಿ.ಕೋಟೆಯ ಹಂಪಾಪುರದ ಮಹದೇವಸ್ವಾಮಿ ವೈದ್ಯರಾಗಿದ್ದು, ಧಾರವಾಡ ಜಿಲ್ಲೆಯ ಮಾದನಭಾವಿ ಗ್ರಾಮದ ರವಿ ಅಶೋಕ ಕೊಟಬಾಗಿ ಪಿಯುಸಿಯಲ್ಲಿ ಶೇ 97.33 ರಷ್ಟು ಅಂಕ ಪಡೆಯಲು ನೆರವಾಗಿದ್ದು, ನಂಜನಗೂಡು ತಾಲ್ಲೂಕಿನ ಹುರ ಗ್ರಾಮದ ರೈತರ ಮಗಳು ಕಾವ್ಯಾ ಪ್ರಸಾದ್ ಅವರ ಓದಿನ ಕನಸು ಸಾಕಾರಕೊಂಡಿದ್ದು ವಿವೇಕ ಸ್ಕಾಲರ್ ಪ್ರೋಗ್ರಾಂನ ನೆರವಿನಿಂದ. ಈ ಕಾರ್ಯಕ್ರಮ ಇಂಥ ನೂರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರ ಬಾಳಿಗೆ ಬೆಳಕಾಗುವ ಜೊತೆಗೆ ವಿವೇಕವನ್ನೂ ಬೆಳೆಸುತ್ತಿದೆ.

ವಿಎಸ್‌ಪಿ ನೆರವು ಪಡೆದವರಲ್ಲಿಶೇ 30 ರಿಂದ 40ರಷ್ಟು ಮಂದಿ ಮೂಲವಿಜ್ಞಾನದತ್ತ ಹೊರಳಿದ್ದಾರೆ. ಶೇ 25ರಷ್ಟು ಮಂದಿ ಎಂಜಿನಿಯರ್‌ಗಳಾಗಿದ್ದಾರೆ. ಶೇ 10ರಷ್ಟು ಮಂದಿ ಕೃಷಿ ವಿಜ್ಞಾನ, ತೋಟಗಾರಿಕೆ ಅಥವಾ ಪಶುಸಂಗೋಪನಾ ಕ್ಷೇತ್ರದಲ್ಲಿ ಸಾಧಿಸಿದ್ದಾರೆ.

ಪ್ರವೀಣ್ ಕುಮಾರ್ ಎಸ್. ಎಸ್‌ವಿವೈಎಂ ಶಿಕ್ಷಣ ವಿಭಾಗದ ಮುಖ್ಯಸ್ಥ

ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾದ ಎಸ್‌ವಿವೈಎಂ 2007ರಿಂದ ಈ ಕಾರ್ಯಕ್ರಮದ ಮೂಲಕ ಈವರೆಗೆ 1,981 ವಿದ್ಯಾರ್ಥಿಗಳಿಗೆ ಸದ್ದಿಲ್ಲದೆ 'ಬೆಳಕು' ತೋರಿದೆ. ಆರ್ಥಿಕವಾಗಿ ಹಿಂದುಳಿದ, ವಿಶೇಷವಾಗಿ ಸರ್ಕಾರಿ ಶಾಲೆಗಳಲ್ಲಿನ ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಕತ್ತಲು ಕವಿದಿದ್ದ ದಾರಿಗೆಕಂದೀಲು ಹಿಡಿದಿದೆ. 'ವಿಎಸ್‌ಪಿಯಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಶಿಕ್ಷಣದೊಂದಿಗೆ ಮೌಲ್ಯಯುತ ಜೀವನ, ಕೌಶಲ, ಪಠ್ಯೇತರ ಚಟುವಟಿಕೆಗಳನ್ನೂ ಕಲಿಸಲಾಗುತ್ತದೆ. ತುಂಬಾ ಚೆನ್ನಾಗಿ ಪಾಠ ಮಾಡುತ್ತಾರೆ' ಎನ್ನುತ್ತಾರೆ ಹುರ ಗ್ರಾಮದ ಕಾವ್ಯಾ ಪ್ರಸಾದ್

ಏನಿದು ಕಾರ್ಯಕ್ರಮ?

ಪ್ರತಿ ವರ್ಷ ನವೆಂಬರ್‌ನಲ್ಲಿ ಕೊನೆಯ ಎರಡು ಭಾನುವಾರ ಪರೀಕ್ಷೆ ನಡೆಸಲಾಗುತ್ತದೆ. ಆನ್‌ಲೈನ್‌ನಲ್ಲಿ ಪರೀಕ್ಷೆ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ. ಸರಾಸರಿ 5 ಸಾವಿರ ಮಂದಿ ಪರೀಕ್ಷೆಗೆ ಹಾಜರಾಗುತ್ತಾರೆ. ಅದರಲ್ಲಿ ಕಾಲು ಭಾಗದಷ್ಟು ಮಂದಿ ಆಯ್ಕೆ ಮಾಡಿ ಡಿಸೆಂಬರ್‌ನಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. ಮೆರಿಟ್ ಆಧರಿಸಿ ಆಯ್ಕೆ ಮಾಡಲಾಗುತ್ತದೆ.

ನಂತರ ವಿದ್ಯಾರ್ಥಿಗಳ ಮನೆಗಳಿಗ ಭೇಟಿ ನೀಡಿ, ಅವರ ಆರ್ಥಿಕ ಸ್ಥಿತಿಯನ್ನು ಖುದ್ದು ಪರಿಶೀಲಿಸಿದ ನಂತರ ಆಯ್ಕೆ ಅಂತಿಮಗೊಳಿಸಲಾಗುತ್ತದೆ. ಬಹಳ ಅವಶ್ಯ ಇರುವವರಿಗೆ ಸರಗೂರಿನಲ್ಲಿರುವ ಎಸ್‌ವಿವೈಎಂ ಕಾಲೇಜಿನಲ್ಲಿ ಹಾಸ್ಟೆಲ್ ವ್ಯವಸ್ಥೆಯನ್ನೂ ಮಾಡಲಾಗುತ್ತದೆ.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್

ಬೆಂಗಳೂರು, ಧಾರವಾಡ, ಹಾಸನ, ಕಲಬುರಗಿ ಹಾಗೂ ಮೈಸೂರು ಜಿಲ್ಲೆಗಳಲ್ಲಿನ ಆಯ್ದ ಕಾಲೇಜುಗಳಲ್ಲಿ ಪ್ರವೇಶ ಕೊಡಿಸಲಾಗುತ್ತದೆ. 'ವಿಎಸ್‌ಪಿ ವಿದ್ಯಾರ್ಥಿಗಳಿಗೆ' ಆ ಕಾಲೇಜಿನವರು ಶೇ 50 ರಷ್ಟು ರಿಯಾಯಿತಿ ನೀಡಿದರೆ, ಉಳಿದ ದ್ದನ್ನು ವಿವೈಎಸ್‌ಎಂ ಪಾವತಿಸುತ್ತದೆ. ವಿದ್ಯಾರ್ಥಿಯು ₹3 ಸಾವಿರ ಮಾತ್ರ ಪಾವತಿಸಬೇಕು. ಮನೆಯಲ್ಲಿದ್ದುಕೊಂಡು ಓದುವ ವ್ಯವಸ್ಥೆ ಇಲ್ಲದವರಿಗೆ ಹಾಸ್ಟೆಲ್ ಕಲ್ಪಿಸುವಲ್ಲೂ ನೆರವಾಗುತ್ತಾರೆ.

'ನಮ್ಮಂತಹ ಬಡವರು ಶಿಕ್ಷಣ ಪಡೆಯುವುದು ಕಷ್ಟ. ಹಣವಿಲ್ಲದೆ ಮಗಳು ಶ್ರೀಲಕ್ಷ್ಮಿಯನ್ನು ಓದಿಸಲಾಗಲಿಲ್ಲವಲ್ಲಾ ಎಂಬ ಕೊರಗು ಇತ್ತು. ಅದನ್ನು ವಿಎಸ್‌ಪಿ ನಿವಾರಿಸಿತು. ಸರಗೂರು ಕಾಲೇಜಿನಲ್ಲಿಗೆ ಹಾಸ್ಟೆಲ್ ಸಹಿತ ಪ್ರವೇಶ ಕಲ್ಪಿಸಿದೆ. ಅಕ್ಕರೆಯಿಂದ ಕಾಣುತ್ತಿದ್ದಾರೆ. ಗುಣಮಟ್ಟದ ಶಿಕ್ಷಣ ಕೊಡುತ್ತಿದ್ದಾರೆ'

ರಾಮಚಂದ್ರ, ತುಕ್ಕಾನಟ್ಟಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಪಿಯುಸಿಯಲ್ಲಿ ಪಿಸಿಎಂಬಿ ಜೊತೆಗೆ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಶಿಕ್ಷಣವನ್ನೂ ನೀಡಲಾಗುತ್ತದೆ. ಉದ್ಯೋಗ ಮಾರ್ಗದರ್ಶನ, ಮೋಟಿವೇಷನ್ ಕಾರ್ಯಕ್ರಮ, ಆದರ್ಶ ವ್ಯಕ್ತಿಗಳೊಂದಿಗೆ ಸಂವಾದ ನಡೆಸಲಾಗುತ್ತದೆ.

ಉನ್ನತ ಶಿಕ್ಷಣಕ್ಕೂ ನೆರವು

ವರ್ಷದಲ್ಲೊಮ್ಮೆ ಮೈಸೂರಿನ ಕೇಂದ್ರದಲ್ಲಿ 'ಯುವಪಯಣ' ಶೀರ್ಷಿಕೆಯಲ್ಲಿ ಸಮಾರಂಭ ಆಯೋಜಿಸಿ ಮಾರ್ಗದರ್ಶನ ನೀಡಲಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಕೊಡುತ್ತದೆ. ತರಬೇತಿಯಲ್ಲಿ ಯಶಸ್ಸಿನ ಕಥೆಗಳನ್ನು ಹೇಳಲಾಗುತ್ತದೆ. ಪಿಯುಸಿ ನಂತರವೂ ಬೆಂಬಲ ಮುಂದುವರಿಸಲಾಗುತ್ತದೆ. ಉನ್ನತ ಶಿಕ್ಷಣ ಪಡೆಯಲು ಬಯಸುವವರಿಗೂ ಇದೇ ಮಾದರಿ ಅನುಸರಿಸಲಾಗುತ್ತದೆ.

ಕಳೆದ ಸಾಲಿನಲ್ಲಿ 118 ದ್ವಿತೀಯ ಪಿಯು, 131 ಪ್ರಥಮ ಪಿಯು ಮತ್ತು 211 ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಕಲಿಕೆಗಾಗಿ 'ವಿವೇಕ ಸ್ಕಾಲರ್' ಪಡೆಯುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಬಾಲಕಿಯರು/ಯುವತಿಯರು ಎನ್ನುವುದು ವಿಶೇಷ. ಇದಕ್ಕಾಗಿ ಪ್ರತಿ ವರ್ಷ ಸರಾಸರಿ ₹ 2 ಕೋಟಿ ಆಗುತ್ತಿದೆ. ಇದಕ್ಕೆ ದಾನಿಗಳೂ ನೆರವಾಗುತ್ತಿದ್ದಾರೆ. ಕೆಲವರು ವೈಯಕ್ತಿಕವಾಗಿ ಸಹಾಯಹಸ್ತ ಚಾಚಿದರೆ, ಕೆಲವರು ದತ್ತಿ ಸ್ಥಾಪಿಸಿ ಕೊಡುಗೆ ಕೊಡುತ್ತಿದ್ದಾರೆ.

ಈವರೆಗೆ ಪಡೆದವರು ಏನಾಗಿದ್ದಾರೆ?

'ಈವರೆಗೆ ವಿಎಸ್‌ಪಿಯಲ್ಲಿ ನೆರವು ಪಡೆದ 1,200 ಮಂದಿಯ ದಾಖಲೆ ಸಂಗ್ರಹಿಸಿದ್ದೇವೆ. ಶೇ 30 ರಿಂದ 40ರಷ್ಟು ಮಂದಿ ಮೂಲವಿಜ್ಞಾನದತ್ತ ಹೊರಳಿದ್ದಾರೆ. ಶೇ 25ರಷ್ಟು ಮಂದಿ ಎಂಜಿನಿಯರ್‌ಗಳಾಗಿದ್ದಾರೆ. ಶೇ 10ರಷ್ಟು ಮಂದಿ ಕೃಷಿ ವಿಜ್ಞಾನ, ತೋಟಗಾರಿಕೆ ಅಥವಾ ಪಶುಸಂಗೋಪನಾ ಕ್ಷೇತ್ರದಲ್ಲಿ ಸಾಧಿಸಿದ್ದಾರೆ. ಕೆಲವರು ವೈದ್ಯರು, ನರ್ಸ್‌ಗಳಾಗಿದ್ದಾರೆ' ಎಂದು ಎಸ್‌ವಿವೈಎಂ ಶಿಕ್ಷಣ ವಿಭಾಗದ ಮುಖ್ಯಸ್ಥ ಪ್ರವೀಣ್ ಕುಮಾರ್ ಎಸ್. ವಿಎಸ್‌ಪಿಯ ಹಾದಿಯನ್ನು ತೆರೆದಿಟ್ಟರು.

'ನಂಜನಗೂಡು ತಾಲ್ಲೂಕಿನ ಮಣಿಕಂಠಸ್ವಾಮಿ ಎಂಬುವವರ ತಾಯಿ ಕೂಲಿ ಮಾಡುತ್ತಿದ್ದರು. ಆತ, ಪ್ರತಿಭಾವಂತನಾಗಿದ್ದರಿಂದ ವಿಎಸ್‌ಪಿಯಲ್ಲಿ ನೆರವು ಸಿಕ್ಕಿತು. 2018ರಲ್ಲಿ ವೆಟರ್ನರಿ ಸೈನ್ಸ್ ಮುಗಿಸಿ ಬೀದರ್‌ನ ಪಶು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಹೂ ಮಾರುವ ಮಹಿಳೆಯ ಪುತ್ರಿ ಛಾಯಾ ಎಂಬ ವಿದ್ಯಾರ್ಥಿನಿ ಬಿಎಎಂಎಸ್ ಪದವಿ ಮುಗಿಸಿ, ಬೆಂಗಳೂರಿನ ಬಿಎಎಸ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಇಂತಹ ಯಶೋಗಾಥೆಗಳು ವಿಎಸ್‌ಪಿಯ ಹೆಮ್ಮೆ' ಎನ್ನುತ್ತಾರೆ ಅವರು.

ಪ್ರತಿಭೆ ಬೆಳಕಿಗೆ ಬರಲು ಬಡತನವು ಅಡ್ಡಿಯಾಗಬಾರದು ಎನ್ನುವುದು ಎಸ್‌ವಿವೈಎಂ ಉದ್ದೇಶ. ಇದು ಸಂಸ್ಥೆಯ ಸಂಸ್ಥಾಪಕ ಡಾ.ಆರ್.ಬಾಲಸುಬ್ರಹ್ಮಣ್ಯಂ ರೂಪಿಸಿದ ಕಾರ್ಯಕ್ರಮ.

ವಿಎಸ್‌ಪಿ ಕುರಿತ ಹೆಚ್ಚಿನ ಮಾಹಿತಿ ಹಾಗೂ ಸಂಪರ್ಕಕ್ಕೆ: 7760446914 (ಸವಿತಾ, ವಿಎಸ್‌ಪಿ ವ್ಯವಸ್ಥಾಪಕಿ), 9900805429(ಜಯಂತ್).

'ಎಸ್‌ಎಸ್‌ಸಿ'ಗೆ ತಯಾರಿ ಹೇಗೆ ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್) ಪದವಿಯ ನಂತರ ಖಾಸಗಿ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಎಸ್‌ಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೇನೆ. ಕಡಿಮೆ ಸಮಯದಲ್ಲಿ ಸಿದ್ಧತೆ ಹೇಗಿರಬೇಕು ಎಂದು ತಿಳಿಸಿ. ಜೊತೆಗೆ, ಸ್ನಾತಕೋತ್ತರ ಪದವಿಯನ್ನು ಯಾವ ವಿಷಯದಲ್ಲಿ ಪಡೆದರೆ ಸರ್ಕಾರಿ ಕೆಲಸ ಪಡೆಯಲು ಹೆಚ್ಚಿನ ಅವಕಾಶಗಳಿವೆ?

ಸಿದ್ಧಾರ್ಥ ಎಸ್. ಹನೂರು.

ಪರೀಕ್ಷೆಯ ಮಾದರಿ, ಪಠ್ಯಕ್ರಮ, ವಿಷಯದ ಅನುಸಾರ ಶಿಫಾರಸು ಮಾಡಿರುವ ಪುಸ್ತಕಗಳನ್ನು ತಿಳಿದುಕೊಂಡು ನಿಮ್ಮ ವೃತ್ತಿ ಯೋಜನೆಯ ಅನುಗುಣವಾಗಿ ಕಾರ್ಯತಂತ್ರವನ್ನು ರೂಪಿಸಬೇಕು. ಈ ಕೆಳಗೆ ನೀಡಿರುವ ಸಲಹೆಗಳ ಅನುಸಾರ ಸಿದ್ಧತೆಯಿರಲಿ:

- ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ ಖುದ್ದಾಗಿ ಅಥವಾ ಕೋಚಿಂಗ್ ಮುಖಾಂತರ ತಯಾರಿ ಮಾಡಬಹುದು.
- ಪರಿಶ್ರಮ, ಬದ್ಧತೆ, ಆತ್ಮ ವಿಶ್ವಾಸ ಮತ್ತು ಸಮಯದ ನಿರ್ವಹಣೆ ಅತ್ಯಗತ್ಯ.
- ಗೂಗಲ್ ಮತ್ತು ಯೂಟ್ಯೂಬ್‌ನಲ್ಲಿ ಪರೀಕ್ಷೆಗೆ ತಯಾರಿ ನಡೆಸುವ ಕುರಿತ ದೊರೆಯುವ ಉಪಯುಕ್ತ ವಿಡಿಯೊಗಳನ್ನು ವೀಕ್ಷಿಸಿ.
- ಪರೀಕ್ಷೆಯಲ್ಲಿ ಯಶಸ್ವಿಯಾಗಲು ನಿಗದಿತ ವೇಳಾಪಟ್ಟಿಯಂತೆ ಸಮಗ್ರವಾದ ಮತ್ತು ಆಳವಾದ ಓದುವಿಕೆ, ಪುನರಾವರ್ತನೆ ಮತ್ತು ಬರವಣಿಗೆ ಇರಬೇಕು.
- ಸಾಮಾಜಿಕ ತಾಲ-ತಾಣದಿಂದ ದೂರವಿದ್ದರೆ ಏಕಾಗ್ರತೆ ಸುಲಭ.
- ನಿಮಗಿಷ್ಟವಿರುವ ಮತ್ತು ವೃತ್ತಿಯ ನಿರ್ವಹಣೆಗೆ ಅನುಕೂಲವಾಗುವಂತಹ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡುವುದು ಸೂಕ್ತ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://sscportal.in/

3. ಬಿಕಾಂ ಪದವಿ ಮುಗಿಸಿದ್ದೇನೆ. ರಾಜ್ಯಶಾಸ್ತ್ರದಲ್ಲಿ ಎಂ.ಎ ಮಾಡಬೇಕು ಎಂದಿದ್ದೇನೆ. ಅದು ಸಾಧ್ಯವೇ?

ರಮೇಶ್, ದಾವಣಗೆರೆ.

ಸಾಮಾನ್ಯವಾಗಿ ಸ್ನಾತಕೋತ್ತರ ಪದವಿ ಕೋರ್ಸ್ ಮಾಡಲು ಅದೇ ವಿಷಯವನ್ನು ಅಥವಾ ಸಂಬಂಧಪಟ್ಟ ವಿಷಯವನ್ನು ಪದವಿ ಕೋರ್ಸ್‌ಲ್ಲಿ ಓದಿರಬೇಕು. ಆದರೂ, ದೇಶದ ಕೆಲವು ವಿಶ್ವವಿದ್ಯಾಲಯಗಳಲ್ಲಿ (ದೆಹಲಿ ವಿಶ್ವವಿದ್ಯಾಲಯ, ಜವಾಹರ್ ಲಾಲ್ ನೆಹರು ವಿಶ್ವವಿದ್ಯಾಲಯ ಇತ್ಯಾದಿ) ರಾಜ್ಯಶಾಸ್ತ್ರವನ್ನು ಪದವಿ ಕೋರ್ಸ್‌ನಲ್ಲಿ ಓದಿಲ್ಲದಿದ್ದರೂ ಎಂ.ಎ ಪದವಿಯನ್ನು ರಾಜ್ಯಶಾಸ್ತ್ರದಲ್ಲಿ ಮಾಡಲು ಅವಕಾಶವಿದೆ. ಹಾಗೂ, ದೂರ ಶಿಕ್ಷಣದ ಮೂಲಕವೂ ಎಂಎ (ರಾಜ್ಯಶಾಸ್ತ್ರ) ಮಾಡಬಹುದು.

4. ನಾನು ಈಗಾಗಲೇ ಬಿಬಿಎಂ ಪದವಿ ಓದಿ, ಎಂಕಾಂ ಮುಗಿಸಿದ್ದೇನೆ. ಈ ಪದವಿಗಳು ಮುಂದೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಹವಾಗುತ್ತದೆಯೇ?

ಮಂಜುನಾಥ ಕೊಪ್ಪಳ.

ನೀವು ಎಂಕಾಂ ಪದವಿಯಲ್ಲಿ ಕನಿಷ್ಠ ಶೇ 55 ಗಳಿಸಿದ್ದರೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹತೆ ಸಿಗುತ್ತದೆ.

5. ಎಂ.ಎಸ್ಸಿ (ಸಸ್ಯಶಾಸ್ತ್ರ) ಓದಿಕೊಂಡಿದ್ದೇನೆ. ಸರ್ಕಾರಿ ಕೆಲಸಕ್ಕೆ ಸೇರಬೇಕೆಂದು ಮೂರು ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ. ಆದರೂ ಸಫಲವಾಗಿಲ್ಲ. ನನಗೆ ಶಿಕ್ಷಕ ವೃತ್ತಿ ಇಷ್ಟವಿಲ್ಲ. ಬೇರೆ ಖಾಸಗಿ ಕೆಲಸಗಳ ಬಗ್ಗೆ ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

ಎಂ.ಎಸ್ಸಿ (ಸಸ್ಯಶಾಸ್ತ್ರ) ಪದವಿಯ ನಂತರ ಬಯೋಟೆಕ್ನಾಲಜಿ, ಔಷಧ, ಆಹಾರ, ನರ್ಸರೀಸ್, ಪರಿಸರ, ಪ್ರಯೋಗಾಲಯ ಗಳು ಮುಂತಾದ ವಲಯಗಳಲ್ಲಿ ವೃತ್ತಿಯನ್ನು ಅರಸಬಹುದು. ಕೇಂದ್ರ ಸರ್ಕಾರದ ಪರಿಸರ ಸಚಿವಾಲಯ, ಎನರ್ಜಿ ರಿಸರ್ಚ್ ಇನ್‌ಸ್ಟಿಟ್ಯೂಟ್, ವೈಲ್ಡ್ ಲೈಫ್ ಪ್ರೊಟೆಕ್ಷನ್ ಸೊಸೈಟಿ ಮುಂತಾದ ಸಂಸ್ಥೆಗಳಲ್ಲಿಯೂ ವೃತ್ತಿಯನ್ನು ಅರಸಬಹುದು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಚ್‌ಡಿಎಫ್‌ಸಿ ಬಡ್ತೇ ಕದಮ್ ಸ್ಕಾಲರ್‌ಷಿಪ್ 2022-23

ವಿವರ: ಎಚ್‌ಡಿಎಫ್‌ಸಿ ಬಡ್ತೇ ಕದಮ್ ವಿದ್ಯಾರ್ಥಿವೇತನ, ಹಿಂದುಳಿದ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣ ಮುಂದುವರಿಸಲು ಮತ್ತು ಪೂರ್ಣಗೊಳಿಸಲು ಹಣಕಾಸಿನ ನೆರವು ನೀಡುವ ಗುರಿ ಹೊಂದಿರುವ ಕಾರ್ಯಕ್ರಮವಾಗಿದೆ. 11 ಮತ್ತು 12 ನೇ ತರಗತಿ, ಪದವಿಪೂರ್ವ ಕೋರ್ಸ್‌ಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ.

ಅರ್ಹತೆಗಳು (ಅರ್ಜಿ ಸಲ್ಲಿಸುವವರು):

- ಪ್ರಸ್ತುತ 11 ರಿಂದ ಪದವಿಪೂರ್ವ (ಸಾಮಾನ್ಯ ಮತ್ತು ವೃತ್ತಿಪರ) ತರಗತಿಯಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳು
- 11-12 ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ, ಪದವಿಪೂರ್ವ ಕೋರ್ಸ್‌ಗಳು, ಡಿಪ್ಲೊಮಾ/ಐಟಿಐ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ಅನುಸರಿಸುತ್ತಿರುವ ಅಂಗವಿಕಲ ವಿದ್ಯಾರ್ಥಿಗಳು.
- ಮಾನ್ಯತೆ ಪಡೆದ ಕೋಚಿಂಗ್ ಸಂಸ್ಥೆಯಲ್ಲಿ ನೀಟ್, ಜೆಇಇ, ಕ್ಲಾಟ್ ಮತ್ತು ನಿಫ್ಟ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳು.
- ಹಿಂದಿನ ತರಗತಿ ಅಥವಾ ಬೋರ್ಡ್ ಪರೀಕ್ಷೆಗಳಲ್ಲಿ ಕನಿಷ್ಠ ಶೇ 60 ಅಂಕಗಳನ್ನು (ಕೋಚಿಂಗ್ ವಿದ್ಯಾರ್ಥಿಗಳಿಗೆ ಶೇ 80) ಪಡೆದಿರಬೇಕು (ಗಮನಿಸಿ: ಅಂಗವಿಕಲ ವಿದ್ಯಾರ್ಥಿಗಳಿಗೆ ಕನಿಷ್ಠ ಅಂಕಗಳ ಅಗತ್ಯವಿಲ್ಲ).
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹6 ಲಕ್ಷಕ್ಕಿಂತ ಕಡಿಮೆಯಿರಬೇಕು. (ಅಂಗವಿಕಲ ವಿದ್ಯಾರ್ಥಿಗಳಿಗೆ ₹ 8 ಲಕ್ಷಕ್ಕಿಂತ ಕಡಿಮೆಯಿರಬೇಕು).
- ಯಾವುದೇ ರೀತಿಯ ಬಿಕ್ಕಟ್ಟಿನ (ಒಂಟಿ ಪೋಷಕ, ಅನಾಥ, ಕುಟುಂಬದಲ್ಲಿ ಮಾರಣಾಂತಿಕ ಕಾಯಿಲೆ, ಇತ್ಯಾದಿ) ಸ್ಥಿತಿಯನ್ನು ಎದುರಿಸುತ್ತಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ವಿಶೇಷವಾಗಿ ಪರಿಗಣಿಸಲಾಗುತ್ತದೆ.

ಆರ್ಥಿಕ ನೆರವು: ₹ 1 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೆದಿನ: 30-09-2022

ಅರ್ಜಿ ಸಲ್ಲಿಸುವ ವಿಧಾನ : ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/praja/HTPF12

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

ಬಹುಶಿಸ್ತೀಯ ಕೋರ್ಸ್ ಸ್ವ ಉದ್ಯೋಗಕ್ಕೆ ಒತ್ತು

ಕೆ.ಎಂ.ಸತೀಶ್ ಬೆಳ್ಳಕ್ಕಿ

ಪದವಿ, ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗಕ್ಕಾಗಿ ಎದುರು ನೋಡುವುದಕ್ಕಿಂತ ಸ್ವಯಂ ಉದ್ಯೋಗದಾತರಾಗಬೇಕು ಎಂಬ ಆಶಯದೊಂದಿಗೆ ಕೆಲಸ ನಿರ್ವಹಿಸುತ್ತಿದೆ ಗದಗದಲ್ಲಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ.

2017ರಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯವು ಈ ಉದ್ದೇಶ ಸಾಧನೆಯ ಭಾಗವಾಗಿ ವಿದ್ಯಾರ್ಥಿಗಳನ್ನು ಪಠ್ಯಕ್ಕೆ ಮಾತ್ರ ಸೀಮಿತಗೊಳಿಸದೇ ಅವರಿಗೆ ಕಲಿಕೆಯ ಜತೆಜತೆಗೆ ಕೃಷಿ, ಪಶುಸಂಗೋಪನೆ, ಸಸ್ಯಪಾಲನೆ, ಮೀನುಗಾರಿಕೆ, ಕಂಪ್ಯೂಟರ್ ಶಿಕ್ಷಣ, ಸಂವಹನ ಕಲೆ, ಕರಕುಶಲ ಸೇರಿದಂತೆ ವಿವಿಧ ಜೀವನಕೌಶಲಗಳನ್ನು ಕಲಿಸುತ್ತಿದೆ.

ಆರಂಭದ ವರ್ಷಗಳಲ್ಲಿ ಇಲ್ಲಿ(2017-19) ಎಂಬಿಎ, ಎಂಎ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್), ಎಂ.ಎಸ್ಸಿ (ಜಿಯೊಇನ್‌ಫಾರ್‌ಮೆಟಿಕ್ಸ್), ಎಂಎಸ್‌ಡಬ್ಲ್ಯು ಹಾಗೂ ಎಂಕಾಂ ಸ್ನಾತಕೋತ್ತರ ವಿಭಾಗಗಳನ್ನು ಮಾತ್ರ ಹೊಂದಿತ್ತು. 2018- 20ನೇ ಸಾಲಿನಲ್ಲಿ ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ ಹಾಗೂ ಎಂ.ಎಸ್ಸಿಯಲ್ಲಿ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ವಿಭಾಗವನ್ನು ಆರಂಭಿಸಲಾಯಿತು.

ಕಳೆದ ಶೈಕ್ಷಣಿಕ ವರ್ಷದಿಂದಷ್ಟೇ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಪದವಿ ತರಗತಿಗಳನ್ನು ಪರಿಚಯಿಸಲಾಗಿದ್ದು, ವಿದ್ಯಾರ್ಥಿಗಳು ಉತ್ತಮ ಸಂಖ್ಯೆಯಲ್ಲಿ ದಾಖಲಾಗುತ್ತಿದ್ದಾರೆ. 2017 ರಿಂದ 2022ರ ವರೆಗೆ ವಿವಿಧ ಬ್ಯಾಚ್ ಹಾಗೂ ಕೋರ್ಸ್‌ಗಳು ಸೇರಿ 380ಕ್ಕೂ ಹೆಚ್ಚು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ವಿದ್ಯಾರ್ಥಿಗಳ ಉದ್ಯೋಗಾವಕಾಶಕ್ಕಾಗಿ ವಿಶ್ವವಿದ್ಯಾಲಯವು ಹಲವು ಆಯ್ಕೆಗಳನ್ನು ಒದಗಿಸಿದೆ. ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಆಸಕ್ತಿ ಇರುವವರಿಗೆ 'ಆತ್ಮವಿಶ್ವಾಸ' ಎಂಬ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೋಶದ ಮೂಲಕ ತರಬೇತಿ ನೀಡುತ್ತಿದೆ. ಜತೆಗೆ ಸ್ವಯಂ ಉದ್ಯೋಗಕ್ಕೆ ನೆರವಾಗುವಂತಹ ವಿವಿಧ ಕೌಶಲಗಳನ್ನು 'ನೈಪುಣ್ಯ ಕೇಂದ್ರ'ದಲ್ಲಿ ಕಲಿಸುತ್ತಿದೆ. ಪ್ರಸ್ತುತ ಸಾರ್ವಜನಿಕ ಆಡಳಿತ, ಗಣಕ ವಿಜ್ಞಾನ, ಎಂ.ಎ ಅಭಿವೃದ್ಧಿ ಅರ್ಥಶಾಸ್ತ್ರ, ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ನಿರ್ವಹಣೆ ಸೇರಿದಂತೆ ಒಟ್ಟು 10 ಸ್ನಾತಕೋತ್ತರ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ.

ಈಗ ಎನ್‌ಇಪಿ ಪ್ರಕಾರ ನಾಲ್ಕು ವರ್ಷಗಳ ಪದವಿಯನ್ನು ವಿನ್ಯಾಸಗೊಳಿಸಿದ್ದು, ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗ ಗಳಲ್ಲಿ ಲಭ್ಯವಿರುವ ಕೋರ್ಸ್‌ಗಳ ವಿವರ ಇಂತಿದೆ;

ಕಲಾ ವಿಭಾಗ

- ಗ್ರಾಮೀಣಾಭಿವೃದ್ಧಿ ಹಾಗೂ ಸಾರ್ವಜನಿಕ ಆಡಳಿತ (ಪ್ರಥಮ ಸೆಮಿಸ್ಟರ್‌ನಲ್ಲಿರುವ ಕಲಿಕಾ ವಿಷಯಗಳು: ಗ್ರಾಮೀಣ ಅಭಿವೃದ್ಧಿ ಪರಿಚಯ, ಸಾರ್ವಜನಿಕ ಆಡಳಿತದ ತತ್ವಗಳು, ಗ್ರಾಮೀಣ ಸಮಾಜ ಮತ್ತು ಸಂಸ್ಕೃತಿ, ಬೇಸಿಕ್ ಇಂಗ್ಲಿಷ್, ಜೀವನ ಕೌಶಲಗಳು, ಯೋಗ, ಕೃಷಿ ಸಂಬಂಧಿತ ಚಟುವಟಿಕೆಗಳು)

ವಿಜ್ಞಾನ ವಿಭಾಗ

- ಸಾರ್ವಜನಿಕ ಆರೋಗ್ಯ ಹಾಗೂ ಸಮಾಜಕಾರ್ಯ (ಸಾರ್ವಜನಿಕ ಆರೋಗ್ಯ ಪರಿಚಯ, ಬೇಸಿಕ್ಸ್ ಆಫ್ ಹ್ಯೂಮನ್ ಬಯಾಲಜಿ, ಇಂಟ್ರಡಕ್ಷನ್ ಆಫ್ ಸೋಷಿಯಲ್ ವರ್ಕ್, ಫೀಲ್ಡ್ ವರ್ಕ್, ಫಸ್ಟ್ ರೆಸ್ಪಾಂಡರ್ ಆ್ಯಂಡ್ ಬೇಸಿಕ್ ಲೈಫ್ ಸಪೋರ್ಟ್ ಇನ್ ಮೆಡಿಕಲ್ ಎಮರ್ಜೆನ್ಸಿ, ನುಡಿ ಸಂಪದ, ಇಂಗ್ಲಿಷ್ ಬೇಸಿಕ್, ಲೈಫ್ ಆ್ಯಂಡ್ ಪ್ರೊಫೆಷನಲ್ ಸ್ಕಿಲ್ಸ್, ಅಗ್ರಿಕಲ್ಚರ್ ಆ್ಯಂಡ್ ಅಲೈಡ್ ಆ್ಯಕ್ಟಿವಿಟಿ)
- ಕೃಷಿ ವ್ಯವಹಾರ ಹಾಗೂ ಆಹಾರ ಸಂಸ್ಕರಣೆ (ಮ್ಯಾನೇಜ್‌ಮೆಂಟ್ ಪೆಸ್ಟ್ಸ್ ಆ್ಯಂಡ್ ಡೀಸಿಸಸ್ ಇನ್ ಕ್ರಾಪ್ಸ್, ಯುನಿಟ್ ಅಪರೇಷನ್ಸ್ ಇನ್ ಫುಡ್ ಪ್ರೊಸೆಸಿಂಗ್, ನರ್ಸರಿ ಮ್ಯಾನೇಜ್‌ಮೆಂಟ್, ಇಂಡಿಯನ್ ಟ್ರೆಡಿಷನಲ್ ಫುಡ್ಸ್, ಭಾರತದ ಸಂವಿಧಾನ, ಕನ್ನಡ, ಇಂಗ್ಲಿಷ್, ಇಂಡಿಯನ್ ನಾಲೆಡ್ಜ್ ಸಿಸ್ಟಂ, ಪರ್ಫಾರ್ಮಿಂಗ್ ಟ್ರೆಡಿಷನ್ (ಜಾನಪದ)
- ಜಿಯೋ ಇನ್‌ಫಾರ್‌ಮೆಟಿಕ್ಸ್ ಹಾಗೂ ಗಣಕವಿಜ್ಞಾನ (ಫಂಡಮೆಂಟಲ್ಸ್ ಆಫ್ ಕಾರ್ಟೊಗ್ರಫಿ, ಗಣಿತ-1, ಕಂಪ್ಯೂಟರ್ ಫಂಡಮೆಂಟಲ್ಸ್ ಅಂಡ್ ಪೈಥಾನ್ ಪ್ರೋಗ್ರಾಮಿಂಗ್, ಕಾರ್ಟೊಗ್ರಫಿ ಪ್ರಾಕ್ಟಿಕಲ್ಸ್ ಅಂಡ್ ಇನ್-ಹೌಸ್ ಟ್ರೈನಿಂಗ್, ಪೈಥಾನ್ ಪ್ರೋಗ್ರಾಮಿಂಗ್ ಪ್ರಾಕ್ಟಿಕಲ್ಸ್ ಅಂಡ್ ಇನ್ ಹೌಸ್ ಟ್ರೈನಿಂಗ್, ಇಂಟ್ರಡಕ್ಷನ್ ಟು ಜಿಯೊಇನ್‌ಫಾರ್‌ಮೆಟಿಕ್ಸ್, ಆಫೀಸ್ ಆಟೊಮೇಷನ್, ಇಂಗ್ಲಿಷ್ ಬೇಸಿಕ್ಸ್, ಲೈಫ್ ಅಂಡ್ ಪ್ರೊಫೆಷನಲ್ ಸ್ಕಿಲ್ಸ್)

'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಷಯದಲ್ಲಿ ಪದವಿ ಪಡೆದು ಸರ್ಕಾರಿ ನೌಕರಿ ಬೇಕು ಎನ್ನುವವರಿಗೆ ಅವಕಾಶಗಳು ಕಡಿಮೆ. ಆದರೆ, ಖಾಸಗಿ ಕಂಪನಿಗಳಲ್ಲಿ, ಸ್ವಯಂ ಕ್ಷೇತ್ರಗಳಲ್ಲಿ ಉದ್ಯೋಗ ಕಂಡುಕೊಳ್ಳಲು ಸಾಕಷ್ಟು ಅವಕಾಶಗಳಿವೆ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದೇವೆ

ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ, ಕುಲಪತಿ

ಸುಸ್ಥಿರ ಗ್ರಾಮೀಣಾಭಿವೃದ್ಧಿಯ ದೃಷ್ಟಿಯೊಂದಿಗೆ, ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ ಬದ್ಧತೆಯಿಂದ ತೊಡಗಿಸಿಕೊಳ್ಳುವ ಮಾನವ ಸಂಪನ್ಮೂಲ ಸೃಷ್ಟಿಸುವುದು ನಮ್ಮ ವಿಶ್ವವಿದ್ಯಾಲಯದ ಗುರಿಯಾಗಿದೆ.

ಪ್ರೊ.ಬಸವರಾಜ ಎಲ್.ಲಕ್ಕಣ್ಣವರ, ಕುಲಸಚಿವ

ವಾಣಿಜ್ಯ ವಿಭಾಗ

- ಇನೊವೇಷನ್ ಹಾಗೂ ಸ್ಟಾರ್ಟ್‌ಅಪ್ (ಅಕೌಂಟಿಂಗ್ ಫಾರ್ ಬ್ಯುಸಿನೆಸ್, ವ್ಯವಹಾರ ಅರ್ಥಶಾಸ್ತ್ರ, ಫಂಡಮೆಂಟಲ್ಸ್ ಆಫ್ ಸ್ಟಾರ್ಟ್‌ಅಪ್ಸ್ ಆ್ಯಂಡ್ ಎಂಟರ್‌ಪ್ರುನರ್‌ಷಿಪ್, ಅಕೌಂಟಿಂಗ್ ಫಾರ್ ಎವರಿಒನ್, ಫೈನಾನ್ಶಿಯಲ್ ಲಿಟ್ರೆಸಿ, ಕನ್ನಡ ನಾಡು ನುಡಿಯ ಪ್ರಜ್ಞೆ, ಇಂಗ್ಲಿಷ್ ಬೇಸಿಕ್, ಲೈಫ್ ಆ್ಯಂಡ್ ಪ್ರೊಫೆಷನಲ್ ಸ್ಕಿಲ್ಸ್ ಫಂಡಮೆಂಟಲ್ಸ್ ಆರ್ ಅಗ್ರಿಕಲ್ಚರ್ ಆ್ಯಂಡ್ ಅಲೈಡ್ ಆ್ಯಕ್ಟಿವಿಟೀಸ್)

ಪಿಯುಸಿ ಫಲಿತಾಂಶ ಈಗಾಗಲೇ ಪ್ರಕಟಗೊಂಡಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಸಾರ್ವಜನಿಕ ಆರೋಗ್ಯ ಹಾಗೂ ಸಮಾಜ ಕಾರ್ಯ, ಕೃಷಿ ವ್ಯವಹಾರ ಹಾಗೂ ಆಹಾರ ಸಂಸ್ಕರಣೆ, ಜಿಯೋ ಇನ್‌ಫಾರ್‌ಮೆಟಿಕ್ಸ್ ಮತ್ತು ಗಣಕ ವಿಜ್ಞಾನ ಕಲಿಕೆಯಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಸೇರಬಹುದು.

ಸಂಪರ್ಕಕ್ಕೆ: 79752 02206, 77951 00729. ಕೋರ್ಸ್‌ಗಳ ಕುರಿತ ಹೆಚ್ಚಿನ ಮಾಹಿತಿಗೆ https://ksrdpru.ac.in/

ಉದ್ಯೋಗಕ್ಕೆ ವಿವಿಧೆಡೆ ಅವಕಾಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ಪ್ರಸ್ತುತ ಅಮೃತ್ ಗ್ರಾಮ ಪಂಚಾಯಿತಿ ಯೋಜನೆ ಅಡಿಯಲ್ಲಿ ಪ್ರಾಜೆಕ್ಟ್ ಅಸೋಸಿಯೇಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಆರ್‌ಡಿಪಿಆರ್ ವಿಷಯ ಕಲಿತವರು ಖಾಸಗಿ ಸಂಸ್ಥೆಗಳು, ಸರ್ಕಾರಿ ಕಚೇರಿಯಲ್ಲಿ ಕೆಲಸ ಮಾಡಲು ಸಾಕಷ್ಟು ಅವಕಾಶಗಳಿವೆ. ಇದೊಂದು ಬಹುಶಿಸ್ತೀಯ ಕೋರ್ಸ್. ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಬಹುದು. ಜತೆಗೆ ಸ್ವಯಂ ಉದ್ಯೋಗ ಕೈಗೊಳ್ಳುವಂತಹ ಜ್ಞಾನವನ್ನೂ ನೀಡುತ್ತದೆ.

ಸೋಮಶೇಖರ್, 2019-21ನೇ ಸಾಲಿನ ವಿದ್ಯಾರ್ಥಿ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೃಷಿ ಪ್ರಾಯೋಗಿಕ ತರಬೇತಿಯಲ್ಲಿ ತೊಡಗಿರುವುದು

ಬಿರುಸಿನ ಚಟುವಟಿಕೆಗಳಿಗೆ ಸಾಕ್ಷಿಯಾದ ಮಠದ ಆವರಣ ● ಶರಣರ ಪರ –ವಿರೋಧ ಪ್ರತಿಭಟನೆ

ಲೈಂಗಿಕ ಕಿರುಕುಳ: ಸಂಧಾನ ಯತ್ನ ವಿಫಲ?

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧದ ಲೈಂಗಿಕ ಕಿರುಕುಳ ಪ್ರಕರಣದ ಹಿನ್ನೆಲೆಯಲ್ಲಿ ಮಠದ ಭಾನುವಾರ ಬಿರುಸಿನ ಚಟುವಟಿಕೆಗಳಿಗೆ ಸಾಕ್ಷಿಯಾಯಿತು.

ಇನ್ನೊಂದು ಬೆಳವಣಿಗೆಯಲ್ಲಿ ಮಠದ ಭಕ್ತರು ಹಾಘೂ , ಸಲಹಾ ಸಮಿತಿ ಸದಸ್ಯರು ಮಧ್ಯಪ್ರವೇಶಿಸಿ ಪ್ರಕರಣದ ಸುಖಾಂತ್ಯಕ್ಕೆ ಪ್ರಯತ್ನಿಸಿದ್ದಾರೆ ಎಂದು ಹೇಳಲಾಗಿದೆ.

ಮುರುಘಾ ಶರಣರು ಹಾಗೂ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ಅವರನ್ನು ಮುಖಾಮುಖಿ ಮಾಡಿಸಿ ಚರ್ಚೆಗೆ ಅವಕಾಶ ಕಲ್ಪಿಸಲಾಗಿತ್ತು ಎಂದು ಮೂಲಗಳು ಮಾಹಿತಿ ನೀಡಿವೆ.

ತಾಲ್ಲೂಕಿನ ಸಿದ್ದಾಪುರ ಗ್ರಾಮದ ಮನೆಯೊಂದರಲ್ಲಿ ಎಲ್ಲರೂ ಸೇರಿದ್ದರು ಎನ್ನಲಾದ ಚಿತ್ರ ಜಾಲತಾಣದಲ್ಲಿ ಹರಿದಾಡುತ್ತಿದೆ. ವೀರಶೈವ ಲಿಂಗಾಯತ ಸಮುದಾಯದ ಮುಖಂಡರು, ವಿವಿಧ ಸಮುದಾಯದ ಮಠಾಧೀಶರ ಸಮ್ಮುಖದಲ್ಲಿ ಈ ಪ್ರಯತ್ನ ನಡೆದಿದೆ. ಸಾಕ್ಷ್ಯಾಧಾರಗಳನ್ನು ಪರಸ್ಪರ ಹಸ್ತಾಂತರ ಮಾಡಿಕೊಂಡು ಸುಖಾಂತ್ಯಗೊಳಿಸಿಕೊಳ್ಳುವ ಉದ್ದೇಶ ಈಡೇರಲಿಲ್ಲ ಎಂಬ ಮಾತೂ ಕೇಳಿಬಂದಿದೆ.

ಶರಣರ ಪರ-ವಿರುದ್ಧ ಪ್ರತಿಭಟನೆ: ಆರೋಪಿ ಸ್ಥಾನದಲ್ಲಿರುವ ಶಿವಮೂರ್ತಿ ಮುರುಘಾ ಶರಣರ ಪರ ಹಾಗೂ ವಿರುದ್ಧ ಪ್ರತಿಭಟನೆಗಳು ಭಾನುವಾರ ನಡೆದವು. ಶರಣರನ್ನು ಬಂಧಿಸದಂತೆ ಭಕ್ತರು ಹಾಗೂ ಪ್ರಕರಣವನ್ನು ಉನ್ನತ ತನಿಖೆಗೆ ಒಳಪಡಿಸುವಂತೆ ಸಂಘಟನೆಗಳ ಮುಖಂಡರು ಪ್ರತ್ಯೇಕವಾಗಿ ಪ್ರತಿಭಟಿಸಿದರು.

ಶಿವಮೂರ್ತಿ ಮುರುಘಾ ಶರಣರನ್ನು ಭೇಟಿಯಾಗಿದ್ದ ಭಕ್ತರ ಗುಂಪು ಮೌನ ಪ್ರತಿಭಟನೆ ಆರಂಭಿಸಿತು. ಎಚ್ಚರಿಕೆಯ ಹೆಜ್ಜೆ ಇಡಬೇಕು, ಶರಣರನ್ನು ಬಂಧಿಸಬಾರದು ಎಂಬ ಒತ್ತಾಯ ಕೇಳಿಬಂತು. ಕಾನೂನು ಕ್ರಮ ಕೈಗೊಂಡರೆ ಪರಿಸ್ಥಿತಿ ಬಿಗಡಾಯಿಸುತ್ತದೆ ಎಂಬ ಮಾತುಗಳು ಕೇಳಿಬಂದವು

ಬಾಲಕಿಯರ ಬಾಲಮಂದಿರದ ಎದುರು ಸೇರಿದ್ದ ಮತ್ತೊಂದು ಗುಂಪು, ಆರೋಪಕ್ಕೆ ಗುರಿಯಾಗಿರುವ ಶರಣರ ವಿರುದ್ಧ ಆಕ್ರೋಶ ಹೊರಹಾಕಿತು. ಸಂತ್ರಸ್ತ ಬಾಲಕಿಯರಿಗೆ ಧೈರ್ಯ ತುಂಬುವ ಘೋಷಣೆ ಕೂಗಿತು. ನಿಷ್ಪಕ್ಷಪಾತ ತನಿಖೆ ನಡೆಸುವ ಕುರಿತು ಅನುಮಾನಗಳಿವೆ ಎಂದು ಗುಂಪು ಆರೋಪಿಸಿತು.

ಪ್ರಕರಣದ ಉನ್ನತ ತನಿಖೆಗೆ ಆಗ್ರಹಿಸಿ ದಲಿತ ಸಂಘಟನೆಗಳ ಪ್ರಮುಖರು ಚಿತ್ರದುರ್ಗದ ಬಾಲಕಿಯರ ಬಾಲಭವನದ ಎದುರು ಭಾನುವಾರ ಪ್ರತಿಭಟಿಸಿದರು

> **ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಆಘಾತಕಾರಿ ಆಪಾದನೆ ಕೇಳಿಬಂದಿದೆ. ಮಠಕ್ಕೆ ಉತ್ತಮ ಹೆಸರಿದೆ. ಅದನ್ನು ಮತ್ತೆ ಎತ್ತಿಹಿಡಿಯುವ ವಿಶ್ವಾಸವಿದೆ**
> **ಮಹಿಮ ಪಟೇಲ್,**
> ಜೆಡಿಯು ರಾಜ್ಯ ಘಟಕದ ಅಧ್ಯಕ್ಷ

> **ಪೀಠಾಧ್ಯಕ್ಷರ ಮೇಲಿನ ಆರೋಪ ಸತ್ಯಕ್ಕೆ ದೂರ ಗುರುಗಳ ಧರ್ಮ ಸಂಸ್ಕಾರ ಮತ್ತು ಹೆಜ್ಜೆಗುರುತು ಗಮನಿಸಿದರೆ ಅಹಿತಕರ ಘಟನೆ ನಡೆದಿರಲು ಸಾಧ್ಯವಿಲ್ಲ**
> **ಎಚ್.ಎಸ್. ಶಿವಶಂಕರ್**
> ಮಾಜಿ ಶಾಸಕ, ಹರಿಹರ

ತನಿಖೆಯಲ್ಲಿ ಪೊಲೀಸರು ಸ್ವತಂತ್ರರು: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಪ್ರಕರಣದ ಸತ್ಯಾಂಶ ತನಿಖೆ ನಂತರವೇ ತಿಳಿಯಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಈ ಪ್ರಕರಣದ ತನಿಖೆಯಲ್ಲಿ ಪೊಲೀಸರು ಸಂಪೂರ್ಣ ಸ್ವತಂತ್ರರು. ತನಿಖೆಯ ಬಳಿಕ ಸತ್ಯ ಏನೆಂಬುದು ಹೊರಬರಲಿದೆ' ಎಂದರು.

'ಇದು ಪ್ರಮುಖ ಪ್ರಕರಣ. ಪೋಕ್ಸೊ ಪ್ರಕರಣ ದಾಖಲಾಗುವುದರ ಜತೆಯಲ್ಲೇ ಚಿತ್ರದುರ್ಗದಲ್ಲಿ ಅಪಹರಣ ಪ್ರಕರಣವೂ ದಾಖಲಾಗಿದೆ. ಎರಡೂ ಪ್ರಕರಣಗಳ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ನಾವು ಪ್ರಕರಣದ ಕುರಿತು ಮಾತನಾಡುವುದು, ವ್ಯಾಖ್ಯಾನ ಮಾಡುವುದು ತನಿಖೆಯ ದೃಷ್ಟಿಯಿಂದ ಸರಿಯಲ್ಲ' ಎಂದು ಹೇಳಿದರು.

'ಮುರುಘಾ ಶ್ರೀ ವಿರುದ್ಧ ಷಡ್ಯಂತ್ರ ನಡೆದಂತಿದೆ'

ಮೈಸೂರು: 'ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಮೇಲೆ ಮಾಡಿರುವ ಆರೋಪವು ಷಡ್ಯಂತ್ರದ ರೀತಿ ಇದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಪ್ರಕರಣದ ಬಗ್ಗೆ ಸಂಪೂರ್ಣ ತನಿಖೆಯ ಅಗತ್ಯವಿದೆ. ಬಳಿಕವಷ್ಟೆ ಸತ್ಯಾಸತ್ಯತೆ ಗೊತ್ತಾಗಲಿದೆ' ಎಂದು ಹೇಳಿದರು.

'ಉತ್ತರ ಕರ್ನಾಟಕದಲ್ಲಿ ಮಹದಾಯಿ ಸೇರಿದಂತೆ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಪಕ್ಷದಿಂದ ದೊಡ್ಡ ಮಟ್ಟದಲ್ಲಿ ಪಾದಯಾತ್ರೆ ನಡೆಸಲು ಯೋಜಿಸಲಾಗಿದೆ' ಎಂದರು.

ಗುತ್ತಿಗೆದಾರರಿಗೆ ಮಾನನಷ್ಟ ಮೊಕದ್ದಮೆ ನೋಟಿಸ್ ಇಂದು

ಕೋಲಾರ: 'ಗುತ್ತಿಗೆದಾರರಿಗೆ ಸೋಮವಾರ ಬೆಳಿಗ್ಗೆ 11ಗಂಟೆಗೆ ಮಾನನಷ್ಟ ಮೊಕದ್ದಮೆ ನೋಟಿಸ್ ರವಾನಿಸುವೆ. ಏಳು ದಿನಗಳಲ್ಲಿ ಮಾಧ್ಯಮಗಳ ಮೂಲಕ ಬಹಿರಂಗವಾಗಿ ಕ್ಷಮೆ ಕೋರಬೇಕು. ಇಲ್ಲವೇ ಆರೋಪಕ್ಕೆ ಪೂರಕ ದಾಖಲೆ ಬಿಡುಗಡೆ ಮಾಡಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಅವರು ಗುತ್ತಿಗೆದಾರರಿಗೆ ಸವಾಲು ಹಾಕಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕಮಿಷನ್ ಆರೋಪ ಮಾಡಿರುವ ಗುತ್ತಿಗೆದಾರರ ಸಂಘದ ಎಲ್ಲಾ ಸದಸ್ಯರಿಗೆ ವಕೀಲರ ಮೂಲಕ ನೋಟಿಸ್ ಕಳುಹಿಸುವೆ. ನೋಟಿಸ್‌ನಲ್ಲಿ ಪ್ರಸ್ತಾಪಿಸಿರುವ ಅಂಶಗಳಂತೆ ನಡೆದುಕೊಳ್ಳದಿದ್ದರೆ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ' ಎಂದರು.

'ಪ್ರಧಾನಿಗೆ ದಾಖಲೆ ನೀಡಲಿ. ಲೋಕಾಯುಕ್ತ ಅಥವಾ ರಾಜ್ಯಪಾಲರಿಗೆ ದಾಖಲೆ ನೀಡಲಿ. ನಾನು ಮಾನನಷ್ಟ ಮೊಕದ್ದಮೆ ಹೂಡುತ್ತಿರುವುದರಿಂದ ನ್ಯಾಯಾಲಯಕ್ಕೆ ದಾಖಲೆ ಒಪ್ಪಿಸಲಿ' ಎಂದು ಹೇಳಿದರು.

ಲೈಂಗಿಕ ಕಿರುಕುಳ: ತನಿಖೆ ಚುರುಕು

ಒಂದನೇ ಪುಟದಿಂದ...

ಜಿಲ್ಲಾ ಆಸ್ಪತ್ರೆಯಲ್ಲಿ ಪರೀಕ್ಷೆ ನಡೆಸಿ, ಬಾಲಮಂದಿರಕ್ಕೆ ಕಳುಹಿಸಲಾಯಿತು.

ಸಾಕ್ಷ್ಯಾಧಾರ ಸಂಗ್ರಹ ಶುರು: ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವಲ್ಲಿ ಪೊಲೀಸರ ಮತ್ತೊಂದು ತಂಡ ಕಾರ್ಯನಿರತವಾಗಿತ್ತು. ತನಿಖಾಧಿಕಾರಿ ಡಿವೈಎಸ್‌ಪಿ ಅನಿಲ್‌ಕುಮಾರ್ ಮಾರ್ಗದರ್ಶನದಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪೂರಕ ಸಾಕ್ಷ್ಯ ಕಲೆಹಾಕುವಲ್ಲಿ ಪ್ರಯತ್ನ ನಡೆಸಿತು.

ಕೃತ್ಯ ನಡೆದ ಸ್ಥಳದ ಮಹಜರು, ವಿಚಾರಣೆಗೆ ಹಾಜರಾಗಲು ಆರೋಪಿಗಳಿಗೆ ನೋಟಿಸ್ ನೀಡುವ ಪ್ರಕ್ರಿಯೆ ಸೋಮವಾರ ನಡೆಯುವ ಸಾಧ್ಯತೆ ಇದೆ. ಮತ್ತೊಂದೆಡೆ ಮಠದ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ದಂಪತಿ ವಿರುದ್ಧದ ಲೈಂಗಿಕ ಕಿರುಕುಳ ಹಾಗೂ ಮಕ್ಕಳ ಅಪಹರಣ ಪ್ರಕರಣದ ತನಿಖೆ ಶುರುವಾಗಿಲ್ಲ. ಬಸವರಾಜನ್ ಮನೆಗೆ ಬೀಗ ಹಾಕಿದ್ದು, ದಂಪತಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ ಎನ್ನಲಾಗುತ್ತಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿ ಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ತುಂಬಿದ ಹಳ್ಳಕ್ಕೆ ಬಿದ್ದು ಬಾಲಕ, ಬೈಕ್ ಕೊಚ್ಚಿ ಹೋಗಿ ಸವಾರ ಸಾವು

ಮಳೆ ತಗ್ಗಿದರೂ ನಿಲ್ಲದ ಅವಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಮತ್ತು ಕರಾವಳಿ ಭಾಗದಲ್ಲಿ ಮಳೆ ಅಬ್ಬರ ಕಡಿಮೆಯಾಗಿದ್ದರೆ, ಕಲ್ಯಾಣ ಕರ್ನಾಟಕದ ಕೆಲವೆಡೆ ಶನಿವಾರ ರಾತ್ರಿ ಜೋರು ಮಳೆಯಾಗಿದೆ. ಹಲವೆಡೆ ಮನೆಗಳ ಗೋಡೆ ಕುಸಿದು ಬಿದ್ದಿದ್ದು, ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಬಾಲಕ ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ಮೈಸೂರು ತಾಲ್ಲೂಕಿನ ಜಯಪುರ ಗ್ರಾಮದ ಕೆಗ್ಗೆರೆಯ ಕೋಡಿ ಬಿದ್ದಿದ್ದು, ಬೈಕ್ ಸವಾರ ನೀರಿನ ರಭಸಕ್ಕೆ ಕೊಚ್ಚಿ ಹೋಗಿದ್ದಾರೆ. ಮಾವಿನಹಳ್ಳಿಯ ನಿವಾಸಿ ಅಂಕಣ್ಣಪುತ್ರ ಮಹೇಶ್ (40) ಮೃತರು.

ಹಾಸನ ಜಿಲ್ಲೆಯ ನುಗ್ಗೇಹಳ್ಳಿಯ ಹಿರೇಕೆರೆ ಕೆರೆ ಕೋಡಿ ಬಿದ್ದು, ಮನೆಗಳಿಗೂ ನೀರು ನುಗ್ಗಿದೆ. ಹೊಳೆನರಸೀಪುರ ತಾಲ್ಲೂಕಿನ ಬಿದರಕ್ಕ ಕೆರೆ ಕೋಡಿ ಒಡೆದು 100 ಹೆಕ್ಟೇರ್ ಬೆಳೆ ನಾಶವಾಗಿದೆ. ಕಲ್ಯಾಣ ಕರ್ನಾಟಕದ ಕೊಪ್ಪಳ, ಕಲಬುರಗಿ ಜಿಲ್ಲೆಗಳಲ್ಲಿ ಮಳೆಯಾಗಿದೆ. ಮೈದುಂಬಿ ಹರಿಯುತ್ತಿರುವ ಹಳ್ಳ ನೋಡಲು ಹೋಗಿದ್ದ ಬಾಲಕ ನಂದಕುಮಾರ ಬಡಿಗೇರ (13) ಆಯತಪ್ಪಿ ಬಿದ್ದು ಮೃತಪಟ್ಟ ಘಟನೆ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ತಾಲ್ಲೂಕಿನ ಈಳಿಗನೂರ ಗ್ರಾಮದಲ್ಲಿ ಜರುಗಿದೆ.

ಕೊಪ್ಪಳ ತಾಲ್ಲೂಕಿನ ಕೋಳೂರು ಗ್ರಾಮದಲ್ಲಿ ರೈತ ಮಲ್ಲಪ್ಪ ಎಂಬುವರು ಕಪ್ಪು ಬಣ್ಣಕ್ಕೆ ತಿರುಗಿದ ಹತ್ತಿಯನ್ನು ಕಿತ್ತು ಹಾಕಿದರು.

ಅವಳಿ ಜಿಲ್ಲೆಗಳಾದ ವಿಜಯನಗರ–ಬಳ್ಳಾರಿಯಲ್ಲಿ ಮಳೆಯಾಗಿದ್ದು, 30 ಮನೆಗಳ ಗೋಡೆ ಕುಸಿದು ಬಿದ್ದಿದೆ. ಹಂಪಿಯ ಪುರಂದರದಾಸರ ಮಂಟಪ, ಸ್ನಾನಘಟ್ಟ, ಚಕ್ರತೀರ್ಥ ಮುಳುಗಿದೆ. ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಬೆಳ್ಳಿಗನೂರು ಗ್ರಾಮದ ಹಳ್ಳಕ್ಕೆ 13 ಕುರಿಗಳು ಕೊಚ್ಚಿ ಹೋಗಿವೆ. ತಾಲ್ಲೂಕಿನಾದ್ಯಂತ 37 ಮನೆಗಳು ಬಿದ್ದಿವೆ.

ರಾಮನಗರ ಜಿಲ್ಲೆಯಲ್ಲಿ ಮಳೆ ಪ್ರಮಾಣ ತಗ್ಗಿದ್ದರೂ, ಅರ್ಕಾವತಿ, ವೃಷಭಾವತಿ ಹಾಗೂ ಕಣ್ವ ನದಿಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಚನ್ನಪಟ್ಟಣ ತಾಲ್ಲೂಕಿನ ಕಣ್ವ ಜಲಾಶಯ ಭರ್ತಿ ಆಗಿದ್ದು, ಅಬ್ಬೂರು ವ್ಯಾಸರಾಜ ಮಠಕ್ಕೆ ನದಿ ನೀರು ನುಗ್ಗಿದೆ. ಚನ್ನಪಟ್ಟಣ – ಮಾಕಳಿ – ಕುಣಿಗಲ್ ಮಾರ್ಗ ಬಂದ್ ಆಗಿದೆ. ಹರಿಸಂದ್ರ ಕೆರೆ ಕೋಡಿ ನುಗ್ಗಿದ ಪರಿಣಾಮ ತಗಚಗೆರೆ ಗ್ರಾಮದ ಮಧು ಅವರ ಕೋಳಿ-ಫಾರಂನಲ್ಲಿದ್ದ 3ಸಾವಿರಕ್ಕೂ ಹೆಚ್ಚು ಕೋಳಿ ಸಾವನ್ನಪ್ಪಿವೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಚಂದ್ರಗಿರಿ-ಗುಟ್ಟೆ ಮಾರ್ಗದ ಸೇತುವೆ ದಾಟುವಾಗ ಟ್ರ್ಯಾಕ್ಟರ್ ಎಂಜಿನ್ ಪಲ್ಟಿಯಾಗಿದ್ದು, ಚಾಲಕ ಮತ್ತು ನಾಲ್ವರು ಮಹಿಳೆಯರನ್ನು ರಕ್ಷಿಸಲಾಗಿದೆ.

ಚಾಮರಾಜನಗರ ತಾಲ್ಲೂಕಿನ ಕಾಗಲವಾಡಿ ಕೆರೆ ಕೋಡಿ ಬಿದ್ದಿದೆ

ವಿದ್ಯುತ್ ಸ್ಪರ್ಶ: ಕಲಾವಿದ ದಂಪತಿ ಸಾವು

ಬಳ್ಳಾರಿ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಯಲಾಟ ಕಲಾವಿದ ಸಾರಥಿ ಪಂಪಾಪತಿ (68) ಮತ್ತು ಅವರ ಪತ್ನಿ ದ್ಯಾಮವ್ವ (66) ವಿದ್ಯುತ್ ಸ್ಪರ್ಶದಿಂದ ಭಾನುವಾರ ಸಂಜೆ ಮೃತಪಟ್ಟಿದ್ದಾರೆ.

ನಗರದ ಬಂಡಿಹಟ್ಟಿಯಲ್ಲಿರುವ ತಮ್ಮ ಮನೆಯ ಮಾಳಿಗೆ ಮೇಲೆ ನಿಂತಿದ್ದ ಮಳೆ ನೀರು ಹೊರ ಹಾಕಲು ಸಂಜೆ 4.30ರ ಸುಮಾರಿಗೆ ಹೋಗಿದ್ದಾಗ ಕಂಬದಿಂದ ಬಂದಿದ್ದ ಸರ್ವಿಸ್ ವೈರ್‌ನಿಂದ ವಿದ್ಯುತ್ ಸ್ಪರ್ಶವಾಗಿತ್ತು. ಆಸ್ಪತ್ರೆಗೆ ಸಾಗಿಸಿದರೂ ಪ್ರಯೋಜನವಾಗಲಿಲ್ಲ. ಮೃತ ದಂಪತಿಗೆ ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಪಂಪಾಪತಿ ದಂಪತಿ ಎರಡು ಸಾವಿರಕ್ಕೂ ಹೆಚ್ಚು ಬಯಲಾಟ ಪ್ರದರ್ಶನ ನೀಡಿದ್ದಾರೆ. ಸಾರಥಿ ಪಾತ್ರದಿಂದ ಅವರು ಚಿರಪರಿಚಿತ.

ಲಾಡ್ ಕುಟುಂಬ: ಜಮೀನು ಮಂಜೂರು ರದ್ದು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಸಂಡೂರು ತಹಶೀಲ್ದಾರ್ ಎಚ್.ಜೆ.ರಶ್ಮಿ ಅವರ ವರ್ಗಾವಣೆಗೆ ಕಾರಣವಾಗಿದ್ದ, ತೋರಣಗಲ್ಲು ಹೋಬಳಿ ಮಾಳಾಪುರ ಗ್ರಾಮದ ಸರ್ವೆ ನಂಬರ್ 123ರ 47.63 ಎಕರೆ ಸರ್ಕಾರಿ ಜಮೀನು ಮಂಜೂರಾತಿ ರದ್ದುಪಡಿಸಿ ಬಳ್ಳಾರಿ ಉಪ ವಿಭಾಗಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಇದರಿಂದಾಗಿ ಕಾಂಗ್ರೆಸ್ ಮುಖಂಡ ಸಂತೋಷ್ ಲಾಡ್ ಕುಟುಂಬ ಜಮೀನಿನ ಮೇಲೆ ಹೊಂದಿದ್ದ ಹಿಡಿತ ತಪ್ಪಿದಂತಾಗಿದೆ. ಹನುಮನ ಮಗ ಹೊನ್ನೂರ ಎಂಬುವವರಿಗೆ ಜಮೀನು ಮಂಜೂರಾಗಿದ್ದು, ಅವರಿಂದ ಮಾಜಿ ಸಚಿವ ಸಂತೋಷ್ ಲಾಡ್ ಕುಟುಂಬ ಕ್ರಯಕ್ಕೆ ಪಡೆದಿತ್ತು ಎಂದು ಪ್ರತಿಪಾದಿಸಲಾಗಿತ್ತು.

ಉಪ ವಿಭಾಗಾಧಿಕಾರಿ ಆಕಾಶ್ ಶಂಕರ್ ಜುಲೈ 14ರಂದು ಜಮೀನು ಮಂಜೂರಾತಿ ರದ್ದುಪಡಿಸಿದ್ದರಿಂದ ಲಾಡ್ ಕುಟುಂಬದ ಮಾಲೀಕತ್ವ ಅನೂರ್ಜಿತಗೊಂಡಿದೆ. ಈ ಪ್ರಕರಣದಲ್ಲಿ ಇನ್ನೂ 16 ರೈತರು ಪ್ರತಿವಾದಿಗಳಾಗಿದ್ದಾರೆ.

'47.63 ಎಕರೆ ಸರ್ಕಾರಿ ಭೂಮಿ ಮಂಜೂರಾತಿ ರದ್ದತಿಗೆ ಉಪ ವಿಭಾಗಾಧಿಕಾರಿಗೆ ಶಿಫಾರಸು ಮಾಡಿದ್ದೇ ರಶ್ಮಿ ವರ್ಗಾವಣೆಗೆ ಕಾರಣ' ಎಂದು ಹೇಳಲಾಗಿತ್ತು. ತಹಶೀಲ್ದಾರ್ ಮೇಲೆ ಸ್ಥಳೀಯ ಶಾಸಕರು ಅಸಮಾಧಾನಗೊಂಡಿದ್ದರು. ಅದನ್ನು ನೇರವಾಗಿ ಹೇಳಲಾಗದೆ, ತಹಶೀಲ್ದಾರ್ ಶಿಷ್ಟಾಚಾರ ಪಾಲಿಸುತ್ತಿಲ್ಲ. ಜನ ಪ್ರತಿನಿಧಿಗಳಿಗೆ ಗೌರವ ಕೊಡುವುದಿಲ್ಲ ಎಂದು ಆರೋಪಿಸಿ ವಿಧಾನಸಭೆಯಲ್ಲಿ ದೂರಿದ್ದರು. ಬಳಿಕ ರಶ್ಮಿ ಅವರ ವರ್ಗಾವಣೆ ಆಗಿತ್ತು ಎನ್ನಲಾಗಿದೆ.

ಉಪ ವಿಭಾಗಾಧಿಕಾರಿ ಕೊಟ್ಟ ಕಾರಣ: 47.63 ಎಕರೆ ಜಮೀನು ಸರ್ಕಾರಿ ಜಮೀನು. ಕಾಲಂ (12) ರಲ್ಲಿ ರಾಳಗುಡ್ಡ ಎಂದಿದ್ದು, ಕೈ ಬರಹದ ಪಹಣಿಯಲ್ಲಿ ಹನುಮನ ಮಗ ಹೊನ್ನೂರ ಎಂಬ ಹೆಸರಿಗೆ ಖಾತೆ ಇದೆ. ಆದರೆ, ಹಕ್ಕು ಬದಲಾವಣೆ ಸಂಖ್ಯೆ ಇರುವುದಿಲ್ಲ. 47.63 ಎಕರೆ ಜಮೀನನ್ನು ಒಬ್ಬ ರೈತನಿಗೆ ಮಂಜೂರು ಮಾಡಿ ಭೂ ಮಂಜೂರಾತಿ ಅಧಿನಿಯಮ ಉಲ್ಲಂಘಿಸಲಾಗಿದೆಯೇ ಎಂದು ಪರಿಶೀಲಿಸಲು ಮೂಲ ದಾಖಲೆಗಳು ಲಭ್ಯ ಇರುವುದಿಲ್ಲ.

'ಮೂಲ ಮಂಜೂರಾತಿದಾರ ಹನುಮನಿಂದ ಹೀರೋಜಿ ಲಾಡ್, ವಿನಾಯಕ ಲಾಡ್, ಅಶೋಕ್ ಲಾಡ್, ಸಂತೋಷ್ ಲಾಡ್, ಶಿವಾಜಿರಾವ್ ಪೋಳ್ ಮತ್ತು ರೂಪ ಯು. ಲಾಡ್ ಈ ಜಮೀನು ಖರೀದಿಸಿರುವುದಕ್ಕೆ ನೋಂದಾಯಿತ ಪತ್ರ, ಹಕ್ಕು ಬದಲಾವಣೆ ಪತ್ರ ಹಾಜರುಪಡಿಸಿರುವುದಿಲ್ಲ. 1992–97ರವರೆಗೆ ಪಹಣಿಯಲ್ಲಿ ನಮೂದಾಗಿರುವ ಪಟ್ಟಾದಾರರೆಲ್ಲರೂ ಕ್ರಯದ ಮೂಲಕ ಹಕ್ಕು ಬದಲಾವಣೆ ಹೊಂದಿರುವುದಾಗಿ ಹೇಳಿದ್ದಾರೆ. ಪ್ರತಿವಾದಿಗಳು ಜಮೀನಿನ ಸ್ವಾಧೀನಾನುಭವದಲ್ಲಿ ಇಲ್ಲದಿರುವುದು ಕಂಡುಬಂದಿರುತ್ತದೆ' ಎಂದು ಎ.ಸಿ ಆದೇಶದಲ್ಲಿ ಪ್ರಸ್ತಾಪಿಸಿದ್ದಾರೆ.

ಈ ಕಾರಣಕ್ಕೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು, ಪಹಣಿಯಲ್ಲಿ ಅನಧಿಕೃತವಾಗಿ ನಮೂದಾಗಿರುವ ಹೆಸರುಗಳನ್ನು ರದ್ದುಪಡಿಸಿ 'ಸರ್ಕಾರ' ಎಂದು ನಮೂದಿಸಲು ಸಂಡೂರು ತಹಶೀಲ್ದಾರ್‌ಗೆ ಉಪ ವಿಭಾಗಾಧಿಕಾರಿ ಆದೇಶಿಸಿದ್ದಾರೆ.

ವ್ಯಾಜ್ಯ ಸಿವಿಲ್ ನ್ಯಾಯಾಲಯದಲ್ಲಿದೆ: ಕಾಂಗ್ರೆಸ್ ಮುಖಂಡ ಸಂತೋಷ್ ಲಾಡ್

'ಮಾಳಾಪುರ ಜಮೀನಿಗೆ ಸಂಬಂಧಿಸಿದ ವ್ಯಾಜ್ಯ ಕೂಡ್ಲಿಗಿ ಸಿವಿಲ್ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಕಾನೂನು ಹೋರಾಟ ಮುಂದುವರಿಯಲಿದೆ' ಎಂದು ಕಾಂಗ್ರೆಸ್ ಮುಖಂಡ ಸಂತೋಷ್ ಲಾಡ್ ಸ್ಪಷ್ಟಪಡಿಸಿದ್ದಾರೆ.

'ಜಮೀನು ಮಂಜೂರಾತಿ ರದ್ದತಿಯಿಂದ ಉಪ ವಿಭಾಗಾಧಿಕಾರಿ ಆಕಾಶ್ ಶಂಕರ್ ಆದೇಶವನ್ನು ನಮ್ಮ ಕುಟುಂಬದ ಸದಸ್ಯರು ಹೈಕೋರ್ಟ್‌ನಲ್ಲಿ ಪ್ರಶ್ನಿಸುವ ಸಾಧ್ಯತೆ ಇದೆ' ಎಂದು ಹೇಳಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.68	23,020	19,793
ಹಾರಂಗಿ	2,859	2,856.73	2,652	3,670
ಕಬಿನಿ	2,284	2,283.99	15,550	15,000
ಹೇಮಾವತಿ	2,922	2,921.95	6,602	6,540
ಲಿಂಗನಮಕ್ಕಿ	1,819	1,814	7,447	7,298
ಸೂಪಾ (ಮೀ)	564	550.08	5,864	831
ಮಾಣಿ	594	588	721	-
ತುಂಗಭದ್ರಾ	1,633	1,632.49	66,183	80,750
ಮಲಪ್ರಭಾ	2079.5	2,078.40	2,291	694
ಘಟಪ್ರಭಾ	2175	2,175.00	4,910	4,910
ಭದ್ರಾ	186	184	7,598	6,406
ಆಲಮಟ್ಟಿ (ಮೀ)	519.6	519.59	42,500	42,500
ನಾರಾಯಣಪುರ (ಮೀ)	492.25	492.07	30,000	26,520

* ನೆಲಮಟ್ಟದಿಂದ

ಕೆರೆಗಳ ಕಣ್ಗಾವಲಿಗೆ ಸಿಎಂ ನಿರ್ದೇಶನ

ಬೆಂಗಳೂರು: 'ಕೆರೆಗಳು ಒಡೆಯದಂತೆ ಹಾಗೂ ಬಿರುಕು ಬಿಡದಂತೆ ಎಚ್ಚರಿಕೆ ವಹಿಸಬೇಕು. ದೊಡ್ಡ ಕೆರೆಗಳಿರುವ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರ್ದೇಶನ ನೀಡಿದರು.

ಮೂರು ದಿನಗಳಿಂದ ಸುರಿದ ಮಳೆಯಿಂದ ರಾಜ್ಯದಲ್ಲಿ ಹೆಚ್ಚು ಹಾನಿಗೊಳಗಾದ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಎಸ್‌ಪಿಗಳು ಮತ್ತು ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಭಾನುವಾರ ವಿಡಿಯೊ ಸಂವಾದ ನಡೆಸಿದ ಅವರು, 'ಕೆರೆಗಳ ಸಮೀಕ್ಷೆಯನ್ನು ತಕ್ಷಣ ನಡೆಸಬೇಕು. ಅಪಾಯದ ಮುನ್ಸೂಚನೆ ಇರುವ ಕಡೆಗಳಲ್ಲಿ ತುರ್ತು ದುರಸ್ತಿ ಕಾಮಗಾರಿ ಕೈಗೊಳ್ಳಬೇಕು. ಕೆರಗಳು ಒಡೆದು ಸಾವು–ನೋವು ಸಂಭವಿಸದಂತೆ ತಡೆಯಬೇಕು' ಎಂದು ಸೂಚಿಸಿದರು.

ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಮಳೆಯಿಂದಾಗಿ ಕೆಲವೆಡೆ ಕೆರೆಗಳ ಕೋಡಿ ಒಡೆದು ನೀರು ನುಗ್ಗಿರುವುದರಿಂದ ಸಂಚಾರಕ್ಕೆ ತೊಂದರೆಯಾಗಿದೆ. ಪರ್ಯಾಯ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಬೇಕು ಎಂದು ಮೈಸೂರು, ರಾಮನಗರ ಮತ್ತು ಮಂಡ್ಯ ಎಸ್‌ಪಿಗಳಿಗೆ ಸೂಚನೆ ನೀಡಿದರು.

ಮಳೆಯಿಂದ ಹಾನಿಗೊಳಗಾಗಿರುವ ರಸ್ತೆ ಮತ್ತು ಸೇತುವೆಗಳನ್ನು ತಕ್ಷಣ ದುರಸ್ತಿ ಮಾಡಬೇಕು. ಲೋಕೋಪಯೋಗಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಕಾಮಗಾರಿ ನಡೆಸಬೇಕು. ವಿದ್ಯುತ್ ಸಂಪರ್ಕ ಕಡಿತಗೊಂಡಿರುವ ಪ್ರದೇಶಗಳಲ್ಲಿ ತ್ವರಿತವಾಗಿ ದುರಸ್ತಿ ಪೂರ್ಣಗೊಳಿಸಿ, ವಿದ್ಯುತ್ ಸಂಪರ್ಕ ಮರುಸ್ಥಾಪಿಸಬೇಕು ಎಂದು ಸೂಚಿಸಿದರು.

200ನೇ ದಿನಕ್ಕೆ ಕಾಲಿಟ್ಟ ಪ್ರಸನ್ನಾನಂದ ಸ್ವಾಮೀಜಿ ಹೋರಾಟ

ಅ. 9ಕ್ಕೆ 'ರಾಜಧಾನಿ ಚಲೋ'ಗೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಿಸಲು ಆಗ್ರಹಿಸಿ ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಅ. 9ರಂದು 'ರಾಜಧಾನಿ ಚಲೋ' ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಧರಣಿ ಭಾನುವಾರಕ್ಕೆ 200 ದಿನಗಳನ್ನು ಪೂರೈಸಿದ್ದರಿಂದ ಸಭೆ ನಡೆಸಿದ ವಿವಿಧ ಮಠಾಧೀಶರು, ಮುಖಂಡರು ಈ ನಿರ್ಣಯ ಕೈಗೊಂಡರು.

'ಕರ್ನಾಟಕ ಸ್ವಾಭಿಮಾನಿ ಎಸ್‌ಸಿ, ಎಸ್‌ಸಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ' ಆಶ್ರಯದಲ್ಲಿ ನಡೆದ ರಾಜ್ಯಮಟ್ಟದ ಸಭೆಯಲ್ಲಿ ಮುಂದಿನ ಹೋರಾಟದ ರೂಪುರೇಷೆ ಕುರಿತು ಚರ್ಚಿಸಿದರು.

ರಾಜ್ಯದಲ್ಲಿ ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಪ್ರಮಾಣ ಕ್ರಮವಾಗಿ ಶೇ 15 ರಿಂದ ಶೇ 17ಕ್ಕೆ ಹಾಗೂ ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿ ಎರಡು ವರ್ಷ ಕಳೆದರೂ ಸರ್ಕಾರ ಅನುಷ್ಠಾನಕ್ಕೆ ಕ್ರಮಕೈಗೊಂಡಿಲ್ಲ ಎಂಬುದು ಸಮುದಾಯದ ಆಕ್ರೋಶಕ್ಕೆ ಕಾರಣವಾಗಿದೆ.

ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು, 'ರಾಜ್ಯದ 224 ಕ್ಷೇತ್ರದಲ್ಲೂ ಪರಿಶಿಷ್ಟರಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ 101 ಒಳಪಂಗಡಗಳು, ಪರಿಶಿಷ್ಟ ಪಂಗಡದಲ್ಲಿ 50 ಒಳಪಂಗಡಗಳಿದ್ದು ಅಂದಾಜು 1.50 ಕೋಟಿ ಜನಸಂಖ್ಯೆ ಇದೆ. ಮುಂದಿನ ಚುನಾವಣೆಯಲ್ಲಿ ಯಾರನ್ನೂ ಬೇಕಾದರು ಗೆಲ್ಲಿಸುವ, ಸೋಲಿಸುವ ತಾಕತ್ತು ಸಮುದಾಯಕ್ಕಿದೆ' ಎಂದರು.

> **ಕೋಮುವಾದ, ಜಾತಿವಾದಕ್ಕೆ ಕಡಿವಾಣ ಹಾಕಿ ತಳ ಹಾಗೂ ಬಲಹೀನ ಸಮುದಾಯಕ್ಕೆ ಸರ್ಕಾರವು ಸೌಲಭ್ಯ ಕಲ್ಪಿಸಬೇಕು**
> **ಪ್ರಸನ್ನಾನಂದ ಸ್ವಾಮೀಜಿ**
> ವಾಲ್ಮೀಕಿ ಗುರುಪೀಠ

'ಜನಸಂಖ್ಯೆ ಆಧರಿಸಿ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕಾಗಿತ್ತು. ಆದರೆ, ಅದು ಸಾಧ್ಯವಾಗಿಲ್ಲ. ಪ್ರತಿಭಟನೆಯ 108ನೇ ದಿನ ಮುಖ್ಯಮಂತ್ರಿ ಸ್ಥಳಕ್ಕೆ ಬಂದು ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಆದರೆ, ಯಾವುದೇ ಕ್ರಮ ಕೈಗೊಳ್ಳಲಿಲ್ಲ' ಎಂದು ಆಕ್ರೋಶ ಹೊರಹಾಕಿದರು.

ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, 'ಸಂವಿಧಾನದ ಅಡಿಯಲ್ಲೇ ನ್ಯಾಯ ಒದಗಿಸುವಂತೆ ಆಗ್ರಹಿಸಿದ್ದರೂ ಬೇಡಿಕೆಗೆ ಮನ್ನಣೆ ಸಿಕ್ಕಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾಪರಿವರ್ತನೆ ವೇದಿಕೆ ಅಧ್ಯಕ್ಷ ಬಿ.ಗೋಪಾಲ್ ಮಾತನಾಡಿ, 'ವಾಲ್ಮೀಕಿ ಜಯಂತಿ ದಿನವೇ ರಾಜಧಾನಿ ಚಲೋ ಹೋರಾಟ ನಡೆಯಲಿದೆ' ಎಂದರು.

ಬೆಂಗಳೂರಿನಲ್ಲಿ ಭಾನುವಾರ ನಡೆದ ಸಭೆಯಲ್ಲಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿದರು. (ಎಡದಿಂದ) ಛಲವಾದಿ ಮಹಾಸಂಸ್ಥಾನದ ಬಸವನಾಗಿದೇವ ಸ್ವಾಮೀಜಿ, ಮೇದಾರ ಗುರುಪೀಠದ ಬಸವ ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ಬಂಜಾರ ಗುರುಪೀಠದ ಪೀಠಾಧ್ಯಕ್ಷ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಇದ್ದರು ಪ್ರಜಾವಾಣಿ ಚಿತ್ರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸ್ವಾತಂತ್ರ್ಯದ ಅಮೃತಮಹೋತ್ಸವ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ರಾಷ್ಟ್ರೀಯ ಕ್ರೀಡಾ ದಿನಾಚರಣೆ

ಗ್ರಾಮೀಣ ಕ್ರೀಡೋತ್ಸವ ಹಾಗೂ ಯೋಗಾಥಾನ್ 2022 ಕಾರ್ಯಕ್ರಮಕ್ಕೆ ಚಾಲನೆ

2020ನೇ ಸಾಲಿನ ಏಕಲವ್ಯ
ಜೀವಮಾನ ಸಾಧನೆ
ಕರ್ನಾಟಕ ಕ್ರೀಡಾ ರತ್ನ ಹಾಗೂ
2021-2022ನೇ ಸಾಲಿನ
ಕ್ರೀಡಾ ಪೋಷಕ ಪ್ರಶಸ್ತಿ ಪ್ರದಾನ
ಸಹಸ್ರ ಕ್ರೀಡಾ ಪ್ರತಿಭಾ ಯೋಜನೆಯಡಿ
ಕ್ರೀಡಾಪಟುಗಳಿಗೆ ನಗದು ಪುರಸ್ಕಾರ

ಏಕಲವ್ಯ ಪ್ರಶಸ್ತಿ



ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್
ರಾಷ್ಟ್ರೀಯ ಕ್ರೀಡಾ ದಿನಾಚರಣೆ

ದಿನಾಂಕ : 29-08-2022 ರಂದು ಬೆಳಗ್ಗೆ 11.00 ಗಂಟೆಗೆ
ಸ್ಥಳ : ಬ್ಯಾಂಕ್ವೆಟ್ ಹಾಲ್ ವಿಧಾನಸೌಧ, ಬೆಂಗಳೂರು

ಪ್ರಶಸ್ತಿ ಪ್ರದಾನ, ಗ್ರಾಮೀಣ ಕ್ರೀಡೋತ್ಸವ ಮತ್ತು ಯೋಗಾಥಾನ್‌ಗೆ ಚಾಲನೆ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ವಿಶೇಷ ಆಹ್ವಾನಿತರು

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಶ್ರೀ ಎಂ. ರಾಜೀವ್ ಚಂದ್ರಶೇಖರ್
ಮಾನ್ಯ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವರು, ಭಾರತ ಸರ್ಕಾರ

ಸಾಧನಾ ಸಂಚಿಕೆ ಬಿಡುಗಡೆ

ಡಾ. ಕೆ.ಸಿ. ನಾರಾಯಣಗೌಡ
ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ರೇಷ್ಮೆ ಇಲಾಖೆ ಸಚಿವರು

ನಗದು ಪುರಸ್ಕಾರ

ಡಾ. ಕೆ. ಸುಧಾಕರ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅಧ್ಯಕ್ಷತೆ

ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು
ಶಿವಾಜಿನಗರ ವಿಧಾನ ಸಭಾ ಕ್ಷೇತ್ರ

ಮಾನ್ಯ ವಿರೋಧಪಕ್ಷದ ನಾಯಕರು, ಸಚಿವರು ಸಂಸದರು, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರುಗಳು ನಿಗಮ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರುಗಳು ಹಾಗೂ ಎಲ್ಲಾ ಚುನಾಯಿತ ಜನ ಪ್ರತಿನಿಧಿಗಳು.

ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ. ಕೆ.ಸಿ. ನಾರಾಯಣಗೌಡ ರವರು ಕ್ರೀಡಾಪಟುಗಳೊಂದಿಗೆ ಸಂವಾದಿಸುತ್ತಿರುವುದು

ಡಾ. ಶಾಲಿನಿ ರಜನೀಶ್ ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಇಲಾಖೆ

ಡಾ. ಹೆಚ್.ಎನ್. ಗೋಪಾಲಕೃಷ್ಣ ಭಾ.ಆ.ಸೇ.
ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ವರಿಗೂ ಆದರದ ಸ್ವಾಗತ

❦ ಸುಭಾಷಿತ ❦
ಮಾತನಾಡಬೇಕಾದಾಗಲೂ ಮಾತನಾಡದೆ ಸುಮ್ಮನಿದ್ದರೆ ಬಹಳ ಕೆಟ್ಟದ್ದು.
-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಬಿಡಿಎ: ಪ್ರಭಾವಿಗಳಿಗೆ ಮಣೆ ಹೊಣೆಗೇಡಿ ವರ್ತನೆ ಅಕ್ಷಮ್ಯ

ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಬಡಾವಣೆಗಳನ್ನು ನಿರ್ಮಿಸಿ, ಅರ್ಹರಿಗೆ ಕೈಗೆಟಕುವ ದರದಲ್ಲಿ ವಸತಿ ಸೌಲಭ್ಯ ಕಲ್ಪಿಸುವುದು ಮತ್ತು ಇಡೀ ನಗರಕ್ಕೆ ಸುಸಜ್ಜಿತವಾದ ಮೂಲಸೌಕರ್ಯ ಒದಗಿಸುವ ಆಶಯದಿಂದ ಸ್ಥಾಪಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಭ್ರಷ್ಟಾಚಾರ, ದುರಾಡಳಿತದ ಕೂಪವಾಗಿ ಪರಿವರ್ತನೆಯಾಗಿದೆ. 1976ರಲ್ಲಿ ಅಸ್ತಿತ್ವಕ್ಕೆ ಬಂದ ಬಿಡಿಎ ಕೆಲವು ದಶಕಗಳಿಂದ ಈಚೆಗೆ 'ಭ್ರಷ್ಟಾಚಾರ ಅಭಿವೃದ್ಧಿ ಪ್ರಾಧಿಕಾರ'ವಾಗಿ ಬದಲಾಗಿದೆ. ವಸತಿ ಬಡಾವಣೆಗಳ ನಿರ್ಮಾಣಕ್ಕೆ ಭೂಸ್ವಾಧೀನ, ಜಮೀನು ಮಾಲೀಕರಿಗೆ ಪರಿಹಾರ ವಿತರಣೆ, ಬಡಾವಣೆಗೆ ಗುರುತಿಸಿದ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವುದು (ಡಿನೋಟಿಫಿಕೇಷನ್), ಬಡಾವಣೆ ನಿರ್ಮಾಣ ಮತ್ತು ನಗರ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಕಾಮಗಾರಿಗಳಲ್ಲಿ ಭ್ರಷ್ಟಾಚಾರದ ಆರೋಪ ನಿರಂತರವಾಗಿ ಕೇಳಿಬರುತ್ತಲೇ ಇದೆ. ರಾಜಧಾನಿಯ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಿದ್ದ ಇಂತಹ ಪ್ರಾಧಿಕಾರವನ್ನು ಹಾಳುಗೆಡಹುವಲ್ಲಿ ಆಡಳಿತ ನಡೆಸಿದ ಎಲ್ಲ ಪಕ್ಷಗಳ ನಾಯಕರ ಪಾಲೂ ಇದೆ. ಮುಖ್ಯಮಂತ್ರಿಗಳಾಗಿದ್ದವರು, ಅವರ ಆಪ್ತ ಕೂಟವು ಈ ಪ್ರಾಧಿಕಾರವನ್ನು ಸಂಪದ್ಭರಿತವಾದ ಚಿನ್ನದ ಗಣಿಯನ್ನಾಗಿ ಮಾಡಿಕೊಂಡಿದ್ದಕ್ಕೆ ಬಿಡಿಎ ಇತಿಹಾಸದಲ್ಲಿ ನಡೆದಿರುವ ಅಕ್ರಮಗಳೇ ಸಾಕ್ಷ್ಯ ಒದಗಿಸುತ್ತವೆ. ಪ್ರಾಧಿಕಾರದ ಆಯಕಟ್ಟಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳಲ್ಲಿ ನಿಷ್ಕಳಂಕಿತರಾಗಿ ಹೊರಹೋದವರು ವಿರಳ ಎಂಬ ಸ್ಥಿತಿ ಇದೆ. ಭ್ರಷ್ಟಾಚಾರ ಮತ್ತು ದುರಾಡಳಿತದ ಕಾರಣಕ್ಕಾಗಿಯೇ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಿಂದ ಬಿಡಿಎ ಹಲವು ಬಾರಿ ಛೀಮಾರಿಗೆ ಒಳಗಾಗಿದೆ.

ಅಧಿಕಾರದಲ್ಲಿ ಇರುವವರಿಗೆ 'ಅಕ್ಷಯಪಾತ್ರೆ' ಆಗಿರುವ ಬಿಡಿಎ ಕೊಳೆ ತೊಳೆಯಲು ಸರ್ಕಾರ ಮುಂದಾಗಲಿ

ಈ ಬಾರಿ ಮತ್ತೊಂದು ಹೆಜ್ಜೆ ಮುಂದೆ ಹೋಗಿರುವ ಬಿಡಿಎ, ಸುಪ್ರೀಂ ಕೋರ್ಟ್‌ನ ಆದೇಶವನ್ನೇ ಉಲ್ಲಂಘಿಸಿ ಪ್ರಭಾವಿಗಳಿಗೆ ಬದಲಿ ನಿವೇಶನ ಹಂಚಿಕೆ ಮಾಡಿದೆ. 'ಅತಿಕ್ರಮಣಕಾರರಿಂದ ಮರುಸ್ವಾಧೀನಪಡಿಸಿಕೊಂಡಿರುವ ಅಥವಾ ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿನ ನಿವೇಶನಗಳನ್ನು ಹರಾಜಿನ ಮೂಲಕ ಮಾತ್ರ ಹಂಚಿಕೆ ಮಾಡಬೇಕು' ಎಂದು 2021ರ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆದರೆ, ಸುಪ್ರೀಂ ಕೋರ್ಟ್‌ನ ಆದೇಶವನ್ನೂ ಧಿಕ್ಕರಿಸಿ ಬದಲಿ ನಿವೇಶನ ಹಂಚಿಕೆ ಮಾಡುವ ದರ್ಪವನ್ನು ಬಿಡಿಎ ತೋರಿದೆ. ಹಿಂದೆ ಪ್ರಾಧಿಕಾರದ ಆಯುಕ್ತರಾಗಿದ್ದ ಎಂ.ಬಿ.ರಾಜೇಶ್ ಗೌಡ ಇದಕ್ಕೆ ನೇರ ಹೊಣೆಗಾರರು. ಪರ್ಯಾಯ ನಿವೇಶನ ಹಂಚುವುದು ಕೇವಲ ಆಯುಕ್ತರ ವಿವೇಚನಾಧಿಕಾರವಲ್ಲ; ಆಡಳಿತ ಮಂಡಳಿಯೇ ಸಂಪೂರ್ಣ ಹೊಣೆ ಹೊರಬೇಕಾಗುತ್ತದೆ. ಪ್ರಭಾವಿಗಳಿಗೆ ನಿವೇಶನ ಹಂಚಿದ ಹೊಣೆಯನ್ನು ಬಿಡಿಎ ಅಧ್ಯಕ್ಷರೂ ಆಗಿರುವ ಶಾಸಕ ಎಸ್.ಆರ್. ವಿಶ್ವನಾಥ್ ಹಾಗೂ ಇನ್ನಿತರ ಸದಸ್ಯರೂ ಹೊರಬೇಕಾಗುತ್ತದೆ. ಗೃಹ ಸಚಿವ ಆರಗ ಜ್ಞಾನೇಂದ್ರ, ಬಿಜೆಪಿ ಶಾಸಕ ವೀರಣ್ಣ ಚರಂತಿಮಠ, ರಾಜ್ಯಸಭೆಗೆ ಬಿಜೆಪಿಯಿಂದಲೇ ಆಯ್ಕೆಯಾಗಿದ್ದ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದ ಬಸವರಾಜ ಪಾಟೀಲ ಸೇಡಂ, ಕೆಪಿಎಸ್‌ಸಿ ಸದಸ್ಯರಾಗಿದ್ದ ಎಂ. ನಾಗರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ ಜಗದೀಶ ರೆಡ್ಡಿ ಅವರ ಹತ್ತಿರದ ಸಂಬಂಧಿಕರೊಬ್ಬರು ಸೇರಿದಂತೆ ಪ್ರಭಾವಿ ವ್ಯಕ್ತಿಗಳಿಗೆ ನ್ಯಾಯಾಲಯದ ಆದೇಶಕ್ಕೆ ವ್ಯತಿರಿಕ್ತವಾಗಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಹಲವು ವರ್ಷಗಳ ಹಿಂದೆ ಅಭಿವೃದ್ಧಿಪಡಿಸಿರುವ ಆರ್‌ಎಂವಿ ಬಡಾವಣೆಯಲ್ಲಿ ಈಗ ನಿವೇಶನಗಳ ಮೌಲ್ಯ ಬಹುಕೋಟಿ ರೂಪಾಯಿ. ಪ್ರಭಾವಿಗಳಲ್ಲದೇ ಇರುವವರು ಇಂತಹ ಬಡಾವಣೆಯಲ್ಲಿ ಬದಲಿ ನಿವೇಶನದ ಹೆಸರಿನಲ್ಲಿ ನಿವೇಶನ ಪಡೆಯುವುದು ಅಸಾಧ್ಯ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಿಂದ ಛೀಮಾರಿಗೆ ಒಳಗಾದ ಬಳಿಕ ನಿವೇಶನ ವಾಪಸ್ ಪಡೆಯುವುದಾಗಿ ಹೇಳಿಕೊಂಡಿರುವ ಬಿಡಿಎ, ಫಲಾನುಭವಿಗಳಿಗೆ ನೋಟಿಸ್ ಜಾರಿ ಮಾಡಿರುವುದಾಗಿಯೂ ಹೇಳಿದೆ. ಇದು, ಕಣ್ಣೊರೆಸುವ ತಂತ್ರ ಆಗಬಾರದು. ಈ ನಿವೇಶನಗಳನ್ನು ಹಿಂಪಡೆದು ಹರಾಜಿನ ಮೂಲಕವೇ ಹಂಚಿಕೆ ಮಾಡಬೇಕು. ರಾಜೇಶ್ ಗೌಡ ಅವರನ್ನು ಬಿಡಿಎ ಆಯುಕ್ತರ ಹುದ್ದೆಯಿಂದ ವರ್ಗಾವಣೆ ಮಾಡಲಾಗಿದೆ. ಆದರೆ, ಶಿಸ್ತುಕ್ರಮ ಅಷ್ಟಕ್ಕೇ ಸೀಮಿತವಾಗಬಾರದು. ಬಿಡಿಎ ಅಧ್ಯಕ್ಷ ವಿಶ್ವನಾಥ್ ಸೇರಿದಂತೆ ಯಾರೇ ಈ ಪ್ರಕರಣದಲ್ಲಿ ತಪ್ಪೆಸಗಿದ್ದರೂ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು.

ಇಂತಹ ಎಡವಟ್ಟುಗಳು ಬಿಡಿಎಗೆ ಹೊಸತೇನಲ್ಲ. ಸುಮಾರು ಎರಡು ದಶಕಗಳಿಂದ ಈಚೆಗೆ ಆಯುಕ್ತರಾಗಿದ್ದವರು ಮತ್ತು ಆಯಕಟ್ಟಿನ ಜಾಗದಲ್ಲಿದ್ದವರು ಇಂತಹ ತಪ್ಪುಗಳನ್ನು ಮಾಡುತ್ತಲೇ ಬಂದಿದ್ದಾರೆ. ಆಯಕಟ್ಟಿನ ಹುದ್ದೆಗಳಿಗೆ ಅಧಿಕಾರಿಗಳ ವರ್ಗಾವಣೆಯಲ್ಲಿ ನಡೆಯುವ ಭ್ರಷ್ಟಾಚಾರವೇ ಇಂತಹ ಅಕ್ರಮಗಳಿಗೆ ಮೂಲ. ಇದಕ್ಕೆ ಯಾವ ಪಕ್ಷದ ನೇತೃತ್ವದ ಸರ್ಕಾರವೂ ಹೊರತಲ್ಲ. ಹೀಗಾಗಿ ಪ್ರಾಧಿಕಾರದಲ್ಲಿ ನಡೆದಿರುವ ಅಕ್ರಮಗಳಿಗೆ ಅಧಿಕಾರ ನಡೆಸಿದ ಎಲ್ಲರೂ ಹೊಣೆಯಾಗುತ್ತಾರೆ. ಪ್ರಾಧಿಕಾರದಲ್ಲಿನ ಭ್ರಷ್ಟಾಚಾರವನ್ನು ಇಲ್ಲವಾಗಿಸಲು ಯಾರೊಬ್ಬರಿಗೂ ಮನಸ್ಸಿದ್ದಂತೆ ಕಾಣುತ್ತಿಲ್ಲ. ಅಧಿಕಾರದಲ್ಲಿ ಇರುವವರಿಗೆ 'ಅಕ್ಷಯಪಾತ್ರೆ' ಆಗಿರುವ ಬಿಡಿಎ, ಹೀಗೆಯೇ ಇರಬೇಕು ಎಂಬುದು ಅಧಿಕಾರಸ್ಥರ ಇಚ್ಛೆ ಆಗಿರುವಂತಿದೆ. ಕೋರ್ಟ್ ಚಾಟಿ ಬೀಸಿದ ಮೇಲಾದರೂ ಸರ್ಕಾರ ಎಚ್ಚೆತ್ತುಕೊಂಡು, ಪ್ರಾಧಿಕಾರದ ಕೊಳೆ ತೊಳೆಯಲಿ. ವ್ಯವಸ್ಥೆಯನ್ನು ಪಾರದರ್ಶಕವಾಗಿಸಲಿ.

ದಿನದ ಟ್ವೀಟ್

ವಿಚಿತ್ರ ಪರಿಸ್ಥಿತಿ

ಶಿಕ್ಷಕರು, ನರ್ಸ್‌ಗಳು, ಪೊಲೀಸರು, ಆಡಳಿತಾಧಿಕಾರಿಗಳು ಎಲ್ಲರಿಗೂ ತರಬೇತಿ ನೀಡಲಾಗುತ್ತದೆ. ವೈದ್ಯರು, ಎಂಜಿನಿಯರ್‌ಗಳು ಮಾತ್ರವಲ್ಲದೆ ಎಲ್ಲ ವೃತ್ತಿಪರರೂ ತರಬೇತಿ ಪಡೆದಿರುತ್ತಾರೆ. ಕಲಾವಿದರು ಉತ್ತಮ ಅಭಿವ್ಯಕ್ತಿಗಾಗಿ ತರಬೇತಿ ಪಡೆಯುತ್ತಾರೆ. ಆದರೆ, ಎಲ್ಲಾ ಕ್ಷೇತ್ರಗಳ ಭವಿಷ್ಯವನ್ನು ರೂಪಿಸುವ ರಾಜಕಾರಣಿಗಳಿಗೆ ಮಾತ್ರ ಯಾವುದೇ ತರಬೇತಿ ಇರುವುದಿಲ್ಲ. ಇದು ಎಷ್ಟು ವಿಚಿತ್ರವಾಗಿದೆ ಅಲ್ಲವೇ?

ಪ್ರೊ. ಕೆ.ನಾಗೇಶ್ವರ್, ಪ್ರಾಧ್ಯಾಪಕ

ಕಿಡಿನುಡಿ

ಕಾಂಗ್ರೆಸ್‌ನ ಮುಖಂಡರೇ ಗಾಂಧಿ ಕುಟುಂಬವನ್ನು ಟೀಕಿಸಲು ಆರಂಭಿಸಿದ್ದಾರೆ. ಅದಕ್ಕೆ ನಾವು ಏನನ್ನಾದರೂ ಸೇರಿಸುವ ಅಗತ್ಯ ಇಲ್ಲ.

ಸ್ಮೃತಿ ಇರಾನಿ, ಕೇಂದ್ರ ಸಚಿವೆ

25 ವರ್ಷಗಳ ಹಿಂದೆ

ಶುಕ್ರವಾರ, 29-8-1997

- **ಶಿಕ್ಷೆಗೊಳಗಾದವರಿಗೆ ಚುನಾವಣೆ ಸ್ಪರ್ಧೆ ನಿಷಿದ್ಧ**

ನವದೆಹಲಿ, ಆಗಸ್ಟ್ 29 (ಪಿಟಿಐ)– ನ್ಯಾಯಾಲಯದಲ್ಲಿ ಆರೋಪ ಸಾಬೀತಾಗಿ ಶಿಕ್ಷೆಗೆ ಗುರಿಯಾದ ವ್ಯಕ್ತಿ ಕೆಳ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದರೂ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ ಎಂದು ಚುನಾವಣಾ ಆಯೋಗ ಇಂದು ಹೊಸದಾಗಿ ಆದೇಶ ಹೊರಡಿಸಿದೆ.

ರಾಜಕೀಯದಲ್ಲಿನ ಅಪರಾಧೀಕರಣದ ಗಂಭೀರ ಸಮಸ್ಯೆಗಳ ವಿರುದ್ಧ ಹೋರಾಡಲು ಚುನಾವಣಾ ಆಯುಕ್ತ ಎಂ.ಎಸ್.ಗಿಲ್ ಅವರ ನೇತೃತ್ವದ ಮೂವರು ಸದಸ್ಯರನ್ನೊಳಗೊಂಡ ಸಮಿತಿಯು ಈ ಆದೇಶ ಹೊರಡಿಸಿದೆ.

ಈಗಾಗಲೇ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಸದಸ್ಯರಾಗಿ ಆಯ್ಕೆ ಆಗಿರುವ ಶಿಕ್ಷೆಗೊಳಗಾದ ವ್ಯಕ್ತಿಗಳಿಗೆ ಈಗ ಹೊರಡಿಸಿರುವ ಆದೇಶ ಸಂಬಂಧಪಡುವುದಿಲ್ಲ. ಮುಂದಿನ ವರ್ಷ ನಾಗಾಲ್ಯಾಂಡ್, ತ್ರಿಪುರಾ, ಮಿಜೋರಾಂ, ಹಿಮಾಚಲ ಪ್ರದೇಶ, ಮೇಘಾಲಯ, ದೆಹಲಿ, ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಿಗೆ ಈ ಆದೇಶ ಅನ್ವಯಿಸುತ್ತದೆ ಎಂದು ಸ್ಪಷ್ಟಪಡಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 29-8-1972

- **ಪ್ರಧಾನಿ ಜೊತೆ ಪಾಕ್ ನಿಯೋಗದ ಚರ್ಚೆ: ಇಂದು 5ನೇ ಸುತ್ತಿನ ಮಾತುಕತೆ**

ನವದೆಹಲಿ, ಆಗಸ್ಟ್ 29– ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರ ಜತೆ ಪಾಕಿಸ್ತಾನಿ ನಿಯೋಗವು ಇಪ್ಪತ್ತು ನಿಮಿಷಗಳು ಮಾತುಕತೆ ನಡೆಸಿದ ಬಳಿಕ ಉಭಯ ದೇಶಗಳ ನಿಯೋಗಗಳು ನಾಳೆ ಮತ್ತೆ ಸಭೆ ಸೇರುವುವು ಎಂದು ಇಲ್ಲಿ ಪ್ರಕಟಿಸಲಾಯಿತು.

ಪಾಕಿಸ್ತಾನದ ವಿದೇಶಾಂಗ ಖಾತೆಯ ಪ್ರಧಾನ ಕಾರ್ಯದರ್ಶಿ ಅಜೀಜ್ ಅಹಮದ್ ಹಾಗೂ ಪಾಕಿಸ್ತಾನ ನಿಯೋಗದ ಇನ್ನೊಬ್ಬ ಸದಸ್ಯ ರಫಿರಾಜಾ ಅವರು ಪ್ರಧಾನಿ ಅವರನ್ನು ಸಂಜೆ ಭೇಟಿಯಾಗಿದ್ದರು.

ಭಾರತದ ವಿದೇಶಾಂಗ ಮಂತ್ರಿ ಸರ್ದಾರ್ ಸ್ವರಣ್‌ಸಿಂಗ್ ಹಾಗೂ ಪ್ರಧಾನಿ ಅವರ ಆಪ್ತ ಕಾರ್ಯದರ್ಶಿ ಶ್ರೀ ಪಿ.ಎನ್.ಹಕ್ಸಾರ್ ಅವರು ಈ ಮಾತುಕತೆಯಲ್ಲಿ ಹಾಜರಿದ್ದರು.

- **ಪ್ರತೀ ಜಿಲ್ಲೆಯಲ್ಲೂ ಸಚಿವರೊಬ್ಬರ ನೇತೃತ್ವದಲ್ಲಿ ಅಭಾವ ಸ್ಥಿತಿ ಬಗ್ಗೆ ವಿಶೇಷ ಗಮನ**

ಬೆಂಗಳೂರು, ಆಗಸ್ಟ್ 29– ಅಭಾವ ಪರಿಸ್ಥಿತಿ, ಜರೂರು ಕೃಷಿ ಕಾರ್ಯಕ್ರಮ ಹಾಗೂ ನಿವೇಶನಗಳ ಹಂಚಿಕೆಯ ಬಗ್ಗೆ ವಿಶೇಷ ಗಮನ ಕೊಡಲು ರಾಜ್ಯದ ನಾನಾ ಜಿಲ್ಲೆಗಳನ್ನು ಸಚಿವರು ಹಾಗೂ ರಾಜ್ಯ ಸಚಿವರುಗಳಿಗೆ ಹಂಚಲಾಗಿದೆ.

ಸಚಿವರು ಹಾಗೂ ರಾಜ್ಯ ಸಚಿವರು ತಮ್ಮ ಕೆಲಸದ ಜೊತೆಗೆ ಈ ಜಿಲ್ಲೆಗಳಲ್ಲಿ ಈ ಮೂರು ಯೋಜನೆಗಳ ಕಾರ್ಯಾಚರಣೆ ಬಗ್ಗೆ ಮೇಲ್ವಿಚಾರಣೆ ನಡೆಸುವರೆಂದು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವರದಿಗಾರರಿಗೆ ತಿಳಿಸಿದರು.

ಜನಪರ ನಾಯಕರನ್ನು ಈಗ ದುರ್ಬೀನು ಹಾಕಿ ಹುಡುಕಬೇಕಾಗಿದೆ

ಮುಖಂಡರ ಹುಚ್ಚು ಮನಸ್ಸಿನ ಮುಖಗಳು!

ಅನುಸಂಧಾನ

ರವೀಂದ್ರ ಭಟ್ಟ

ಕರ್ನಾಟಕ ರಾಜ್ಯ ಈಗ ಎದುರಿಸುತ್ತಿರುವ ಅತ್ಯಂತ ಪ್ರಮುಖ ಸಮಸ್ಯೆಗಳು ಯಾವುವು? ಹೀಗೊಂದು ಪ್ರಶ್ನೆಯನ್ನು ನಿಮ್ಮಷ್ಟಕ್ಕೆ ನೀವೇ ಒಮ್ಮೆ ಕೇಳಿಕೊಳ್ಳಿ. ಉತ್ತರ ಗೊತ್ತಾಗದಿದ್ದರೆ ಟಿ.ವಿ ನೋಡಿದರೆ, ಇಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಜಾಲಾಡಿದರೆ ನಿಮಗೆ ಉತ್ತರ ಸಿಕ್ಕೇ ಸಿಗುತ್ತದೆ. ರಾಜ್ಯವನ್ನು ಕಾಡುತ್ತಿರುವ ಸಮಸ್ಯೆಗಳು ಒಂದಾ ಎರಡಾ, ನೂರಾರಿವೆ.

ಸಾಮಾಜಿಕ ಮಾಧ್ಯಮಗಳನ್ನು ಗಮನಿಸುತ್ತಿದ್ದರೆ, ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಹೀಗೆ ಪಟ್ಟಿ ಮಾಡಬಹುದು. ಈದ್ಗಾ ಮೈದಾನದಲ್ಲಿ ಗಣೇಶ ಹಬ್ಬ ಆಚರಿಸಬೇಕೋ ಬೇಡವೋ? ಸಾವರ್ಕರ್ ನಿಜವಾಗಿಯೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೋ ಇಲ್ಲವೋ? ಜಾಹೀರಾತಿನಲ್ಲಿ ನೆಹರೂ ಚಿತ್ರ ಕೈಬಿಟ್ಟಿದ್ದು ತಪ್ಪೋ ಸರಿಯೋ? ನೆಹರೂ ದೇಶಭಕ್ತರು ಹೌದೋ ಅಲ್ಲವೋ? ಮಾಂಸಾಹಾರ ಸೇವಿಸಿ ದೇವಾಲಯ ಪ್ರವೇಶ ಮಾಡುವುದು ಸರಿಯೋ ತಪ್ಪೋ? ಶಾಲೆಗೆ ಬರುವಾಗ ಹಿಜಾಬ್ ಧರಿಸಬೇಕೋ ಬೇಡವೋ? ಸಿದ್ದರಾಮಯ್ಯ ಹಿಂದೂ ವಿರೋಧಿಯೋ ಮುಸ್ಲಿಂ ಪರವೋ? ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರ್‌ಎಸ್‌ಎಸ್ ಕೈಗೊಂಬೆ ಹೌದೋ ಅಲ್ಲವೋ, ಟಿಪ್ಪು ಸುಲ್ತಾನ್ ಮೈಸೂರು ಹುಲಿ ಹೌದೋ ಅಲ್ಲವೋ? ದೇಶ ವಿಭಜನೆಗೆ ಗಾಂಧೀಜಿ ಕಾರಣವೋ ಅಲ್ಲವೋ? ಧರ್ಮರಕ್ಷಣೆಗಾಗಿ ಕೊಲೆ ಮಾಡಬಹುದೋ ಇಲ್ಲವೋ... ಅಬ್ಬಬ್ಬಾ ಎಂತೆಂಥಾ ಸಮಸ್ಯೆಗಳು. ಒಂದಕ್ಕಿಂತ ಒಂದು ಗಂಭೀರ ಸಮಸ್ಯೆಗಳು.

ಈ ಎಲ್ಲ ಸಮಸ್ಯೆಗಳ ಬಗ್ಗೆ ಆಡಳಿತ ಪಕ್ಷದವರೂ ಮಾತನಾಡುತ್ತಾರೆ, ವಿರೋಧ ಪಕ್ಷದ ಮುಖಂಡರೂ ಮಾತನಾಡುತ್ತಾರೆ, ಆ ಭಕ್ತರೂ ಮಾತನಾಡುತ್ತಾರೆ, ಈ ಭಕ್ತರೂ ಚರ್ಚೆ ಮಾಡುತ್ತಾರೆ. ಹೋರಾಟಕ್ಕೂ ಇಳಿದಿದ್ದಾರೆ. ಪಾದಯಾತ್ರೆ, ರಥಯಾತ್ರೆ ಎಲ್ಲವೂ ನಡೆಯುತ್ತಿವೆ. ಆದರೆ ಬಡಪಾಯಿ ಮತದಾರ ಮಾತ್ರ ಬೇರೆಯದ್ದೇ ಸಮಸ್ಯೆಯಲ್ಲಿ ಮುಳುಗಿದ್ದಾನೆ. ಅವನಿಗೆ ಊಟಕ್ಕೆ ಇದೆಯಾ? ತಲೆಮೇಲೊಂದು ಸೂರು ಇದೆಯಾ? ದುಡಿಯುವ ಕೈಗಳಿಗೆ ಕೆಲಸ ಇದೆಯಾ? ದುಡಿತಕ್ಕೆ ಸಮನಾದ ಸಂಬಳ ಸಿಗುತ್ತಿದೆಯಾ ಎಂದು ಕೇಳುವವರು ಗತಿ ಇಲ್ಲದಂತಾಗಿದೆ.

ಕೊರೊನಾ ಆವರಿಸಿದ ನಂತರದಲ್ಲಿ ಬದುಕು ಮೂರಾಬಟ್ಟೆಯಾಗಿದೆ. ಹಣದುಬ್ಬರ ವಿಪರೀತವಾಗಿದೆ. ಆರ್ಥಿಕ ಸಮಸ್ಯೆ ಕಿತ್ತು ತಿನ್ನುತ್ತಿದೆ. ಆದರೆ ಈಗ ಧರ್ಮ ಧರ್ಮಗಳ ನಡುವಿನ ಸಂಘರ್ಷದ ವಿಷಯ ಸಮೂಹ ಸನ್ನಿಯಾಗಿ ಎಷ್ಟು ತೀವ್ರವಾಗಿದೆ ಎಂದರೆ, ರಾಜ್ಯದ ನಿಜವಾದ ಸಮಸ್ಯೆಗಳೆಲ್ಲಾ ಮರೆಯಾಗಿವೆ. ಯಾರಿಗೂ ಅದರ ಬಗ್ಗೆ ಚಿಂತೆ ಇರುವಂತೆ ಕಾಣುತ್ತಿಲ್ಲ. ನಿಜವಾದ ಸಮಸ್ಯೆಗಳು ಆಡಳಿತ ಪಕ್ಷಕ್ಕೂ ಬೇಡ, ವಿರೋಧ ಪಕ್ಷಕ್ಕೂ ಬೇಡ ಎನ್ನುವಂತಾಗಿದೆ. ಹಿಂದೂ ಪರವೋ ವಿರೋಧವೋ ಮುಸ್ಲಿಂ ಪರವೋ ವಿರೋಧವೋ ಎಂಬ ಚರ್ಚೆಯಲ್ಲಿ ಜನಪರ ಎನ್ನುವುದು ಮಾಯವಾಗಿದೆ. ಜನಪರ ನಾಯಕರು ಯಾರು ಎಂದು ದುರ್ಬೀನು ಹಾಕಿ ಹುಡುಕುವಂತಾಗಿದೆ.

ಕೆಲವು ದಶಕಗಳ ಹಿಂದೆ ನಮಗೆ ಜನಪರ ನಾಯಕರು ಎಲ್ಲೆಡೆ ಸಿಗುತ್ತಿದ್ದರು. ಆದರೆ ಈಗ ಸಿಗುವುದು ಬಿಜೆಪಿ ನಾಯಕರು, ಕಾಂಗ್ರೆಸ್ ನಾಯಕರು ಅಥವಾ ಇನ್ನಾವುದೋ ಪಕ್ಷದ ನಾಯಕರು ಮಾತ್ರ. ಇಂತಿಪ್ಪ ಸನ್ನಿವೇಶದಲ್ಲಿ ನಾವು ದೇಶಭಕ್ತಿಯ ಬಗ್ಗೆ ಆಲೋಚಿಸುತ್ತಿದ್ದೇವೆ. ಬಹುಭಾಷಾ ನಟ ಪ್ರಕಾಶ್ ರಾಜ್ ಇತ್ತೀಚೆಗೆ 'ನಾವು ಈಗ ದೇಶಭಕ್ತಿಯನ್ನು ತೋರಿಸಬೇಕಾಗಿದ್ದು ಬೆಲೆ ಏರಿಕೆಯನ್ನು ಕಡಿಮೆ ಮಾಡುವುದರಲ್ಲಿ, ಯುವಕರಿಗೆ ಕೆಲಸ ಕೊಡಿಸುವುದರಲ್ಲಿ' ಎಂದು ಹೇಳಿದ್ದರು. ಅದು ಒಪ್ಪತಕ್ಕ ಮಾತು. ಆದರೆ ಅವರು ಹಿಂದೂ ವಿರೋಧಿ ಪಟ್ಟ ಅಲಂಕರಿಸಿದ್ದಾರೆ. ದೇಶದ್ರೋಹಿ ಎಂಬ ಟೀಕೆಗೂ ಗುರಿಯಾಗಿದ್ದಾರೆ. ನಿಜವಾಗಿಯೂ ಈಗ ರಾಜ್ಯ ಮತ್ತು ದೇಶವನ್ನು ಪ್ರಮುಖವಾಗಿ ಕಾಡುತ್ತಿರುವ ಸಮಸ್ಯೆ ಎಂದರೆ ಬೆಲೆ ಏರಿಕೆ, ನಿರುದ್ಯೋಗ. ಇವುಗಳನ್ನು ಪರಿಹರಿಸುವ ಮೂಲಕ ನಮ್ಮ ದೇಶಭಕ್ತಿಯನ್ನು ಸಾಬೀತು ಮಾಡಬೇಕಿದೆ.

ಕರ್ನಾಟಕದಲ್ಲಿ ಈ ಬಾರಿ ವಿಪರೀತ ಮಳೆಯಾಗಿದೆ. ರೈತರ ಬೆಳೆ ನಾಶವಾಗಿದೆ. ಭೂಮಿ ಕುಸಿಯುತ್ತಿದೆ. ಸೇತುವೆಗಳಷ್ಟೇ ಅಲ್ಲ ರಸ್ತೆಗಳೂ ಮುಳುಗಿವೆ. ಕೆಲವು ಕಡೆ ಬದುಕು ನೀರುಪಾಲಾಗಿದೆ. ಜನರು ಸಂಕಷ್ಟಕ್ಕೀಡಾಗಿದ್ದಾರೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಮಳೆಯೇ ಆಗಿಲ್ಲ. ಅಲ್ಲಿ ಬದುಕು ಬರಡಾಗಿದೆ. ಪಿಎಸ್‌ಐ, ಕೆಪಿಟಿಸಿಎಲ್ ಸಹಿತ ಬಹುತೇಕ ನೇಮಕಾತಿಗಳಲ್ಲಿ ಅಕ್ರಮಗಳು ನಿರಾತಂಕವಾಗಿ ನಡೆಯುತ್ತಿವೆ. ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಪಡೆಯಲು ಶೇ 40ರಷ್ಟು ಕಮಿಷನ್ ನೀಡಬೇಕಾಗಿದೆ ಎಂದು ಗುತ್ತಿಗೆದಾರರ ಸಂಘದವರು ಆರೋಪಿಸುತ್ತಿದ್ದಾರೆ. ಭ್ರಷ್ಟಾಚಾರ ಮಿತಿಮೀರಿದೆ ಎನ್ನುವುದು ಎಲ್ಲರ ಕಣ್ಣಿಗೂ ರಾಚುತ್ತಿದೆ. ಬೆಂಗಳೂರಿನಲ್ಲಿ ರಸ್ತೆಗುಂಡಿಗಳಿಂದ ಅಪಘಾತಗಳಾಗಿ ಜನ ಸಾಯುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿಯೂ ಸಮಸ್ಯೆಗಳು ವಿಪರೀತವಾಗಿವೆ. ರೈತರು ತಮ್ಮ ಬೆಳೆಗಳಿಗೆ ಬೆಲೆ ಸಿಗುತ್ತಿಲ್ಲ ಎಂದು ಕೂಗುತ್ತಿದ್ದಾರೆ. ಸಾಲ ನೀಡಬೇಕಾದ ಸಹಕಾರಿ ಸಂಘಗಳಲ್ಲಿಯೂ ಅವ್ಯವಹಾರದ ಘಾಟು ರಾಚುತ್ತಿದೆ. ಈ ಸಮಸ್ಯೆಗಳ ಬಗ್ಗೆ ಮಾತನಾಡಬೇಕಾದ ನಮ್ಮ ನಾಯಕರು ಮಾಂಸಾಹಾರ, ಗಣೇಶೋತ್ಸವ, ಪ್ರತಿಮೆ ಸ್ಥಾಪನೆಯಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾ ಕಾಲಕಳೆಯುತ್ತಿದ್ದಾರೆ. ಅಭಿವೃದ್ಧಿಯ ವಿಷಯ ಚರ್ಚೆಗೆ ಬರುತ್ತಿಲ್ಲ.

ಆಡಳಿತ ಪಕ್ಷದವರು ಬುಟ್ಟಿಯಿಂದ ಒಂದೊಂದೇ ವಿಷಯವನ್ನು ಹೊರಕ್ಕೆ ಬಿಡುತ್ತಿದ್ದಾರೆ. ವಿರೋಧ ಪಕ್ಷಗಳು ಅದಕ್ಕೆ ಉತ್ತರ ಕೊಡುತ್ತಾ ಸಾಗುತ್ತಿವೆ. ಎಲ್ಲ ರಾಜಕೀಯ ಪಕ್ಷಗಳೂ ಜನರಿಂದ, ಜನರ ಸಮಸ್ಯೆಗಳಿಂದ ದೂರವಾಗುತ್ತಿವೆ ಎಂದು ಅನ್ನಿಸುತ್ತಿದೆ. ಹಿಜಾಬ್, ಆಜಾನ್, ಮುಸ್ಲಿಂ ವ್ಯಾಪಾರಿಗಳಿಗೆ ವಿರೋಧ ಹೀಗೆ ಹಲವಾರು ವಿಷಯಗಳು ಈಗಾಗಲೇ ಮುನ್ನೆಲೆಗೆ ಬಂದು ಹೋಗಿವೆ. 'ಇಂತಹ 64 ವಿಷಯಗಳು ನಮ್ಮ ಬುಟ್ಟಿಯಲ್ಲಿವೆ. ಒಂದೊಂದನ್ನೇ ಬಿಡುತ್ತೇವೆ' ಎಂದು ಬಲಪಂಥೀಯ ನಾಯಕರು ಹೇಳುತ್ತಿದ್ದಾರೆ. ಜನರ ಮನಸ್ಸು ಕೆಡಿಸಲು ಬೇಕಾದ 64 ವಿಷಯಗಳು ಅವರ ಬಳಿ ಇವೆ. ಆದರೆ ಜನರ ನೂರಾರು ಸಮಸ್ಯೆಗಳಿಗೆ ಪರಿಹಾರದ ರಾಮಬಾಣ ಅವರಲ್ಲಿ ಇದ್ದಂತೆ ಕಾಣುತ್ತಿಲ್ಲ. ಜನರ ಸಮಸ್ಯೆ ಕೇಳುವವರೇ ದಿಕ್ಕಿಲ್ಲದಂತಾಗಿದೆ. ಈಗ ರಾಮಬಾಣವೇ ಸಮಸ್ಯೆಯಾಗಿ ಕುಳಿತಿದೆ.

ವಿಧಾನಸಭೆ ಚುನಾವಣೆ ಬಾಗಿಲು ಬಡಿಯುತ್ತಿದೆ. ಈ ಸಂದರ್ಭದಲ್ಲಿ ಜನೋಪಯೋಗಿ ವಿಷಯಗಳ ಬಗ್ಗೆ ಚರ್ಚೆಯಾಗಬೇಕು. ಆದರೆ ಅವು ಚರ್ಚೆಗೆ ಒಳಪಡುತ್ತಿಲ್ಲ ಎನ್ನುವುದು ವಿಷಾದನೀಯ. ಈ ದೇಶದ ದುರಂತ ಕೂಡ ಹೌದು. ನೀರಾವರಿ ಯೋಜನೆಗಳ ಬಗ್ಗೆಯಾಗಲೀ ಲೋಕೋಪಯೋಗಿ ಇಲಾಖೆ ನಡೆಸುವ ಕಾಮಗಾರಿಗಳ ಬಗ್ಗೆಯಾಗಲೀ ಪಂಚಾಯತ್‌ರಾಜ್ ಇಲಾಖೆಯ ಕಾರ್ಯದಕ್ಷತೆ ಬಗ್ಗೆಯಾಗಲೀ ಲೋಕಸೇವಾ ಆಯೋಗದ ಸುಧಾರಣೆ ಬಗ್ಗೆಯಾಗಲೀ ಶಿಕ್ಷಣದ ಸುಧಾರಣೆ ಕುರಿತಾಗಲೀ ಆರ್ಥಿಕ ಪರಿಸ್ಥಿತಿ ಸುಧಾರಣೆ ಬಗ್ಗೆಯಾಗಲೀ ಯಾವುದೇ ರಾಜಕೀಯ ಪಕ್ಷದ ಮುಖಂಡರೂ ಮಾತನಾಡುತ್ತಿಲ್ಲ. ಆಕಸ್ಮಿಕವಾಗಿ ಯಾರಾದರೂ ಮಾತನಾಡಿದರೂ ಅದನ್ನು ಕೇಳಿಸಿಕೊಳ್ಳುವಷ್ಟು ವ್ಯವಧಾನ ಮತದಾರರಿಗೂ ಇಲ್ಲ.

ವಿರೋಧ ಪಕ್ಷಗಳ ಮುಖಂಡರಾದರೂ ತಮಗೆ ಅಧಿಕಾರವನ್ನು ಕೊಟ್ಟರೆ ಈ ರಾಜ್ಯವನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯುತ್ತೇವೆ ಎಂಬುದರ ಬಗ್ಗೆ ನಿಖರವಾಗಿ ಹೇಳಬೇಕು. ಜನರ ಸಮಸ್ಯೆಗಳನ್ನು ಹೇಗೆ ಪರಿಹರಿಸುತ್ತೇವೆ ಎಂಬ ಬಗ್ಗೆ ಮುನ್ನೋಟವನ್ನು ಪ್ರಕಟಿಸಬೇಕು. ಜನರ ಸಮಸ್ಯೆ ಪರಿಹಾರಕ್ಕೆ ಪೂರಕವಾದ ಹೋರಾಟವನ್ನಾದರೂ ರೂಪಿಸಬೇಕು. ಅವರು ಅದನ್ನೂ ಮಾಡುತ್ತಿಲ್ಲ. ಆಡಳಿತ ಪಕ್ಷಕ್ಕೆ ಕೇಸರಿಯ ಮಂಕುಬೂದಿಯೇ ಮತ್ತೆ ತಮ್ಮನ್ನು ಅಧಿಕಾರದ ಗದ್ದುಗೆಗೆ ಏರಿಸಬಹುದು ಎಂಬ ಭ್ರಮೆ ಇದ್ದಂತೆ ಕಾಣುತ್ತಿದೆ.

ಗದ್ದುಗೆ ಏರುವ ಗುದ್ದಾಟದಲ್ಲಿ ಮತದಾರರು ಮಾತ್ರ ಬೀದಿಗೆ ಬಿದ್ದಿದ್ದಾರೆ. ಅವರನ್ನು ಮೇಲೆತ್ತುವ ಕೈಗಳು ಕಾಣುತ್ತಿಲ್ಲ. ರಾಜಕಾರಣಿಗಳಿಗೆ ಅಧಿಕಾರದ ಚಿಂತೆ. ಜನರಿಗೆ ಹೊಟ್ಟೆಪಾಡಿನ ಚಿಂತೆ. ರಾಜಕಾರಣಿಗಳು ತಮ್ಮ ಉದ್ಧಾರಕ್ಕಾಗಿ ದಾಳ ಉರುಳಿಸುತ್ತಿದ್ದಾರೆ. ಮತದಾರರಿಗೂ ಮಾಯೆಯ ಮುಸುಕು ಹಾಕುತ್ತಿದ್ದಾರೆ. ಅವರಿಗೆ ಅವರ ಚಿಂತೆ ಬಿಟ್ಟರೆ ಬೇರೆಯವರ ಚಿಂತೆ ಇಲ್ಲ. ಮತದಾರರು ಇದನ್ನು ಬೇಗ ಅರ್ಥ ಮಾಡಿಕೊಂಡರೆ ರಾಜ್ಯಕ್ಕೂ ಒಳಿತು, ಮತದಾರರಿಗೂ ಒಳಿತು.

ಚುರುಮುರಿ

ಬೆಕ್ಕಣ್ಣನ ಹಾರಾಟ

• ಸುಮಂಗಲಾ

ಶಾಲೆಗಳು ಆರಂಭವಾಗುತ್ತಿದ್ದಂತೆ ಬೆಕ್ಕಣ್ಣ 'ಡೆಲ್ಲಿವಳಗ ಸಿಸೋಡಿಯಾ ಅಂಕಲ್ಲು ಸರ್ಕಾರಿ ಶಾಲೆಗಳನ್ನ ಹ್ಯಾಪಿನೆಸ್ ಸ್ಕೂಲು ಮಾಡ್ಯಾರಂತ, ನನಗ ಅಲ್ಲಿಗೇ ಸೇರಿಸು' ಎಂದು ವರಾತ ಹಚ್ಚಿತ್ತು.

'ಅಲ್ಲಿ ಯಾರ ಮನ್ಯಾಗ ಇರ್ತೀ... ನಿರ್ಮಲಕ್ಕನ ಮನ್ಯಾಗ ಇಟ್ಕಂತಾರೇನೂ ನಿನಗ' ಎಂದು ಬೈದಿದ್ದೆ.

'ಅಲ್ಲಿ ಎಷ್ಟ್ ಚಂದ ಓದಬೌದಿತ್ತು' ಎಂದು ಆಗಾಗ ಕ್ಯಾತೆ ತೆಗೆಯುತ್ತಲೇ ಇತ್ತು. ಸಿಸೋಡಿಯಾ ಮೇಲೆ ಇ.ಡಿ ದಾಳಿ ಶುರುವಾಗಿದ್ದೇ 'ಹ್ಯಾಪಿನೆಸ್ಸು ಸ್ಕೂಲು ಬ್ಯಾಡ, ಇಲ್ಲೇ ಹೋಗತೀನಿ ಬಿಡು' ಎಂದು ಸುಮ್ಮನಾಗಿತ್ತು.

ಮೊನ್ನೆ 'ನನಗ ಪಾಸ್‌ಪೋರ್ಟು, ವೀಸಾ ತೆಗೆಸಿಕೊಡು. ಮೇಲುಕೋಟೆ ಪುಟ್ಟರಾಜು ಅಂಕಲ್ಲು ಹಲ್ಲುನೋವು ತೋರಿಸ್ಕೊಳಾಕ ಲಂಡನ್ನಿಗೆ ಹೋಗ್ತಾರಂತ. ನಾನೂ ಹೋಗಿ ಲಂಡನ್ನಿನ ಪುಸ್ಸಿಕ್ಯಾಟ್ ನೋಡಿಕೆಂಡು ಬರತೀನಿ' ಎಂದು ದುಂಬಾಲು ಬಿದ್ದಿತು.

'ನೀ ನನ್ ಜೋಡಿ ಚುರುಮುರಿಗೆ ವಗ್ಗರಣೆ ಹಾಕ್ತೀಯಲ್ಲ, ಅದಕ್ಕ ನಿನಗ ಪಾಸ್‌ಪೋರ್ಟು, ವೀಸಾ ಏನೂ ಕೊಡಂಗಿಲ್ಲ. ಹಂಗೆಲ್ಲ ಜುಜುಬಿ ಹಲ್ಲುನೋವಿಗೂ ಲಂಡನ್ ಆಸ್ಪತ್ರೆಗೆ ಹೋಗಬೇಕು ಅಂದ್ರ ನೀ ರಾಜಕಾರಣಿಯಾಗಿರಬೇಕು, ನಿನ್ ಮ್ಯಾಗೆ ಭ್ರಷ್ಟಾಚಾರದ ಆಪಾದನೆ ಇರಬೇಕು, ಆವಾಗ... ವಿದೇಶ ಪ್ರವಾಸ ಮಾಡಬೌದು' ಎಂದೆ.

'ಏನೂ ಬ್ಯಾಡೇಳು' ಎಂದು ಮೂತಿ ಉಬ್ಬಿಸಿ ಪೇಪರು ಓದತೊಡಗಿತು. ತುಸುಹೊತ್ತು ಬಿಟ್ಟು 'ಬುಲ್‌ಬುಲ್ ಹಕ್ಕಿ ಅಂದ್ರ ಅದ್ ಪಕ್ಷಿನೋ ಅಥವಾ ಪುಷ್ಪಕವಿಮಾನನೋ?' ಎಂದು ಕೇಳಿತು.

'ಬುಲ್‌ಬುಲ್ ಅಂದ್ರ ಹಕ್ಕಿ, ಅದ್ಹೆಂಗೆ ವಿಮಾನ ಆಗತೈತಿ'.

'ಮತ್ತ ಅಂಡಮಾನ್ ಜೈಲಿಂದ ಒಬ್ಬರು ಹಕ್ಕಿಮ್ಯಾಗೆ ಕುಂತು ಹಾರಿಬರತಿದ್ರಂತ... ನಾನೂ ಹಂಗೇ ಹಕ್ಕಿ ಮ್ಯಾಗೆ ಕುಂತು ಹಾರತೀನಿ' ಎಂದು ಬೆಕ್ಕಣ್ಣ ಹೇಳುವಷ್ಟರಲ್ಲಿ ದೊಡ್ಡ ಪಾರಿವಾಳವೊಂದು ಬಾಲ್ಕನಿಯೊಳಗೆ ಬಂತು. ಬೆಕ್ಕಣ್ಣ ಚಂಗನೆ ಅದರ ರೆಕ್ಕೆಯ ಮೇಲೆ ಜಿಗಿದು, 'ನೋಡು' ಎಂದು ನಗುವಷ್ಟರಲ್ಲಿ ಪಾರಿವಾಳ ರೆಕ್ಕೆ ಕೊಡವಿ ಹಾರಿ ಹೋಯಿತು. ಕೆಳಗೆ ಬಿದ್ದ ಬೆಕ್ಕಣ್ಣ ಮೀಸೆಗೆ ಹತ್ತಿದ ಮಣ್ಣನ್ನು ಕೊಡವುತ್ತ ಹುಳ್ಳಗೆ ನಕ್ಕಿತು!

ಸಂಗತ

ಅತ್ಯಾಚಾರ ಮತ್ತು ಆಡಳಿತ ವ್ಯವಸ್ಥೆ

ಅತ್ಯಾಚಾರ ಅಪರಾಧವನ್ನು ಕ್ಷುಲ್ಲಕೀಕರಿಸುವಂತಹ ಬೆಳವಣಿಗೆಯು ಅತ್ಯಾಚಾರವನ್ನು ಮಾಮೂಲು ಕ್ರಿಯೆಯಂತೆ ಸಹಜವಾಗಿಸುವ ಸಂಸ್ಕೃತಿಗೆ ದ್ಯೋತಕ

• ಸಿ.ಜಿ.ಮಂಜುಳಾ

ಅತ್ಯಾಚಾರ ಎಂಬುದು ವ್ಯಕ್ತಿಯ ಮೇಲೆ ಮಾತ್ರ ಎಸಗುವ ಅಪರಾಧವಲ್ಲ, ಪ್ರಭುತ್ವದ ವಿರುದ್ಧ ಎಸಗುವಂತಹ ಅಪರಾಧವೂ ಹೌದು. ಹೀಗಾಗಿ, ಸಂತ್ರಸ್ತೆಗೆ ನ್ಯಾಯ ದೊರಕಿಸಿಕೊಡುವುದು ಸರ್ಕಾರದ ಜವಾಬ್ದಾರಿಯೂ ಹೌದು. ಆದರೆ ಬಿಲ್ಕಿಸ್ ಬಾನು ಪ್ರಕರಣದಲ್ಲಿ 11 ಮಂದಿ ಅತ್ಯಾಚಾರಿಗಳನ್ನು ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ್ದು ವ್ಯತಿರಿಕ್ತ ನಡೆ. ಬಿಡುಗಡೆಗೊಂಡವರಿಗೆ ಹೂವಿನ ಹಾರ ಹಾಕಿ, ಕಾಲಿಗೆ ನಮಸ್ಕರಿಸಿ, ಸಿಹಿ ತಿನ್ನಿಸಿ ಸ್ವಾಗತಿಸುವ ಗೌರವಪೂರ್ವಕ ಸಂಭ್ರಮಾಚರಣೆ ಬೇರೆ. ಈ ವಿದ್ಯಮಾನಕ್ಕೆ ಪ್ರತಿಕ್ರಿಯಿಸಿ, 'ನ್ಯಾಯ ಹೀಗೆ ಅಂತ್ಯವಾಗುತ್ತದೆಯೇ?' ಎಂದು ಬಿಲ್ಕಿಸ್ ಬಾನು ಕೇಳಿದಂತಹ ಪ್ರಶ್ನೆಯು ನಾವು ಕಟ್ಟಿಕೊಂಡಿರುವ ನ್ಯಾಯಸೌಧವನ್ನು ನುಚ್ಚುನೂರು ಮಾಡುವಂತಹದ್ದು.

ಅತ್ಯಾಚಾರ ಎಂಬುದು ಒಂದು ನೆಲೆಯಲ್ಲಿ ಹೇಯ ಕೃತ್ಯ. ಮನುಷ್ಯತ್ವ, ಮಾನವೀಯ ಭಾವ ಇರುವವರು ಎಸಗಬಾರದ ದುಷ್ಕೃತ್ಯ. ಆದರೆ ಮತ್ತೊಂದು ನೆಲೆಯಲ್ಲಿ ಅತ್ಯಾಚಾರವನ್ನು ಮಾಮೂಲು ಕ್ರಿಯೆಯಂತೆ ಸಹಜವಾಗಿಸುವ ಅತ್ಯಾಚಾರ ಸಂಸ್ಕೃತಿಯನ್ನು ನಮ್ಮ ಸುತ್ತಲೂ ಕಾಣುತ್ತಲೇ ಇದ್ದೇವೆ.

ನಿರ್ಭಯಾ ಪ್ರಕರಣದಲ್ಲಿ, ತಾನು ಎಸಗಿದ ಅತ್ಯಾಚಾರವನ್ನು ಅತ್ಯಾಚಾರಿ (ಮುಕೇಶ್ ಸಿಂಗ್) ಸಮರ್ಥಿಸಿಕೊಂಡಿದ್ದು ಇಂತಹದೇ ಸಂಸ್ಕೃತಿಯ ಭಾಗ. ಗಂಡಾಳಿಕೆಯ ಮನಃಸ್ಥಿತಿ ಹೆಣ್ಣಿನ ಮೇಲೆ ನಡೆಸುವ ಆಕ್ರಮಣಗಳು ಸಹಜವೆಂದು ಸಾಮಾಜಿಕವಾಗಿ ನಂಬಿಸುವ ಯತ್ನ ಇದು.

ಮಹಿಳೆಯ ಮೇಲಿನ ಅತ್ಯಾಚಾರದ ಪಿಡುಗನ್ನು ನಿಗ್ರಹಿಸಲು ಸದ್ಯಕ್ಕೆ ಯಾವುದೇ 'ಲಸಿಕೆ' ಕಂಡುಹಿಡಿಯಲಾಗದಂತಹ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ವಾತಾವರಣ ಮುಂದುವರಿಯುತ್ತಲೇ ಇದೆ. ರಾಜಕೀಯ ಗುರಿಗಳಿಗಾಗಿ ಮಹಿಳೆಯರ ದೇಹಗಳೇ ರಣಾಂಗಣಗಳಾಗಿ, ಅತ್ಯಾಚಾರವೆಂಬುದು ಅಸ್ತ್ರವಾಗುತ್ತಿರುವುದನ್ನು ನೋಡುತ್ತಲೇ ಇದ್ದೇವೆ. ಹಾಗೆಯೇ ಆ ಅಪರಾಧವನ್ನು ಕ್ಷುಲ್ಲಕವಾಗಿಸುತ್ತಾ ಅದನ್ನು ಸಹಜವೆನಿಸುವಂತೆ ಮಾಡುವ ಕ್ರಿಯೆ ಬಿಲ್ಕಿಸ್ ಬಾನು ಪ್ರಕರಣದ ಅತ್ಯಾಚಾರಿಗಳ ಬಿಡುಗಡೆಯಲ್ಲಿ ಮತ್ತೊಮ್ಮೆ ಅನುರಣಿಸಿದೆ.

ದುಷ್ಟತನವೂ ಸಹಜವಾಗಿಬಿಡುವ ಪರಿಕಲ್ಪನೆಯ (ಬೆನಾಲಿಟಿ ಆಫ್ ಈವಿಲ್) ಬಗ್ಗೆ ಜರ್ಮನ್-ಅಮೆರಿಕನ್ ತತ್ವಜ್ಞಾನಿ ಹನ್ನಾ ಅರೆಂಡ್ಟ್ ಬರೆಯುತ್ತಾರೆ. ನಾಜಿ ಜರ್ಮನಿಯ ಯುದ್ಧಾಪರಾಧಿ ಐಕ್‌ಮನ್ ವಿಚಾರಣೆ ಬಗ್ಗೆ 1961ರಲ್ಲಿ 'ದಿ ನ್ಯೂಯಾರ್ಕರ್' ನಿಯತಕಾಲಿಕೆಗೆ ವರದಿ ಮಾಡಿದ್ದ ಹನ್ನಾ ಈ ಪರಿಕಲ್ಪನೆಯ ಕುರಿತು ವಿಸ್ತರಿಸಿ ಬರೆದಾಗ ಬಹಳಷ್ಟು ಚರ್ಚೆಗಳಾಗುತ್ತವೆ. 'ಐಕ್‌ಮನ್ ಇನ್ ಜೆರುಸಲೇಂ: ಎ ರಿಪೋರ್ಟ್ ಆನ್ ದಿ ಬೆನಾಲಿಟಿ ಆಫ್ ಈವಿಲ್' ಎಂಬ ಶೀರ್ಷಿಕೆಯ ಪುಸ್ತಕವನ್ನೂ 1963ರಲ್ಲಿ ಹನ್ನಾ ಬರೆಯುತ್ತಾರೆ. ಮತ್ತೊಬ್ಬರ ದೃಷ್ಟಿಕೋನದಿಂದ ಆಲೋಚಿಸುತ್ತಾ ಆಲೋಚನಾಶಕ್ತಿ ಕಳೆದುಕೊಳ್ಳುವಂತಹ ಸಾಧಾರಣ ಜನರ ಅಸಾಧಾರಣ ಅಪರಾಧಗಳ ವಿರೋಧಾಭಾಸಗಳನ್ನು ಹನ್ನಾ ವಿಶ್ಲೇಷಿಸುತ್ತಾರೆ.

ಘೋರ ಅಪರಾಧಗಳನ್ನು ಎಸಗುವವರು ಹಿಂಸಾಪ್ರವೃತ್ತಿಯ ಅಮಾನುಷ ರಾಕ್ಷಸರಾಗಿರಬೇಕೆಂದೇನೂ ಇಲ್ಲ. ಯಾವುದೇ ಪ್ರತಿರೋಧ, ನೈತಿಕವಾಗಿ ಹೇಸಿಗೆ ಅಥವಾ ರಾಜಕೀಯ ಆಕ್ರೋಶಗಳ್ಯಾವುವೂ ಇಲ್ಲದೆ ವ್ಯವಸ್ಥಿತವಾಗಿ ಘಟಿಸುವಂತಹ ಮಾನವೀಯತೆಯ ಮೇಲಿನ ಅಪರಾಧಗಳು ಸಾಮಾಜಿಕವಾಗಿ ಅಂಗೀಕೃತವಾಗಿ ದಿನನಿತ್ಯದ ಯಾವುದೋ ಮಾಮೂಲು ಸಂಗತಿಗಳಂತಾಗಿಬಿಡುವ ಬಗೆಯನ್ನು ಹನ್ನಾ ಅವರು ಈ ಪರಿಕಲ್ಪನೆಯ ಮೂಲಕ ವಿವರಿಸಲು ಯತ್ನಿಸಿದ್ದರು.

ಹೆಣ್ಣಿನ ಮೇಲಿನ ಅತ್ಯಾಚಾರವು ದಿನನಿತ್ಯದ ಮಾಮೂಲು ಸಂಗತಿ ಎಂಬಂತೆ ಪರಿಗಣಿತವಾಗುತ್ತಿರುವುದನ್ನು ಗಮನಿಸಿದಲ್ಲಿ ಹನ್ನಾ ಅವರ ಈ ವಾದ ಎಷ್ಟೊಂದು ಪ್ರಸ್ತುತ ಎಂದೆನಿಸುತ್ತದೆ. ಅತ್ಯಾಚಾರದ ಬಗ್ಗೆ ನಿಯಮಿತವಾಗಿ ನಮ್ಮ ರಾಜಕಾರಣಿಗಳು ಮಾತನಾಡುವ ರೀತಿಯಂತೂ ಈ ಅಪರಾಧದ ಅಮಾನುಷತೆಯನ್ನು ಕುಗ್ಗಿಸಿ ತಪ್ಪಿತಸ್ಥ ಭಾವನೆಯನ್ನೂ ಇಲ್ಲವಾಗಿಸುವಂತಹದ್ದು.



'ಬಿಲ್ಕಿಸ್ ಅತ್ಯಾಚಾರಿಗಳು ಉತ್ತಮ ಸಂಸ್ಕಾರ ಹೊಂದಿದ ಬ್ರಾಹ್ಮಣರು' ಎಂದು ಶಾಸಕರೊಬ್ಬರು ಹೇಳುವಂತಹ ಮನಃಸ್ಥಿತಿಗೆ, ಅಸ್ತಿತ್ವದಲ್ಲಿರುವ ಇಂತಹ ಸಂಸ್ಕೃತಿಯು ಕಾರಣ. ಮಾನವೀಯತೆಗೆ, ಮಾನವ ನೋವಿಗೆ ಆಡಳಿತ ವ್ಯವಸ್ಥೆಯು ಕುರುಡುಗಣ್ಣಾಗಿದ್ದಾಗ ಇಂತಹ ಅಪರಾಧಗಳು ಸಹಜವಾಗಿಬಿಡುವ ವಿದ್ಯಮಾನಕ್ಕೆ ಕಾರಣವಾಗುತ್ತದೆ. ವಿವಾಹದೊಳಗಿನ ಅತ್ಯಾಚಾರ ಅಥವಾ ಯಾವುದೋ ಸಂಭ್ರಮಾಚರಣೆಗಳು, ಪಾರ್ಟಿಗಳಲ್ಲಿ ನಡೆಯುವ ಅತ್ಯಾಚಾರಗಳು ಅಪರಾಧ ಎನಿಸದೆ ಅದು ಪುರುಷನಿಗೆ ದತ್ತ ಅಧಿಕಾರ ಎನಿಸಿಬಿಡುತ್ತವೆ.

ಅತ್ಯಾಚಾರ ಎಂಬುದು ಎಷ್ಟು ಮಾಮೂಲು ವಿದ್ಯಮಾನ ಎಂದರೆ, ಭಾರತದಲ್ಲಿ ಈಗಲೂ ಪ್ರತೀ 16 ನಿಮಿಷಕ್ಕೆ ಒಬ್ಬಳು ಮಹಿಳೆ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾಳೆ. ಮನೆ, ಶಾಲೆ, ಕಾಲೇಜು, ಬೀದಿ, ಪಾರ್ಕ್, ಪೊಲೀಸ್ ಠಾಣೆ, ಕಡೆಗೆ ಧಾರ್ಮಿಕ ಕೇಂದ್ರಗಳಾದ ಮಠಗಳೂ ಈ ಅಪರಾಧ ಘಟಿಸುವ ನೆಲೆಗಳಾಗಬಹುದು. ಆದರೆ ಇಂತಹ ಅಪರಾಧಗಳಿಗೆ ಸಂವೇದನಾರಹಿತರಾಗಿ ಪ್ರತಿಕ್ರಿಯಿಸುವುದಂತೂ ನಿಂತಿಲ್ಲ. ಇಂತಹ ಅಪರಾಧಗಳಿಗೆ ಗುರಿಯಾದ ಮನುಷ್ಯರು ಹಾಗೂ ಅವರ ದುರಂತಗಳು ಗಣನೆಗೇ ಬಾರದೆ ಜಾರಿ ಹೋಗುತ್ತವೆ.

ಅತ್ಯಾಚಾರ ಅಪರಾಧಗಳು ಸಾಮಾನ್ಯವಾದ ಸಂಗತಿಗಳು ಎಂಬಂತೆ ಸಹಜ ವಿದ್ಯಮಾನಗಳಾಗಿ ಸಮಾಜದಲ್ಲಿ ಬೆರೆತುಹೋಗುತ್ತಿರುವುದು ನಾಗರಿಕ ಸಮಾಜದ ನ್ಯಾಯ ವ್ಯವಸ್ಥೆಯ ಕುಸಿತಕ್ಕೆ ದ್ಯೋತಕ.

ವಾಚಕರ ವಾಣಿ

ಇರುವ ವಿ.ವಿ.ಗಳು ಪುನಶ್ಚೇತನಗೊಳ್ಳಲಿ

ರಾಜ್ಯದಲ್ಲಿ ಹೊಸದಾಗಿ ಎಂಟು ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿರುವುದು ವರದಿಯಾಗಿದೆ. ನಮ್ಮಲ್ಲಿ ಈಗಾಗಲೇ ಇರುವ ಅನೇಕ ವಿಶ್ವವಿದ್ಯಾಲಯಗಳಿಗೆ ಮೂಲಸೌಕರ್ಯಗಳನ್ನೇ ಒದಗಿಸಲಾಗಿಲ್ಲ. ಉದಾಹರಣೆಗೆ, ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಒಂದು ಶತಮಾನದಷ್ಟು ಹಳೆಯದಾದ ಪಾರಂಪರಿಕ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕೆಲವೇ ಕೆಲವರನ್ನು ಹೊರತುಪಡಿಸಿ ಕಾಯಂ ಸಿಬ್ಬಂದಿ ಹಾಗೂ ಬೋಧಕ ವರ್ಗದವರೇ ಇಲ್ಲ. ಹಂಗಾಮಿಯಾಗಿ ಕೆಲಸ ನಿರ್ವಹಿಸುತ್ತಿದ್ದ 20ಕ್ಕೂ ಹೆಚ್ಚು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾಗಿದ್ದು, ಇವರೆಲ್ಲಾ ಹಲವು ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ.

ರಾಜ್ಯದ ಅನೇಕ ವಿಶ್ವವಿದ್ಯಾಲಯಗಳು ಬೇಡದ ಕಾರಣಗಳಿಗಾಗಿ ಸುದ್ದಿಯಾಗುತ್ತಿವೆ. ಅಲ್ಲಿನ ಅಕ್ರಮಗಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಕುಲಪತಿ, ಕುಲಸಚಿವ ಹಾಗೂ ಅಧಿಕಾರಿಗಳ ನಡುವೆ ಸಾಮರಸ್ಯ ಇಲ್ಲದೆ ಅಧಿಕಾರಕ್ಕಾಗಿ ಕಚ್ಚಾಟ, ಮುಸುಕಿನೊಳಗಿನ ಗುದ್ದಾಟ ನಡೆಯುತ್ತಿದೆ. ರಾಜ್ಯ ಸರ್ಕಾರವು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಬದಲು ಈಗ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳನ್ನು ಬಲಪಡಿಸಲು ಕ್ರಮ ಕೈಗೊಳ್ಳಲಿ.

ಕೆ.ವಿ.ವಾಸು, ಮೈಸೂರು

ವರ್ಗಾವಣೆಯೊಂದೇ ಸಾಲದು

ನಿವೇಶನ ಹಂಚಿಕೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿದ ಆರೋಪದ ಮೇರೆಗೆ, ಬಿಡಿಎ ಆಯುಕ್ತರ ವರ್ಗಾವಣೆಗೆ ಆದೇಶಿಸಿರುವುದು ಸರಿಯಷ್ಟೆ (ಈಗಾಗಲೇ ವರ್ಗಾವಣೆಯೂ ಆಗಿದೆ). ಇಂತಹ ಗುರುತರವಾದ ಲೋಪಕ್ಕೆ ವರ್ಗಾವಣೆಯಷ್ಟೆ ಶಿಕ್ಷೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕಾರಣ, ಈ ಪ್ರಕರಣದಲ್ಲಿ ಯಾರೋ ಒಬ್ಬ ಅಧಿಕಾರಿ ಮಾತ್ರ ತಪ್ಪಿತಸ್ಥರಾಗಲು ಸಾಧ್ಯವಿಲ್ಲ. ಅವರೂ ಸಂಬಂಧಿಸಿದ ಮಂತ್ರಿ ಅಥವಾ ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ಕಾರ್ಯ ನಿರ್ವಹಿಸಬೇಕಾಗುತ್ತದೆ.

ಈಗ್ಗೆ ಹಲವು ವರ್ಷಗಳ ಹಿಂದಿನ ಪ್ರಕರಣವೊಂದು ನೆನಪಾಗುತ್ತದೆ. ಐಎಎಸ್ ಅಧಿಕಾರಿಯೊಬ್ಬರು ಕೋರ್ಟ್ ಆದೇಶ ಉಲ್ಲಂಘಿಸಿದ ಆರೋಪದ ಹಿನ್ನೆಲೆಯಲ್ಲಿ ಒಂದು ತಿಂಗಳ ಸಜೆ ಅನುಭವಿಸಬೇಕೆಂದು ಆದೇಶ ಮಾಡಿದ್ದಕ್ಕೆ (ಆಗ ಅವರು ನವದೆಹಲಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು), ಅವರು ಮರುಮಾತಾಡದೆ, ನವದೆಹಲಿಯಿಂದ ಬೆಂಗಳೂರಿಗೆ ಬಂದು, ಕೋರ್ಟ್ ಮುಂದೆ ಹಾಜರಾಗಿ, ನಂತರ ಸೀದಾ ಜೈಲಿಗೆ ಹೋದರು. ಅವರ ಪತ್ನಿ ತಮ್ಮ ಪತಿ ಮಂತ್ರಿಗಳ ಆದೇಶದಂತೆ ನಡೆದುಕೊಂಡಿದ್ದಾರೆ ಅಷ್ಟೇ, ಅವರ ಶಿಕ್ಷೆಯನ್ನು ರದ್ದುಗೊಳಿಸಿ ಎಂದು ಕೋರ್ಟ್‌ಗೆ ಮನವಿ ಮಾಡಿಕೊಂಡಿದ್ದರೂ, ಆ ಅಧಿಕಾರಿ ಮಾತ್ರ ಪ್ರಕರಣವನ್ನು ವೃಥಾ ಬೆಳೆಸಲಿಲ್ಲ. ಒಂದು ತಿಂಗಳು ಪೂರ್ತಿ ಜೈಲುವಾಸ ಅನುಭವಿಸಿಯೇ ಹೊರಬಂದರು. ಹೀಗೆ, ವರ್ಗಾವಣೆಯೇ ಶಿಕ್ಷೆಯಾಗದೆ, ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಂಡರೆ ಮಾತ್ರ ಇಂತಹ ಪ್ರಕರಣಗಳು ಮರುಕಳಿಸುವುದನ್ನು ತಡೆಯಲು ಸಾಧ್ಯವಾಗಬಹುದೇನೊ!

ಎಂ.ಎಸ್.ರಘುನಾಥ್, ಬೆಂಗಳೂರು

ಸಾವರ್ಕರ್ ನಿಲುವಿಗೆ ವಿರುದ್ಧ ನಡೆ

ಸಾರ್ವಜನಿಕ ಗಣೇಶೋತ್ಸವದಲ್ಲಿ ಎಲ್ಲೆಡೆ ವಿನಾಯಕ ದಾಮೋದರ ಸಾವರ್ಕರ್ ಅವರ ಭಾವಚಿತ್ರ ಪ್ರದರ್ಶಿಸಬೇಕು ಎಂಬ ಸೂಚನೆ ಎಲ್ಲಾ ಮಂಡಳಿಗಳಿಗೆ ಸಂಘ ಪರಿವಾರದ ಕಡೆಯಿಂದ ಹೋಗಿದೆಯೆಂಬ ವರದಿಯಿದೆ. ಸಾವರ್ಕರ್ ಅವರು ಪಕ್ಕಾ ನಾಸ್ತಿಕರಾಗಿದ್ದರು. ಸ್ವತಃ ಅವರೇ ಬರೆದಿರುವ ಕೆಲವು ಕೃತಿಗಳಲ್ಲಿ ಇದು ಉಲ್ಲೇಖಿತವಾಗಿದೆ. ಯಾವುದೇ ಮನುಷ್ಯ ಅಥವಾ ಪ್ರಾಣಿ ರೂಪದ ದೇವರ ಬಗ್ಗೆ ಅವರು ನಂಬಿಕೆ ಹೊಂದಿರಲಿಲ್ಲ. ಸಾವರ್ಕರ್ ಅವರು ಚಿತ್ಪಾವನ ಬ್ರಾಹ್ಮಣರಾಗಿದ್ದರು ಹಾಗೂ ಅವರ ಕುಲದೇವರು ಗಣೇಶ ಆಗಿದ್ದರೂ ಅವರ ಜೀವನಕಾಲದಲ್ಲಿ ಅವರೆಂದೂ ಯಾವುದೇ ಗಣೇಶೋತ್ಸವದಲ್ಲಿ ಪಾಲ್ಗೊಂಡ ಬಗ್ಗೆ ವಿವರಗಳಿಲ್ಲ. ಹಾಗಿರುವಾಗ ನಾಸ್ತಿಕ ಸಾವರ್ಕರ್ ಅವರ ಭಾವಚಿತ್ರಗಳನ್ನು ಈಗ ಗಣೇಶೋತ್ಸವದಲ್ಲಿ ಪ್ರದರ್ಶಿಸುವುದು ಸಾವರ್ಕರ್ ಅವರಿಗೆ ಅವಮಾನ ಎಸಗಿದಂತೆ. ಗೋವಿನ ಹೊಟ್ಟೆಯಲ್ಲಿ 33 ಕೋಟಿ ದೇವರುಗಳು ಇದ್ದಾರೆ ಎಂಬ ನಂಬಿಕೆಯನ್ನೂ ಸಾವರ್ಕರ್ ಪ್ರಶ್ನಿಸಿದ್ದರು.

ಉದಯರಾಜ್ ಆಳ್ವಾ, ಮಂಗಳೂರು

ಮನೆಯಿಂದ ಕಚೇರಿ ಕೆಲಸ ಸಾಕುಮಾಡಿ

ಕೋವಿಡ್ ಉಲ್ಬಣಿಸಿದಾಗ ಬಹುಪಾಲು ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಮನೆಯಿಂದ ಕೆಲಸ ಮಾಡುವ ವ್ಯವಸ್ಥೆ ಮಾಡಿದವು, ಅವಕಾಶ ಕಲ್ಪಿಸಿದವು. ಇದು, ಆ ಹೊತ್ತಿಗೆ ಅಗತ್ಯವಾಗಿತ್ತು. ಮನೆಯಿಂದ ಕೆಲಸವು ಮೇಲ್ನೋಟಕ್ಕೆ ಉದ್ಯೋಗಿಗಳಿಗೆ ಆರಾಮ ಎನ್ನಿಸಿದರೂ ವಾಸ್ತವದಲ್ಲಿ 8 ಗಂಟೆಯ ಕೆಲಸ 12- 15 ಗಂಟೆಗಳಿಗೆ ವಿಸ್ತರಿತವಾಗಿ ಉದ್ಯೋಗಿಗಳು ಬೆಳಿಗ್ಗೆ ಏಳು ಏಳುತ್ತಲೇ ಕೆಲಸ ಆರಂಭಿಸಬೇಕಿತ್ತು. ಭೋಜನದ ಸಮಯದಲ್ಲೂ ಮೊಬೈಲ್‌ನಲ್ಲಿ ಕಂಪನಿಯ ಕೆಲಸದ್ದೇ ಚರ್ಚೆ.

ಈ ಅನುಭವವು ಕೆಲವು ದಿನಗಳ ಮಟ್ಟಿಗೆ ಹಿತಕರ ಅನ್ನಿಸಿರಬಹುದು. ನಾಲ್ಕು ಗೋಡೆಗಳ ಮಧ್ಯೆ ಸಿಲುಕಿದ ಉದ್ಯೋಗಿಗಳಿಗೆ ಆ ಬಳಿಕ ಉಸಿರುಗಟ್ಟಿದಂತೆ ಆಗಿರಬಹುದು. ಇದರಿಂದ ವ್ಯಾಪಾರಿಗಳು, ವಾಹನ ಮಾಲೀಕರು ಬಹಳಷ್ಟು ನಷ್ಟ ಅನುಭವಿಸಿದರು. ಅನೇಕರು ಮನೆ ಖಾಲಿ ಮಾಡಿ ತಮ್ಮ ತಮ್ಮ ಊರುಗಳಿಗೆ ತೆರಳಿದ್ದರಿಂದ ಮನೆ ಮಾಲೀಕರು ನಷ್ಟ ಅನುಭವಿಸಿದರು. ಸಾಫ್ಟ್‌ವೇರ್ ಕಂಪನಿಗಳ ಸಮೂಹದ ವಾತಾವರಣ ಸಂತೆಯ ಮಾರನೇ ದಿನದ ಮಾರ್ಕೆಟ್‌ನಂತೆ ಬಿಕೋ ಎನ್ನಿಸಿತ್ತು. ಆದರೆ ಈಗ ಟಿಸಿಎಸ್ ಕಂಪನಿ ಮನೆಯಿಂದ ಕೆಲಸದ ಪದ್ಧತಿ ರದ್ದು ಮಾಡಿರುವುದು ಸ್ವಾಗತಾರ್ಹ. ಎಲ್ಲ ಕಂಪನಿಗಳು, ಸಂಸ್ಥೆಗಳು ಇದೇ ಕ್ರಮ ಆರಂಭಿಸಲಿ. ಸರ್ಕಾರವೂ ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಿ.

ಸತ್ಯಬೋಧ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಸ್‌ವಿ. ಸುನೀಲ್

ಕರ್ನಾಟಕ ಹಾಕಿ ಮಸುಕಾದ ಹೊಳಪು

ಆಗಸ್ಟ್ 29–ಹಾಕಿ ದಿಗ್ಗಜ ಮೇಜರ್ ಧ್ಯಾನಚಂದ್ ಜನ್ಮದಿನ. ಅವರ ನೆನಪಿನಲ್ಲಿ ಕ್ರೀಡಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಹಾಕಿ ಇಂಡಿಯಾ ಹಾಗೂ ಹಾಕಿ ಕರ್ನಾಟಕದ ಚುನಾವಣೆಗೂ ಸಿದ್ಧತೆಗಳು ನಡೆದಿವೆ. ಈ ಹೊತ್ತಿನಲ್ಲಿ ಕರ್ನಾಟಕದ ಹಾಕಿ ಕ್ರೀಡೆಯ ಅಂದು, ಇಂದು ಮತ್ತೆ ಮುಂದಿನ ಕುರಿತು...



ಬಿ.ಪಿ. ಗೋವಿಂದ

ಮೇಜರ್ ಧ್ಯಾನಚಂದ್

● ಗಿರೀಶ ದೊಡ್ಡಮನಿ

ಭಾರತದ ಹಾಕಿ ಕ್ರೀಡೆ ಎಂದಾಕ್ಷಣ ಪಂಜಾಬ್, ಹರಿಯಾಣದ ಕ್ರೀಡಾಳುಗಳ ಹೆಸರುಗಳೇ ಮುಂಚೂಣಿಯಲ್ಲಿ ಕಾಣುತ್ತವೆ. ಆದರೆ, ಹಾಕಿಗೆ ಕನ್ನಡಿಗರ ಕಾಣಿಕೆಯೇನೂ ಕಮ್ಮಿಯಲ್ಲ. ಭಾರತದ ಹಾಕಿ ಕಂಡ ಸುವರ್ಣಯುಗದಲ್ಲಿ ಕನ್ನಡಿಗರ ಕಾಣಿಕೆಯೂ ಮಹತ್ವದ್ದು.

1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಭಾರತ ತಂಡದಲ್ಲಿದ್ದ ಕರ್ನಾಟಕದ ಆಟಗಾರ ಬಂಡು ಪಾಟೀಲ. ಬೆಳಗಾವಿಯ ಕಂಟೋನ್ಮೆಂಟ್ ಪ್ರದೇಶದಿಂದ ಹೊರಹೊಮ್ಮಿದ ಪ್ರತಿಭಾನ್ವಿತ ಆಟಗಾರ. 1972ರಲ್ಲಿ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಭಾರತ ತಂಡದಲ್ಲಿದ್ದವರು ಎಂ.ಪಿ. ಗಣೇಶ್. ಕೊಡಗಿನ ಹಾಕಿ ಪರಂಪರೆಯ ಮಹತ್ವದ ಕೊಂಡಿ ಇವರು. ಅವರೊಂದಿಗೆ ಆಗ ಎಂ.ಪಿ. ಗೋವಿಂದ ಕೂಡ ಇದ್ದರು. 1980ರಲ್ಲಿ ಮಾಸ್ಕೊ ಒಲಿಂಪಿಕ್ಸ್ ಚಿನ್ನ ಗೆದ್ದ ಭಾರತ ತಂಡದಲ್ಲಿಯೂ ಕನ್ನಡಿಗ ಎಂ.ಎಂ. ಸೋಮಯ್ಯ ಇದ್ದರು.

ನಂತರದ ನಾಲ್ಕು ದಶಕಗಳ ಕಾಲ ಒಲಿಂಪಿಕ್ಸ್‌ನಲ್ಲಿ ಭಾರತವು ಪದಕ ಬರ ಎದುರಿಸಿದೆ. ಆದರೆ, ಪ್ರತಿಬಾರಿಯೂ ತಂಡದ ಆತ್ಮಬಲವನ್ನು ಹೆಚ್ಚಿಸುವಲ್ಲಿ ಕರ್ನಾಟಕದ ಕೊಡುಗೆ ಇದ್ದೇ ಇದೆ. 1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಆಡಿದ್ದ ಭಾರತ ತಂಡದಲ್ಲಿ ಕೊಡಗಿನ ಎ.ಬಿ. ಸುಬ್ಬಯ್ಯ, ಸಿ. ಪೂಣಚ್ಚ, ಬಾಗಲಕೋಟೆಯ ರವಿ ನಾಯ್ಕರ್ ಹಾಗೂ ಉಡುಪಿ ಜಿಲ್ಲೆಯ ಆಶಿಶ್ ಬಲ್ಲಾಳ ಇದ್ದರು. ಭಾರತವು 2008ರ ಬೀಜಿಂಗ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿರಲಿಲ್ಲ. ಆದರೆ, 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಮರಳಿ ಸ್ಥಾನ ಪಡೆಯುವಲ್ಲಿ ಎಸ್.ವಿ.ಸುನೀಲ್, ವಿ.ಅರ್. ರಘುನಾಥ್, ಭರತ್ ಚೆಟ್ರಿ ಅವರ ಯೋಗದಾನವೇ ಪ್ರಮುಖವಾಗಿತ್ತು. ಅಂದು ಆರಂಭವಾದ ಪುನರುತ್ಥಾನದ ಫಲ ಹೋದ ವರ್ಷ ಟೋಕಿಯೊದಲ್ಲಿ ಲಭಿಸಿತು. ಭಾರತ ಪುರುಷರ ತಂಡವು ಕಂಚಿನ ಪದಕ ಜಯಿಸಿ ಒಲಿಂಪಿಕ್ಸ್ ಪದಕ ಬರವನ್ನು ನೀಗಿಸಿತು. ಇತ್ತೀಚೆಗೆ ಕಾಮನ್‌ವೆಲ್ತ್ ಕ್ರೀಡಾಕೂಟದ ಹಾಕಿಯಲ್ಲಿಯೂ ಪದಕ ಸಾಧನೆ ಮಾಡಿತು. ಆದರೆ, ಈ ಸಾಧನೆಯ ಸಾಲಿನಲ್ಲಿ ನಿಂತ ಆಟಗಾರರಲ್ಲಿ ಕನ್ನಡದ ಕಲಿಗಳಿರಲಿಲ್ಲ!

ಕರ್ನಾಟಕದ ಹಾಕಿಗೆ ಏನಾಯಿತು?: ಕಳೆದ ಐದಾರು ವರ್ಷಗಳಲ್ಲಿ ಜಿಲ್ಲಾವಾರು ಹಾಕಿ ಕ್ರೀಡೆಗಳ ಚಟುವಟಿಕೆಗಳಿಗೆ ಪ್ರಾಮುಖ್ಯ ಸಿಗದಿರುವುದು ರಾಜ್ಯದಲ್ಲಿ ಹಾಕಿ ಕುರಿತ ಉತ್ಸಾಹ ಕುಂಠಿತವಾಗಲು ಪ್ರಮುಖ ಕಾರಣವೆನ್ನಲಾಗಿದೆ.

ಹೋದ ವರ್ಷ ಬೆಂಗಳೂರಿಗೆ ಕಾರ್ಯಕ್ರಮವೊಂದಕ್ಕೆ ಬಂದಿದ್ದ ಆಗಿನ ಹಾಕಿ ಇಂಡಿಯಾ ಅಧ್ಯಕ್ಷ ನರೀಂದರ್ ಬಾತ್ರಾ ಕೂಡ ಈ ಕುರಿತು ಮಾತನಾಡಿದ್ದರು. ಕರ್ನಾಟಕದ ಹಾಕಿ ಕಣಜ ಕೊಡಗಿನಿಂದ ಹೊಸ ಆಟಗಾರರೇ ಬರುತ್ತಿಲ್ಲ. ಕರ್ನಾಟಕದ ಕಾಣಿಕೆ ಕಡಿಮೆಯಾಗಿದೆ ಎಂದು ಹೇಳಿದ್ದರು.

ಈಚೆಗೆ, ಒಲಿಂಪಿಯನ್ ಆಶಿಶ್ ಬಲ್ಲಾಳ ಕೂಡ ಇದೇ ರೀತಿಯ ಹೇಳಿಕೆ ನೀಡಿದ್ದಾರೆ.

‘ಗದಗ, ಬಳ್ಳಾರಿ, ಬೆಳಗಾವಿ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಹಾಕಿ ಆಟದ ಬೆಳವಣಿಗೆ ಕುಂಠಿತವಾಗಿದೆ. ಜಿಲ್ಲೆ, ಅಂತರ ಜಿಲ್ಲೆ ಹಾಗೂ ರಾಜ್ಯಮಟ್ಟದ ಟೂರ್ನಿಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು. ಕೇವಲ ಒಂದು ಜಿಲ್ಲೆಗೆ ಕ್ರೀಡೆ ಸೀಮಿತವಾಗಬಾರದು’ ಎಂದು ಬಲ್ಲಾಳ ಹೇಳಿದ್ದರು.



ಎಂ.ಪಿ. ಗಣೇಶ್

ಅವರ ಮಾತುಗಳನ್ನು ಸಂಪೂರ್ಣವಾಗಿ ತಳ್ಳಿ ಹಾಕುವಂತಿಲ್ಲ. ಹುಬ್ಬಳ್ಳಿ, ಬಾಗಲಕೋಟೆ ಹಾಗೂ ಗದುಗಿನ ಸೆಟ್ಲ್‌ಮೆಂಟ್‌ಗಳು ಹಾಕಿ ಕ್ರೀಡೆಗೆ ಹಲವಾರು ಆಟಗಾರರನ್ನು ಕಾಣಿಕೆಯಾಗಿ ನೀಡಿವೆ. ಗದುಗಿನ ಬೇನು ಭಾಟ್, ಎಚ್.ವೈ ಸಿದ್ಲಿಂಗ್, ರಾಚಯ್ಯ, ರಾಜು ಬಾಗಡೆ ಅವರು ದೊಡ್ಡಮಟ್ಟದಲ್ಲಿ ಗಮನ ಸೆಳೆದವರು. ಮಾಣಿಕ್ ಭಾಟ್, ಸಿದ್ದಪ್ಪ ಬಾಲೆ ಹೊಸೂರು, ಎಚ್.ಬಿ. ವೀರಾಪುರ, ಜಾಕ್ಸನ್ ಭಾಟ್, ಕೆ.ಆರ್. ಹಬೀಬ್, ಕಾರ್ಲಟನ್ ಗೋಮ್ಸ್ ರಾಷ್ಟ್ರಮಟ್ಟದಲ್ಲಿ ಆಡಿ ಗಮನ ಸೆಳೆದಿದ್ದರು. ರಾಜು ಬಾಗಡೆ 90ರ ದಶಕದಲ್ಲಿ ಬೆಂಗಳೂರಿನ ಕ್ರೀಡಾ ಹಾಸ್ಟೆಲ್‌ನಲ್ಲಿ ಕೆಲವು ವರ್ಷ ಆಡಿದ್ದರು.

ವಿಪರ್ಯಾಸವೆಂದರೆ, ಇಡೀ ಉತ್ತರ ಕರ್ನಾಟಕದಲ್ಲಿ ಒಂದೂ ಹಾಕಿ ಕ್ರೀಡಾ ಹಾಸ್ಟೆಲ್ ಇಲ್ಲ. ಗದಗಿನಲ್ಲಿ ಮಾತ್ರ ಆಸ್ಟ್ರೋ ಟರ್ಫ್ ಮೈದಾನ ನಿರ್ಮಾಣವಾಗಿದೆ. ಬಳ್ಳಾರಿಯಲ್ಲಿ ಇನ್ನೂ ನಿರ್ಮಾಣ ಹಂತದಲ್ಲಿದೆ. ಹುಬ್ಬಳ್ಳಿ, ಧಾರವಾಡ, ಬಾಗಲಕೋಟೆ, ಬೆಳಗಾವಿಗಳಲ್ಲಿ ಇಲ್ಲ ಎಂಬುದು ಇಲ್ಲಿಯ ಹಾಕಿ ಆಟಗಾರರ ಕೊರಗು. ಇನ್ನು ಕರಾವಳಿ ಭಾಗದಲ್ಲಿಯೂ ಇದೇ ಕಥೆ. ಅಲ್ಲಿಯೂ ಸೂಕ್ತ ಸೌಲಭ್ಯಗಳಿಲ್ಲ. ಜೊತೆಗೆ ಟೂರ್ನಿಗಳ ಕೊರತೆಯೂ ಇದೆ.

ಭರವಸೆಯ ಬೆಳಕು: ಈಗಲೂ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಹಾಕಿ ಪ್ರತಿಭೆಗಳಿವೆ. ಕೆಲವು ವರ್ಷಗಳ ಹಿಂದಷ್ಟೇ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿದ್ದ ಹರೀಶ ಮುತಗಾರ ಗದಗಿನವರು. ಈಗ ಅವರು ರಾಜ್ಯ ತಂಡ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪ್ರಮುಖ ಆಟಗಾರ. ಭಾರತ ತಂಡದಲ್ಲಿ ಸ್ಥಾನ ಪಡೆಯುವ ಛಲದಲ್ಲಿದ್ದಾರೆ.

ಬಿಸಿಲುನಾಡು ಬಳ್ಳಾರಿಯಲ್ಲಿ ಬೆಸ್ಟ್ ಶಾಲೆಯು ಸದ್ದಿಲ್ಲದೇ ಹಾಕಿ ಕ್ರೀಡೆಗೆ ಕಾಣಿಕೆ ನೀಡುತ್ತಿದೆ. ಹರೀಶ ಪ್ರತಿಭೆಗೆ ಸಾಣೆ ಹಿಡಿದಿದ್ದು ಕೂಡ ಇದೇ ಶಾಲೆ. ಇಲ್ಲಿಯ ಹಾಕಿ ತಂಡವು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯುವ ಆಟವಾಡುತ್ತಿದೆ. ಆದರೆ, ಉನ್ನತ ಮಟ್ಟದ ತರಬೇತಿ ಪಡೆಯಲು ಈ ಭಾಗದಲ್ಲಿ ಅಕಾಡೆಮಿಗಳು, ವಸತಿನಿಲಯಗಳು ಇಲ್ಲ. ಸರ್ಕಾರಗಳಿಗೆ ಮಾಡಿದ ಮನವಿಗಳಿಗೆ ಸ್ಪಂದನೆ ಲಭಿಸಿಲ್ಲ.

ಹರೀಶ ಮುತಗಾರ (ಎಡ)

‘ಹಾಸ್ಟೆಲ್ ಆರಂಭಿಸಿ’

ಉತ್ತರ ಕರ್ನಾಟಕ ಭಾಗದ ಗ್ರಾಮಗಳಲ್ಲಿ ಬಹಳಷ್ಟು ಪ್ರತಿಭೆಗಳಿವೆ. ನಾವು ರೂರಲ್ ಸ್ಪೋರ್ಟ್ಸ್ ಟ್ರೇನಿಂಗ್ ಸೆಂಟರ್ ರಚಿಸಿಕೊಂಡಿದ್ದೇವೆ. ಆ ಮೂಲಕ ಅಣ್ಣಿಗೇರಿ ಸೇರಿದಂತೆ ಕೆಲವು ಗ್ರಾಮಗಳಲ್ಲಿ ಕ್ಯಾಂಪ್ ಮಾಡುತ್ತಿದ್ದೇವೆ. 100–150 ಮಕ್ಕಳು ಆಡಲು ಬರುತ್ತಿದ್ದಾರೆ. ಅವರಿಗೆ ಉಚಿತ ತರಬೇತಿ, ಸಲಕರಣೆಗಳನ್ನು ಒದಗಿಸುತ್ತಿದ್ದೇವೆ. ರಾಜ್ಯ ಹಾಕಿ ಸಂಸ್ಥೆಯ ಆಡಳಿತದಲ್ಲಿ ಎಲ್ಲ ಭಾಗದವರಿಗೂ ಪ್ರಾತಿನಿಧ್ಯ ಸಿಗಬೇಕು. ಹಾಕಿ ಅಕಾಡೆಮಿ ಹಾಗೂ ವಸತಿನಿಲಯಗಳನ್ನು ಈ ಭಾಗದಲ್ಲಿಯೂ ಸ್ಥಾಪಿಸಬೇಕು. ಸೌಲಭ್ಯಗಳನ್ನು ನೀಡಿದರೆ ಮತ್ತೆ ರಾಜ್ಯದ ಹಾಕಿ ಬಲಿಷ್ಠವಾಗಲಿದೆ. ಅದಕ್ಕಾಗಿ ಹಾಕಿ ಕರ್ನಾಟಕದ ಆಡಳಿತದಲ್ಲಿ ಪಾರದರ್ಶಕತೆ ತರಬೇಕು ಹಾಗೂ ಎಲ್ಲ ಜಿಲ್ಲೆಗಳಿಗೂ ಸಮಾನ ಪ್ರಾತಿನಿಧ್ಯ ಸಿಗುವಂತಾಗಬೇಕು.

ಪುಲಿಕೇಶಿ ಶೆಟ್ಟೆಪ್ಪನವರ
ಹಾಕಿ ಕೋಚ್

ಬೆಳವಣಿಗೆ ನಿರಂತರ

● ಎ.ಬಿ.ಸುಬ್ಬಯ್ಯ, ಹಾಕಿ ಕರ್ನಾಟಕ ಮಹಾ ಪ್ರಧಾನ ಕಾರ್ಯದರ್ಶಿ



ರಾಜ್ಯದಲ್ಲಿ ಹಾಕಿ ಕ್ರೀಡೆಯ ಬೆಳವಣಿಗೆ ನಿರಂತರವಾಗಿ ನಡೆಯುತ್ತಿದೆ. ಕೋವಿಡ್‌ನಿಂದಾಗಿ ಎರಡು ವರ್ಷ ಟೂರ್ನಿಗಳು ನಡೆದಿರಲಿಲ್ಲ. ಎಲ್ಲ ಟೂರ್ನಿಗಳನ್ನು ಈಗ ಆಯೋಜಿಸಲಾಗುತ್ತಿದೆ. ಹಾಕಿ ಚಟುವಟಿಕೆ ಹಳೆಯ ಟ್ರ್ಯಾಕ್‌ಗೆ ಮರಳಿದೆ.

ಅಂತರ ಜಿಲ್ಲಾ, ಜೂನಿಯರ್ ಟೂರ್ನಿ ಮತ್ತು ಹಾಕಿ ಕರ್ನಾಟಕ ಲೀಗ್ ನಡೆಸುತ್ತಿದ್ದೇವೆ. ಶಾಲಾ ಮಟ್ಟದ ಟೂರ್ನಿಗಳ ಆಯೋಜನೆಗೂ ಒತ್ತು ನೀಡಲಾಗುತ್ತದೆ.

ರಾಷ್ಟ್ರೀಯ ತಂಡದಲ್ಲಿ ಈಗ ಕರ್ನಾಟಕದ ಆಟಗಾರರಿಗೆ ಹೆಚ್ಚಿನ ಅವಕಾಶ ಸಿಗುತ್ತಿಲ್ಲ ನಿಜ. ರಾಜ್ಯದಲ್ಲಿ ಹಾಕಿ ಬೆಳವಣಿಗೆ ನಿಂತಿದೆ ಎಂಬುದು ಅದರ ಅರ್ಥವಲ್ಲ. ಇಲ್ಲಿನ 6–7 ಆಟಗಾರರು ರಾಷ್ಟ್ರೀಯ ತಂಡದ ತರಬೇತಿ ಶಿಬಿರದಲ್ಲಿ ಇದ್ದಾರೆ. ಅವರ ಪ್ರದರ್ಶನವನ್ನು ನಾವು ಗಮನಿಸುತ್ತಿದ್ದೇವೆ. ರಾಷ್ಟ್ರೀಯ ಜೂನಿಯರ್ ತಂಡದ ಶಿಬಿರದಲ್ಲಿ ರಾಜ್ಯದ ನಾಲ್ವರು ಇದ್ದಾರೆ. ಅವರು ನಮ್ಮ ಭವಿಷ್ಯದ ಆಟಗಾರರು ಆಗಿರುವುದರಿಂದ ಹಾಕಿ ಕರ್ನಾಟಕ ಎಲ್ಲ ನೆರವು ನೀಡುತ್ತಿದೆ.

ಈಗಿನ ರಾಷ್ಟ್ರೀಯ ತಂಡದಲ್ಲಿ ನಿರಂತರ 6–7 ವರ್ಷಗಳಿಂದ ಆಡುತ್ತಿರುವವರೇ ಇದ್ದಾರೆ. ನಿಕಿನ್ ತಿಮ್ಮಯ್ಯ ಸೇರಿದಂತೆ ಕರ್ನಾಟಕದ 2–3 ಆಟಗಾರರು ಕೋರ್ ಗ್ರೂಪ್‌ನಲ್ಲಿ ಇದ್ದರೂ ತಂಡದಲ್ಲಿ ಸ್ಥಾನ ಕಳೆದುಕೊಂಡಿದ್ದಾರೆ. ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ಆಟಗಾರರು ಹೆಚ್ಚಿನ ಶ್ರಮ ಹಾಕಬೇಕು. ನಾವು ಅವರಿಗೆ ಬೆಂಬಲ ಕೊಡುತ್ತೇವೆ. ಅವರಾಗಿಯೇ ಉತ್ತಮವಾಗಿ ಆಡಿ ತಂಡದಲ್ಲಿ ಸ್ಥಾನ ಪಡೆಯಬೇಕಿದೆ.

ಮುಂದಿನ ತಿಂಗಳ ಕೊನೆಯಲ್ಲಿ ನಡೆಯುವ ರಾಷ್ಟ್ರೀಯ ಕ್ರೀಡಾಕೂಟದ ಹಾಕಿ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವುದು ನಮ್ಮ ಗುರಿ. ಅದಕ್ಕಾಗಿ ರಾಜ್ಯ ತಂಡಕ್ಕೆ ಒಂದೂವರೆ ತಿಂಗಳ ತರಬೇತಿ ಆಯೋಜಿಸಲಾಗಿದೆ.

ಹೊಸ ಪ್ರತಿಭೆಗಳ ಶೋಧಕ್ಕೂ ವಿಶೇಷ ಗಮನಹರಿಸಲಾಗಿದೆ. ಅಂತರ ಜಿಲ್ಲಾ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವ ಆಟಗಾರರನ್ನು ಗುರುತಿಸಿ ಅವರಿಗೆ ವಿಶೇಷ ತರಬೇತಿ ನೀಡುವ ವ್ಯವಸ್ಥೆಯಿದೆ. ಭಾರತ ತಂಡಕ್ಕೆ ಆಡಿದ್ದ ವಿನಯ್, ರಘುನಾಥ್ ಅವರಿಂದ ತರಬೇತಿ ನೀಡಲಾಗುತ್ತಿದೆ. ಇದರಿಂದ ಯುವ ಪ್ರತಿಭೆಗಳ ಆಟದಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿದೆ.

ಉತ್ತರ ಕರ್ನಾಟಕ ಭಾಗದಿಂದ ಹೆಚ್ಚೆಚ್ಚು ಮಕ್ಕಳು ಹಾಕಿ ಕ್ರೀಡೆಯತ್ತ ಒಲವು ತೋರಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ರಾಜ್ಯ ಜೂನಿಯರ್, ಸೀನಿಯರ್ ತಂಡಗಳಲ್ಲಿ 10–12 ಆಟಗಾರರು ಉತ್ತರ ಕರ್ನಾಟಕದವರೇ ಇದ್ದಾರೆ. ಅಲ್ಲಿನ ಮಕ್ಕಳಿಗೆ ಹೆಚ್ಚಿನ ಅವಕಾಶಗಳು ಸಿಗುತ್ತಿವೆ. ಆ ಭಾಗದಲ್ಲಿ ಒಂದು ಟರ್ಫ್ ಮೈದಾನ ಆಗಬೇಕು. ಅದಕ್ಕಾಗಿ ಕ್ರೀಡಾ ಇಲಾಖೆಗೆ ಶಿಫಾರಸು ಮಾಡಿದ್ದೇವೆ.

ಕಳೆದ 10 ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ನಾವು ಐದರಲ್ಲಿ ಪದಕ ಗೆದ್ದಿದ್ದೇವೆ. ಖೇಲೊ ಇಂಡಿಯಾ ಕ್ರೀಡಾಕೂಟದಲ್ಲೂ ಯಶಸ್ಸು ಲಭಿಸಿದೆ. ಇವೆಲ್ಲವೂ ರಾಜ್ಯದ ಹಾಕಿ ಕ್ರೀಡೆಯ ಮಟ್ಟಿಗೆ ಸಕಾರಾತ್ಮಕ ಬೆಳವಣಿಗೆಗಳು.

ನಿರೂಪಣೆ: ಮಹಮ್ಮದ್ ನೂಮಾನ್

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 211

ತಾರಕ ಹುಟ್ಟಿದಾಗ ಅನಿಷ್ಟ ಗೋಚರ

ವಜ್ರಾಂಗನ ಮಡದಿಯಾದ ವರಾಂಗಿಯು ತಾರಕಾಸುರನ ಗರ್ಭವನ್ನು ಧರಿಸಿದಾಗ, ಅವಳ ಮುಖ ಮಹಾತೇಜಸ್ಸಿನಂತೆ ಬೆಳಗಿತು. ಗರ್ಭವು ವಜ್ರಾಂಗಿಯ ಉದರದಲ್ಲಿ ದಿನದಿಂದ ದಿನಕ್ಕೆ ಬೃಹತ್ತಾಗಿ ಬೆಳೆಯುತ್ತಾ ಹೋಯಿತು. ಒಂಬತ್ತು ತಿಂಗಳ ದಿನ ತುಂಬಿದಾಗ ವರಾಂಗಿಯು ಪುತ್ರನೋರ್ವನನ್ನು ಹಡೆದಳು. ಆ ಮಗು ಹುಟ್ಟಿದಾಗಲೇ ದೊಡ್ಡ ದೇಹವುಳ್ಳದ್ದಾಗಿತ್ತು. ಮಹಾ ತೇಜಸ್ವಿಯಂತೆ ಬೆಳಗುತ್ತಿತ್ತು. ಆದರೆ ವರಾಂಗಿಗೆ ಹೆರಿಗೆಯಾದಾಗ ಸ್ವರ್ಗ, ಭೂಮಿ, ಅಂತರಿಕ್ಷ ಎಂಬ ಮೂರು ಲೋಕಗಳಲ್ಲೂ ಅನಿಷ್ಟವನ್ನು ಸೂಚಿಸುವಂತಹ ಉತ್ಪಾತಗಳಾದವು. ಆಗಸದಲ್ಲಿ ಸಿಡಿಲಬ್ಬರದ ಮಹಾಶಬ್ದವಾಯಿತು. ನಂತರ ಬೆಂಕಿಕೆಂಡಗಳ ಸುರಿಮಳೆಯಾಯಿತು. ಬೆಂಕಿಯ ಮಳೆ ಜೊತೆಗೆ ಭೂ ಒಡಲು ಬಿರಿದು, ಭೂಕಂಪವಾಯಿತು. ಪರ್ವತಗಳು ನಡುಗಿದರೆ, ಎಲ್ಲಾ ದಿಕ್ಕುಗಳು ಉರಿಯತೊಡಗಿದವು. ನದಿಗಳು, ಸಮುದ್ರಗಳು ತುಂಬಾ ಕ್ಷೋಭೆಗೊಳಗಾದವು.

ಬಿರುಗಾಳಿಯು ಜೋರಾಗಿ ಬೀಸಿ, ಭಯಂಕರ ದೂಳು ಎದ್ದಿತು. ಪ್ರಚಂಡ ಬಿರುಗಾಳಿ ಹೊಡೆತಕ್ಕೆ ಸಿಲುಕಿದ ದೊಡ್ಡ ದೊಡ್ಡ ಮರಗಳು, ಬೇರುಸಮೇತ ಕಿತ್ತು ಬುಡಮೇಲಾದವು. ಸೂರ್ಯಚಂದ್ರರಿಗೆ ಗ್ರಹಣಹಿಡಿದುದಲ್ಲದೇ ಸುತ್ತಲೂ ಪರಿಧಿಗಳು ಕಾಣಿಸಿದವು. ಭೂತ-ಪಿಶಾಚಗಳಿಂದ ಭಯಂಕರವಾದ ಫೂತ್ಕಾರಗಳು ಕೇಳಿಬಂದವು. ಪರ್ವತಕಂದರಗಳಲ್ಲಿ ಭಯವನ್ನು ಸೂಚಿಸುವಂತಹ ಶಬ್ದಗಳಾದವು. ನರಿಗಳು ಗೂಬೆಗಳು ಮತ್ತಿತರ ಭಯ, ಆತಂಕಗಳನ್ನು ಸೃಷ್ಟಿಸುವ ಪ್ರಾಣಿ-ಪಕ್ಷಿಗಳು ಭಯಂಕರವಾಗಿ ಕೂಗಿದ್ದಲ್ಲದೆ, ಬಾಯಿಂದ ಬೆಂಕಿಯನ್ನು ಉಗುಳಿದವು.

ಗ್ರಾಮಗಳ ಮಧ್ಯೆ ತೋಳಗಳು ಅಮಂಗಳವಾಗಿ ಊಳಿಟ್ಟರೆ, ನಾಯಿಗಳು ಬೊಗಳಿದುವು. ಭಯಂಕರ ಪಿಶಾಚಿಯನ್ನ ಕಂಡಂತೆ ನಾಯಿಗಳು ಅಲ್ಲಲ್ಲಿ ತಲೆಯನ್ನು ಎತ್ತಿಕೊಂಡು ಅಳುತ್ತಾ ಅರಚಾಡಿದವು. ಕತ್ತೆಗಳು ಗುಂಪುಗುಂಪಾಗಿ ಕೂಡಿಕೊಂಡು, ಅಪಸ್ವರದಿಂದ ಕೂಗುತ್ತಾ, ನೆಲವನ್ನು ಗೊರಸುಗಳಿಂದ ಕೆರೆಯುತ್ತಾ, ಕುಟ್ಟುತ್ತಾ ಸುತ್ತಾಡಿದವು. ಕತ್ತೆಗಳ ಭಯಂಕರ ಅರಚಾಟ ಕೇಳಿ ಪಕ್ಷಿಗಳು ಹೆದರಿ ಗೂಡುಗಳಿಂದ ಹಾರಿದವು. ಕೊಟ್ಟಿಗೆಯಲ್ಲಿದ್ದ ಪಶುಗಳಂತೂ ಭಯದಿಂದ ಸೆಗಣಿ ಮೂತ್ರಗಳನ್ನು ಒಂದೇ ಸಮನೆ ವಿಸರ್ಜಿಸಿದವು. ಹಸುಗಳು ಭಯಗೊಂಡು ಕಣ್ಣೀರನ್ನು ಸುರಿಸಿದ್ದಷ್ಟೇ ಅಲ್ಲದೆ, ಕೆಚ್ಚಲಿನಿಂದ ಹಾಲಿನ ಬದಲಾಗಿ ರಕ್ತವನ್ನು ಒಸರಿದವು. ಮೇಘಗಳು ಭಯಂಕರವಾಗಿ ರಕ್ತದ ಮಳೆ ಸುರಿಸಿದವು.

ದೇವಸ್ಥಾನದ ದೇವತಾವಿಗ್ರಹಗಳು ಅಲ್ಲಾಡಿದರೆ, ಶಿಲಾಬಾಲಿಕೆಯರ ಕಣ್ಣಲ್ಲಿ ನೀರು ಸುರಿಯಿತು. ಹಲವೆಡೆ ಮಳೆಗಾಳಿಯಿಲ್ಲದೆಯೇ ಮರಗಳು ಇದ್ದಕ್ಕಿದ್ದಂತೆ ಉರುಳಿ ಬಿದ್ದವು. ಆಕಾಶದಲ್ಲಿ ಗ್ರಹಗಳಿಗೆ ಘರ್ಷಣೆಗಳಾಗಿ ಉಲ್ಕಾಪಾತವಾಯಿತು. ಉತ್ಪಾತಗಳನ್ನು ನೋಡಿದ ಜನರು ಪ್ರಳಯವಾಗುತ್ತಿದೆ ಅಂದುಕೊಂಡರು. ಇಂಥ ಪ್ರಳಯಾಂತಕ ಮಗುವಿಗೆ ತಾತ ಕಶ್ಯಪಬ್ರಹ್ಮ ತಾರಕನೆಂದು ಹೆಸರಿಟ್ಟ.

ತಾರಕ ವಜ್ರದಂತೆ ಬಲಿಷ್ಠವಾದ ಶರೀರವನ್ನು ಹೊಂದಿದ್ದ. ತಪಸ್ಸನ್ನಾಚರಿಸಿ ಮತ್ತಷ್ಟು ಶಕ್ತಿ ಸಂಪಾದಿಸಲು ತಂದೆ-ತಾಯಿಯ ಅನುಮತಿಯನ್ನು ಬೇಡಿದ. ಹೆತ್ತವರು ಅನುಮತಿ ನೀಡಿದಾಗ, ತಾರಕ ಮಧುವನವೆಂಬ ಅರಣ್ಯಕ್ಕೆ ಬಂದ. ಅಲ್ಲಿ ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನಾಚರಿಸಿದ. ದೃಢವಾದ ನಿಯಮದಿಂದ ಜಿತೇಂದ್ರಿಯನಾಗಿ ಎರಡು ಬಾಹುಗಳನ್ನು ಮೇಲಕ್ಕೆತ್ತಿ ಒಂದೇ ಕಾಲಿನಲ್ಲಿ ನಿಂತು, ಸೂರ್ಯನನ್ನು ನೆಟ್ಟದೃಷ್ಟಿಯಿಂದ ನೋಡುತ್ತಾ ನೂರು ವರ್ಷಗಳವರೆಗೆ ತಪವನ್ನಾಚರಿಸಿದ.

ಒಂಟಿಕಾಲಿನ ತಪಸ್ಸಿನ ನಂತರ ಕಾಲಿನ ಉಂಗುಷ್ಠದ ಮೇಲೆ ನಿಂತು ನೂರು ವರ್ಷಗಳವರೆಗೆ ತಪವನ್ನಾಚರಿಸಿದ. ನೂರು ವರ್ಷಗಳ ಕಾಲ ನೀರನ್ನು ಮಾತ್ರ ಸೇವಿಸುತ್ತಾ, ನೂರು ವರ್ಷ ವಾಯುವನ್ನು ಮಾತ್ರ ಸೇವಿಸುತ್ತ ತಪವನ್ನಾಚರಿಸಿದ. ನೂರು ವರ್ಷ ನೀರಿನಲ್ಲಿ ನಿಂತು, ನೂರು ವರ್ಷ ಸ್ಥಂಡಿಲದಲ್ಲಿ ಇದ್ದುಕೊಂಡು ತಪವನ್ನು ಆಚರಿಸಿದ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಹಲವು ಹುಡುಗ, ಹುಡುಗಿಯರು ಇದ್ದ ಹುಕ್ಕಾಬಾರ್‌ನಲ್ಲಿ ಮಧ್ಯ-ಪ್ರದೇಶದ ಪೊಲೀಸರು ಶೋಧ ನಡೆಸಿದ್ದಾರೆ ಎನ್ನಲಾದ ವಿಡಿಯೊ ವೈರಲ್ ಆಗಿದೆ. ‘ಈ ಗುಂಪಿನಲ್ಲಿ 15 ಮುಸ್ಲಿಂ ಹುಡುಗರ ಜೊತೆ 15 ಹಿಂದೂ ಹುಡುಗಿಯರು ಇದ್ದು, ಒಬ್ಬ ಮುಸ್ಲಿಂ ಹುಡುಗಿಯೂ ಇಲ್ಲ. ಹಿಂದೂಗಳು ತಮ್ಮ ಮಕ್ಕಳನ್ನು ಹೊರಗೆ ಕಳುಹಿಸುವಾಗ ಎಚ್ಚರವಿರಲಿ’ ಎಂದು ಕೆಲವು ಸಾಮಾಜಿಕ ಜಾಲತಾಣ ಬಳಕೆದಾರರು ಉಲ್ಲೇಖಿಸಿದ್ದಾರೆ. ಇದು ಧರ್ಮದ ಆಯಾಮದಲ್ಲಿ ಚರ್ಚೆಯಾಗುತ್ತಿದೆ.

ಇದು ಮಧ್ಯಪ್ರದೇಶಕ್ಕೆ ಸಂಬಂಧಿಸಿದ ವಿಡಿಯೊ ಅಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ವೇದಿಕೆ ತಿಳಿಸಿದ್ದು, ಇದಕ್ಕೆ ಧರ್ಮದ ಆಯಾಮವಿಲ್ಲ ಎಂದೂ ಸ್ಪಷ್ಟಪಡಿಸಿದೆ. ಆಗ್ರಾದಲ್ಲಿ ಆಪ್ತ ಭಂಗಿಯಲ್ಲಿದ್ದ ಜನರ ಗುಂಪೊಂದನ್ನು ಪೊಲೀಸರು ತನಿಖೆಗೆ ಒಳಪಡಿಸಿದ್ದರು. ಅದನ್ನು ವಿಡಿಯೊ ಮಾಡಿ ಹಂಚಿಕೊಂಡಿದ್ದ ಮೂವರು ಪೊಲೀಸರನ್ನು ಅಮಾನತು ಮಾಡಲಾಗಿತ್ತು. ಗುಂಪಿನಲ್ಲಿದ್ದವರು ಸಂಗಾತಿಗಳಾಗಿದ್ದು, ಅವರ ಮೇಲೆ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ. ಆದರೆ ಈ ವಿಡಿಯೊವನ್ನು ಧರ್ಮದ ಆಧಾರದಲ್ಲಿ ತಪ್ಪಾಗಿ ಅರ್ಥೈಸಲಾಗುತ್ತಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಏಕಾಂಗಿ ಸಹವಾಸಿ

ಬೇಕು ಜೀವನಯೋಗಕೊಂದು ಬಹುಸೂಕ್ಷ್ಮ ನಯ|
ಬೇಕೊಂದು ಜಾಗರೂಕತೆ, ಬುದ್ಧಿ ಸಮತೆ ||
ತಾಕನೊಂದನು ಯೋಗಿ, ನೂಕನೊಂದನು ಜಗದಿ |
ಏಕಾಕಿ ಸಹವಾಸಿ - ಮಂಕುತಿಮ್ಮ || 703 ||

ಪದ-ಅರ್ಥ: ಜೀವನಯೋಗಕೊಂದು = ಜೀವನಯೋಗಕೆ + ಒಂದು, ತಾಕನೊಂದನು = ತಾಕನು + ಒಂದನು, ನೂಕನೊಂದನು = ನೂಕನು + ಒಂದನು

ವಾಚ್ಯಾರ್ಥ: ಜೀವನವೆನ್ನುವ ಯೋಗಕ್ಕೆ ಒಂದು ಸೂಕ್ಷ್ಮ ಒಂದು ನಯ, ಜಾಗರೂಕತೆ, ಬುದ್ಧಿ, ಸಮತೆ ಇವೆಲ್ಲ ಬೇಕು. ಯೋಗಿಯಾದವನು ಯಾವುದನ್ನೂ ಸ್ವೀಕರಿಸುವುದಿಲ್ಲ ಆದರೆ ಯಾವ ಕರ್ತವ್ಯವನ್ನೂ ತೊರೆಯುವುದಿಲ್ಲ. ಅವನು ತನಗೆ ಮಾತ್ರ ಸಂಗಾತಿ.

ವಿವರಣೆ: ಸಂಸ್ಕೃತದ ‘ಯುಜ್’ ಧಾತುವಿನಿಂದಾದ ‘ಯೋಗ’ದ ಪದಶಃ ಅರ್ಥ ‘ಒಂದುಗೂಡಿಸುವುದು’. ಪತಂಜಲಿ ಮಹರ್ಷಿಗಳು ಯೋಗವನ್ನು ‘ಚಿತ್ತವೃತ್ತಿ ನಿರೋಧ’ ಎಂದರು. ಮನಸ್ಸಿನ ಹಾರಾಟವನ್ನು ಬಿಗಿಹಿಡಿದು ಅದನ್ನು ಆತ್ಮಸಾಕ್ಷಾತ್ಕಾರದೆಡೆಗೆ ತಿರುಗಿಸುವುದೇ ಯೋಗ. ಮಾಡುವ ಸಕಲ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡಬಲ್ಲ ಕುಶಲತೆಯೇ ಯೋಗ ಎನ್ನುತ್ತದೆ ಭಗವದ್ಗೀತೆ. ಹಾಗಾದರೆ ಜೀವನ ಯೋಗ ಎಂದರೇನು? ಅದು ಯಾವುದನ್ನು, ಯಾವುದರೊಂದಿಗೆ ಜೋಡಿಸುತ್ತದೆ? ವ್ಯಕ್ತಿಯನ್ನು ದೈವದೊಡನೆ, ಜೀವಾತ್ಮನನ್ನು ಪರಮಾತ್ಮನೊಂದಿಗೆ ಜೋಡಿಸುವುದು ಜೀವನಯೋಗ. ಒಂದು ಜೀವ ತಾನು ಏಕಾಂಗಿಯಲ್ಲ, ತಾನು ಮಹಾನ್ ಪರತತ್ವದ ಒಂದಂಶ ಎಂದು ತಿಳಿದು ಅದರೊಡನೆ ಅನುಸಂಧಾನ ಮಾಡುವುದು ಜೀವನಕಲೆ, ಜೀವನ ಯೋಗ. ಈ ಜೀವನಯೋಗ ಸಾಧನೆಗೆ ಅನೇಕ ಮುಖಗಳು. ಎಲ್ಲಕ್ಕೂ ಮುಖ್ಯವಾದದ್ದು ಮನಸ್ಸು. ದೇಹ ಹುಟ್ಟಿದಂದೇ ಮನಸ್ಸೂ ಹುಟ್ಟಿತು. ದೇಹಕ್ಕೆ ವಯಸ್ಸಾಗುತ್ತದೆ, ಮನಸ್ಸಿಗೆ ಮುಪ್ಪಾಗುವುದಿಲ್ಲ. ಅದರ ಆಸೆಗಳು ಮುಗಿಯುವುದಿಲ್ಲ. ಮನಸ್ಸಿನಂತೆ ಇಂದ್ರಿಯಗಳು ಕುಣಿಯುತ್ತವೆ. ಮನಸ್ಸಿಲ್ಲದಿದ್ದರೆ ಕಣ್ಣು ಕಾಣದು, ಕಿವಿ ಕೇಳದು, ನಾಲಿಗೆಗೆ ರುಚಿ ತಿಳಿಯದು. ಇಂದ್ರಿಯಗಳು ಜಡವಾಗುತ್ತವೆ. ಮನಸ್ಸನ್ನು ಸದಾಕಾಲ ಸದಾಚಾರದ ಮಾರ್ಗದಲ್ಲಿ ನಡೆಯುವಂತೆ ಮಾಡುವುದು ಒಂದು ಸೂಕ್ಷ್ಮವಾದ , ನಯವಾದ ಕಾರ್ಯ. ಒಂದು ಚೂರು ಜಾಗರೂಕತೆಯನ್ನು ತಪ್ಪಿದರೂ ಬದುಕಿನ ಸ್ಥಿತಿ ಡೋಲಾಯಮಾನವಾಗುತ್ತದೆ. ಸೀತೆಯ ಒಂದು ಕ್ಷಣದ ಆಕರ್ಷಣೆಯ ಆಸೆ, ಬದುಕಿನ ದಿಕ್ಕನ್ನೇ ಬದಲಿಸಿತು. ತಂದೆ ಶಂತನುವಿನ ಅಪೇಕ್ಷೆ ಮಗ ಭೀಷ್ಮನ ಜೀವನವನ್ನು ಬೇರೆಡೆಗೆ ತಿರುಗಿಸಿಬಿಟ್ಟಿತು. ಅದಕ್ಕೇ ಜೀವನಯೋಗದಲ್ಲಿ ಬುದ್ಧಿಯ ಸ್ಥಿರತೆ, ಸಮತ್ವತೆ ಬಹು ಮುಖ್ಯ. ಹಾಗಾದರೆ ಯೋಗಿ ಹೇಗಿರುತ್ತಾನೆ? ಜಗತ್ತನ್ನು ತೊರೆದು ಏಕಾಂಗಿಯಾಗಿರುತ್ತಾನೆಯೇ? ಕಗ್ಗ ಹೇಳುತ್ತದೆ, ಯೋಗಿ ಪ್ರಪಂಚದ ಯಾವುದನ್ನೂ ತೊರೆಯುವುದಿಲ್ಲ, ಎಲ್ಲದರಲ್ಲೂ ಭಾಗಿಯಾಗುತ್ತಾನೆ, ಜನರ ಸುಖದಲ್ಲಿ ಸಂತೋಷಪಡುತ್ತಾನೆ, ಅವರ ಕಷ್ಟಗಳಿಗೆ ದುಃಖಿಸುತ್ತಾನೆ. ಆದರೆ ಯಾವುದೂ ತನಗಾಗಿಯಲ್ಲ. ಯಾವುದನ್ನೂ ತನ್ನ ಬದುಕಿಗೆ ಅಂಟಿಸಿಕೊಳ್ಳುವುದಿಲ್ಲ. ಅವನು ಯಾರ ಸಹವಾಸವನ್ನು ಬೇಡುವುದಿಲ್ಲ. ಅವನಿಗೆ ಅವನೇ ಜೊತೆಗಾರ ಅದಕ್ಕೇ ಅವನನ್ನು ‘ಏಕಾಕಿ ಸಹವಾಸಿ’ ಎಂದು ಕಗ್ಗ ಕರೆಯುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಆಗಸ್ಟ್ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದ್ವಿತೀಯ ಗಂ. 15-21 ನಕ್ಷತ್ರ: ಉತ್ತರಫಲ್ಗುನಿ ಗಂ. 23-04 ಯೋಗ: ಸಾಧ್ಯ ಗಂ. 25-03, ಕರಣ: ಕೌಲವ ಗಂ 15-21, ಸಿಂಹ ಮಾಸದ 12 ನೇ ದಿನ. ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-23 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 01 ಸಫರ್
ದಿನ ವಿಶೇಷ : ಶ್ರೀ ಶಂಕರ ದೇವರ ತಿಥಿ (ಅಸ್ಸಾಂ)
ಅದೃಷ್ಟ ಸಂಖ್ಯೆ : 3, 9

ಮೇಷ: ಸಾಧನೆಯಲ್ಲಿ ಮೇಲುಗೈ ನಿಮ್ಮದಾಗಿರುವುದು. ಮಾನಸಿಕ ಸ್ಥಿತಿ ಏರುಪೇರಾದ ಸಮಯದಲ್ಲಿ ಹಿರಿಯರ ಸಲಹೆ ಸಮಾಧಾನ ತರಲಿದೆ. ಹೆಣ್ಣು ಮಕ್ಕಳಿಗೆ ತಂದೆಯವರಿಂದ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿಯಾಗಲಿದೆ.

ವೃಷಭ: ಸ್ನೇಹಿತರಿಗೆ ಸ್ವಯಂಪ್ರೇರಣೆಯಿಂದ ಯಾವುದೇ ರೀತಿಯ ವ್ಯವಹಾರಿಕ ಸಲಹೆ ಕೊಡುವುದು ಸರಿಯಲ್ಲ. ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ಗುಪ್ತವಾದ ಮಾಹಿತಿಯು ತಿಳಿದು ಅಧ್ಯಯನಕ್ಕೆ ಉಪಯೋಗವಾಗಲಿದೆ.

ಮಿಥುನ: ಮಹತ್ವದ ಮಾತುಕತೆ ನಡೆಸಲು ಒಳ್ಳೆಯ ಸಮಯ. ಸಂಯಮದಿಂದ ವರ್ತಿಸಿ. ಹಂತ ಹಂತವಾಗಿ ಕುಟುಂಬದಲ್ಲಿ ನೆಮ್ಮದಿ ಕಾಣುವಿರಿ. ರಾಮಾಯಣ, ಮಹಾಭಾರತದಂತಹ ಧರ್ಮ ಗ್ರಂಥಗಳ ಓದಿನಲ್ಲಿ ಆಸಕ್ತಿ ಹುಟ್ಟಲಿದೆ.

ಕರ್ಕಾಟಕ: ಕಾರ್ಯ ನಿಮಿತ್ತ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿ ಬಂದರೂ ತಾಳ್ಮೆ, ಸಮಾಧಾನವನ್ನು ಇಬ್ಬರೂ ಪರಸ್ಪರವಾಗಿ ಕಾಪಾಡಿಕೊಳ್ಳಿ. ಕೌಟುಂಬಿಕವಾಗಿ ಇರುವ ಗೌರವವನ್ನು ಕಾಪಾಡಿಕೊಳ್ಳಲು ಗಮನವಿರಲಿ.

ಸಿಂಹ: ಈ ದಿನ ಎಂಥ ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ. ಸಹೋದರರೊಂದಿಗೆ ಕಾಲ ಕಳೆಯುವಿರಿ.

ಕನ್ಯಾ: ಪರಿಶ್ರಮದ ಜೊತೆ ಅಧಿಕ ಸಮಯವನ್ನು ವೃತ್ತಿಯ ಕೆಲಸಕ್ಕೆ ಮೀಸಲಿಡಿ. ಆಲಸ್ಯತನವನ್ನು ದೂರಮಾಡುವುದರಿಂದ ಶುಭವಾಗುತ್ತದೆ. ವ್ಯವಹಾರದಲ್ಲಿ ನುರಿತವರ ಸಲಹೆ ಸೂಚನೆಗಳನ್ನು ಅಳವಡಿಸಿಕೊಳ್ಳುವುದು ಉತ್ತಮ.

ತುಲಾ: ಮುಂದಾಲೋಚನೆ ಇಲ್ಲದೇ ಯಾವುದೇ ಭರವಸೆಯನ್ನೂ ನೀಡಬೇಡಿ, ಏಕೆಂದರೆ ಈ ದಿನ ಆಡಿದ ಮಾತನ್ನು ಉಳಿಸಿಕೊಳ್ಳುವುದು ಕಷ್ಟವಾಗಲಿದೆ. ಸ್ನೇಹಿತರ ಜೊತೆ ಮಾತುಕತೆ ನಡೆಸಿ. ಅಶ್ವಥ ವೃಕ್ಷದ ಪ್ರದಕ್ಷಿಣೆ ಶುಭ ತರಲಿದೆ.

ವೃಶ್ಚಿಕ: ಅವಕಾಶದ ಜೊತೆಯಲ್ಲಿ ಅದೃಷ್ಟವೂ ಕೂಡ ನಿಮ್ಮ ಪಾಲಿಗಿದೆ. ಆಲಂಕಾರಿಕ ವಸ್ತುಗಳ ಮಾರಾಟದ ಉದ್ಯೋಗದವರು ನೆಮ್ಮದಿ ಕಾಣಬಹುದು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅಗತ್ಯಗಳನ್ನು ಪೂರೈಸಿ.

ಧನು: ಸ್ನೇಹಿತರಲ್ಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ. ಮಕ್ಕಳ ವರ್ತನೆಯು ನಿಮ್ಮ ಮನಸ್ಸಿಗೆ ಸಂತೋಷ ತಂದುಕೊಡಲಿದೆ. ದಾನ, ಧರ್ಮದಂತಹ ಮಾರ್ಗದಲ್ಲಿ ನಡೆಯುವುದು ಅಭಿವೃದ್ಧಿಗೆ ಪೂರಕ.

ಮಕರ: ನಿವೇಶನ ಮಾರಾಟದಿಂದ ಹೆಚ್ಚಿನ ಲಾಭ ಪಡೆಯುವಿರಿ . ಅದರ ಹಣದಿಂದ ಹಣಕಾಸಿನ ಬಗೆಗಿನ ಚಿಂತೆಗಳು, ಸಾಲ ದೂರವಾಗಿ ಆರ್ಥಿಕವಾಗಿ ವೃದ್ಧಿ ಕಾಣಲಿದ್ದೀರಿ. ಇಂಧನಮಾರಾಟಗಾರರಿಗೆ ಕಮಿಷನ್ ಲಭ್ಯ.

ಕುಂಭ: ಇಂದಿನ ವಿನಾಕಾರಣ ಅಲೆದಾಟದಿಂದ ಬೇಸರ ಪಡುವ ಅವಶ್ಯಕತೆ ಇಲ್ಲ. ಈ ದಿನದ ನಿಮ್ಮ ಶ್ರಮ ಮುಂದಿನ ದಿನಕ್ಕೆ ಒಂದು ಅಡಿಪಾಯವಾಗಲಿದೆ. ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ .

ಮೀನ: ನಿಮ್ಮನ್ನು ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು ಹೊಸ ಚೈತನ್ಯ ತುಂಬಿಬರಲಿದೆ. ಸಣ್ಣಮಟ್ಟಿನ ಪ್ರಯಾಣ ಸಂಭವಿಸಲಿದೆ. ಮನಸ್ಸಿನಲ್ಲಿ ಏಕಾಗ್ರತೆಯಿಂದ ಶಿವನ ನಾಮ ಸ್ಮರಣೆ ಮಾಡುವುದು ಒಳ್ಳೆಯದು.

ಪದಬಂಧ 5064

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಈತ ಹಾದಿಯನ್ನು ತೋರುವವನು (5)
4.ಮದವನ್ನು ತೋರುತ್ತಿರುವ ನೀಚ (3)
5.ಭೂತ ಇಲ್ಲಿಗೆ ಬಂದಿದೆಯಲ್ಲಾ? (3)
9.ಶ್ರಮ ನಿರ್ವಹಿಸುವುದು (2)
10.ದಪ್ಪವಾದ ಸೂಜಿಯಿದು (3)
11.ಸಿಟ್ಟು ಹೀಗೆ ಬಂದಿದೆ (2)
12.ಕನಸು ಇಲ್ಲಿ ದಿಟವಾಗಿದೆ (3)
14.ಕಾಟ ನೀಡಿದ್ದಕ್ಕೇ ಈ ಹೋರಾಟ (3)
15.ಅಂತರಂಗ ಸ್ಪರ್ಶಿಯಾದುದು (5)

ಮೇಲಿಂದ ಕೆಳಕ್ಕೆ
1.ದಮಡಿ ನೀಡಿದ್ದಕ್ಕೇ ಇಷ್ಟೊಂದು ಗರ್ವ! (2)
2.ಮಾವನನ್ನು ಹೀಗೂ ಕರೆಯುತ್ತಾರೆ (2)
3.ಪಿನಾಕದ ಹತ್ತಿರವಿರುವ ಮಂಗ (2)
4.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
6.ಮನಸ್ಸು ಬದಲಾಗುವಿಕೆ (5)
7.ತುಂಡು ಮಾಡುವುದನ್ನು ಹೀಗೆನ್ನಿ (3)
8.ಈತ ಅಡುಗೆ ಮಾಡುವವನು (3)
13.ಸುಗಮವಾಗಿ ಕಿತ್ತಿರುವ ಹೂವು (2)
14.ಉತ್ತರಭಾಗದವರ ಚಿಕ್ಕಪ್ಪ (2)
16.ಪರಸ್ಪರ ಸಂಧಿಸುವುದು (2)



5063ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಂಬ 3.ಆಯಾಸ
5.ವಸನ 7.ಕುಡಿನೋಟ
9.ವರದಿ 10.ಕಡಲು
11.ನವೀಕೃತ 13.ಮಣಕ
15.ರಸಿಕ 16.ವಪೆ

ಮೇಲಿಂದ ಕೆಳಕ್ಕೆ:
2.ಬಡವ 3.ಆನನ
4.ಸರಕು 6.ಸರದಿ
8.ಟಪಾಲು 9.ವಪನ
10.ಕಲ್ಯಾಣ 12.ತ್ವರ
13.ಮಶಕ 14.ಕಕವ

ಸುಡೊಕು 5450

		4		7	1			3
						6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5449 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಬೆಳ್ಳಿ ಇಟಿಎಫ್: ₹1,400 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಬೆಳ್ಳಿ ವಿನಿಮಯ ವಹಿವಾಟು ನಿಧಿ (ಇಟಿಎಫ್) ಮೂಲಕ ₹ 1,400 ಕೋಟಿ ಬಂಡವಾಳ ಸಂಗ್ರಹ ಆಗಿದೆ.

ಮ್ಯೂಚುವಲ್ ಫಂಡ್ ಕಂಪನಿಗಳು ಬೆಳ್ಳಿ ಇಟಿಎಫ್ ಮೂಲಕ ಹಲವು ಹೊಸ ನಿಧಿ ಕೊಡುಗೆಗಳನ್ನು ಹೂಡಿಕೆದಾರರಿಗೆ ನೀಡುವ ಮೂಲಕ ಇಷ್ಟು ಮೊತ್ತ ಸಂಗ್ರಹಿಸಿವೆ. 2021ರಲ್ಲಿ ಈ ಹೂಡಿಕೆಗೆ ಸೆಬಿ ಚಾಲನೆ ನೀಡಿದೆ.

ಉದ್ಯಮದ ಮಾಹಿತಿಯ ಪ್ರಕಾರ, ಆದಿತ್ಯ ಬಿರ್ಲಾ ಸನ್ ಲೈಫ್ ಎಂಎಫ್, ಐಸಿಐಸಿಐ ಪ್ರುಡೆನ್ಶಿಯಲ್ ಎಂಎಫ್ ಮತ್ತು ನಿಪ್ಪಾನ್ ಇಂಡಿಯಾ ಎಂಎಫ್ ಕಂಪನಿಗಳು ಬೆಳ್ಳಿ ಇಟಿಎಫ್ ಬಿಡುಗಡೆ ಮಾಡಿವೆ.

ಕೋಟಕ್ ಅಸೆಟ್ ಮ್ಯಾನೇಜ್‌ಮೆಂಟ್ ಬೆಳ್ಳಿ ಇಟಿಎಫ್ ಮತ್ತು ಬೆಳ್ಳಿ ಇಟಿಎಫ್ ಫಂಡ್ ಆಫ್ ಫಂಡ್ಸ್ ಬಿಡುಗಡೆ ಮಾಡಲು ಸೆಬಿಗೆ ಕರಡು ದಾಖಲೆಪತ್ರಗಳನ್ನು ಸಲ್ಲಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹217-680

ದ್ವಿತಳಿ (ಬಿ.ವಿ) ₹400-790

ಸಂಶೋಧನೆ, ಅಭಿವೃದ್ಧಿಗೆ ಸುಜುಕಿಯಿಂದ ಹೊಸ ಕಂಪನಿ

ಗಾಂಧಿನಗರ (ರಾಯಿಟರ್ಸ್): ಜಪಾನಿನ ಸುಜುಕಿ ಮೋಟರ್ ಕಾರ್ಪೊರೇಷನ್ ಕಂಪನಿಯು ಜಾಗತಿಕ ಮಟ್ಟದ, ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದ ಹೊಸ ಕಂಪನಿಯೊಂದನ್ನು ಭಾರತದಲ್ಲಿ ಆರಂಭಿಸಲಿದೆ. ದೇಶದಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಲಿದೆ ಎಂದು ಕಂಪನಿಯ ಅಧ್ಯಕ್ಷ ತೊಶಿಹಿರೊ ಸುಜುಕಿ ಹೇಳಿದ್ದಾರೆ.

ಹೊಸ ಕಂಪನಿಯು ಸುಜುಕಿಯ ಪೂರ್ಣ ಮಾಲೀಕತ್ವದಲ್ಲಿ ಆರಂಭವಾಗಲಿದೆ. ಇದು ಸುಜುಕಿಯ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ನೆರವಾಗಲಿದೆ.

'ಸುಜುಕಿ ಸಮೂಹದ ಪಾಲಿಗೆ ಭಾರತವು ಅತ್ಯಂತ ಪ್ರಮುಖ ದೇಶಗಳ ಪೈಕಿ ಒಂದಾಗಿದೆ' ಎಂದು ತೊಶಿಹಿರೊ ಸುಜುಕಿ ಅವರು ಇಲ್ಲಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು. ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ವರ್ಚುವಲ್ ಆಗಿ ಈ ಕಾರ್ಯಕ್ರಮದಲ್ಲಿದ್ದರು.

ಸುಜುಕಿ ಕಂಪನಿಯು ಭಾರತ ಪ್ರವೇಶಿಸಿ 40 ವರ್ಷಗಳು ತುಂಬಿರುವ ನೆನಪಿನಲ್ಲಿ ಮೋದಿ ಅವರು, ಗುಜರಾತಿನಲ್ಲಿ ಸುಜುಕಿ ವಿದ್ಯುತ್ ಚಾಲಿತ ವಾಹನಗಳ ಬ್ಯಾಟರಿ ತಯಾರಿಕಾ ಘಟಕ ಹಾಗೂ ಹರಿಯಾಣದಲ್ಲಿ ಮಾರುತಿ ಸುಜುಕಿ ಕಾರು ತಯಾರಿಕಾ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಕಳೆದ ವರ್ಷದಲ್ಲಿ ಸುಜುಕಿ ಸಮೂಹವು ತಯಾರಿಸಿದ 28 ಲಕ್ಷ ವಾಹನಗಳ ಪೈಕಿ ಶೇಕಡ 60ಕ್ಕಿಂತ ಹೆಚ್ಚು ಭಾರತದಲ್ಲಿಯೇ ತಯಾರಾಗಿವೆ ಎಂದು ತೊಶಿಹಿರೊ ಸುಜುಕಿ ತಿಳಿಸಿದ್ದಾರೆ.

ಅರ್ಧದಷ್ಟು ಮಾರುಕಟ್ಟೆ ಪಾಲು ಗಳಿಸಲು ಮಾರುತಿ ಯತ್ನ

ನವದೆಹಲಿ (ಪಿಟಿಐ): 'ದೇಶಿ ಪ್ರಯಾಣಿಕ ವಾಹನ ವಿಭಾಗದಲ್ಲಿ ಮತ್ತೆ ಶೇಕಡ 50ರಷ್ಟು ಮಾರುಕಟ್ಟೆ ಪಾಲು ಹೊಂದಲು ಎಲ್ಲ ಪ್ರಯತ್ನಗಳನ್ನು ನಡೆಸಲಾಗುವುದು' ಎಂದು ಮಾರುತಿ ಸುಜುಕಿ ಇಂಡಿಯಾದ ಅಧ್ಯಕ್ಷ ಆರ್.ಸಿ. ಭಾರ್ಗವ ಹೇಳಿದ್ದಾರೆ.

ಕಂಪನಿಯ ಮಾರುಕಟ್ಟೆ ಪಾಲು 2018-19ನೇ ಹಣಕಾಸು ವರ್ಷದಲ್ಲಿ ಶೇ 51.21ರಷ್ಟು ಇತ್ತು. ಇದು 2021-22ನೇ ಹಣಕಾಸು ವರ್ಷದಲ್ಲಿ ಶೇ 43.38ಕ್ಕೆ ಇಳಿಕೆ ಕಂಡಿದೆ.

ಪ್ರಬಲ ನಾಯಕತ್ವ ಸ್ಥಾನವನ್ನು ಮರಳಿ ಪಡೆದುಕೊಳ್ಳಲು ಕಂಪನಿಯು ನಗರ ಮತ್ತು ಸಣ್ಣ ಪಟ್ಟಣಗಳು ಹಾಗೂ ಗ್ರಾಮೀಣ ಪ್ರದೇಶಗಳ ಅಗತ್ಯಕ್ಕೆ ತಕ್ಕ ಮಾದರಿಗಳನ್ನು ಪೂರೈಸಲು ಯೋಜನೆ ರೂಪಿಸಿದೆ.

'ಮಾರಾಟದ ಗುರಿ ಸಾಧಿಸಲು ಕಂಪನಿಯು ಸ್ಪೋರ್ಟ್ಸ್ ಯುಟಿಲಿಟಿ ವಾಹನಗಳನ್ನು (ಎಸ್‌ಯುವಿ) ಅಥವಾ ಇತರೆ ಮಾದರಿಗಳನ್ನು ಬಿಡುಗಡೆ ಮಾಡಲಿದೆ' ಎಂದು ಅವರು ತಿಳಿಸಿದ್ದಾರೆ.

2018-19ರಲ್ಲಿ ದೇಶದಲ್ಲಿ 33.77 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿದ್ದವು. ಇದು 2021-22ರಲ್ಲಿ 30.69 ಲಕ್ಷಕ್ಕೆ ಇಳಿಕೆ ಆಗಿದೆ.

₹6.11 ಕೋಟಿಗೆ ಡಯಾನಾ ಕಾರು ಹರಾಜು

ಲಂಡನ್ (ಎಪಿ): ಬ್ರಿಟನ್ ರಾಜಕುಮಾರಿ ಡಯಾನಾ ಅವರು 1980ರ ದಶಕದಲ್ಲಿ ಬಳಸುತ್ತಿದ್ದ ಕಪ್ಪು ವರ್ಣದ ಫೋರ್ಡ್ ಎಸ್ಕಾರ್ಟ್ ಆರ್‌ಎಸ್ ಟರ್‌ಬೊ ಕಾರು, ಡಯಾನಾ ಅವರ 25ನೇ ಪುಣ್ಯತಿಥಿಗೆ ಕೆಲವೇ ದಿನಗಳು ಇರುವಾಗ ಶನಿವಾರ ನಡೆದ ಹರಾಜಿನಲ್ಲಿ ₹6.11 ಕೋಟಿಗೆ (6.50 ಲಕ್ಷ ಪೌಂಡ್) ಮಾರಾಟವಾಗಿದೆ.

ಬ್ರಿಟನ್ನಿನ ವ್ಯಕ್ತಿಯೊಬ್ಬರು ಈ ಕಾರು ಖರೀದಿಸಿದ್ದಾರೆ. ಆದರೆ, ಅವರ ಹೆಸರನ್ನು ಬಹಿರಂಗಪಡಿಸಲಾಗದು ಎಂದು ಕ್ಲಾಸಿಕ್ ಕಾರು ಹರಾಜು ಸಂಸ್ಥೆ ಸಿಲ್ವರ್‌ಸ್ಟೋನ್ ಆಕ್ಷನ್ಸ್ ಹೇಳಿದೆ.

ಡಯಾನಾ ಬಳಸುತ್ತಿದ್ದ ಈ ಕಾರು ಕೇವಲ 25 ಸಾವಿರ ಕಿ.ಮೀ ಅಷ್ಟೇ ಚಲಿಸಿದೆ. 1985ರಿಂದ 1988ರವರೆಗೆ ಮಾತ್ರ ಈ ಕಾರನ್ನು ಅವರು ಬಳಸಿದ್ದರು.

ತೈವಾನ್ ಜಲಸಂಧಿ ದಾಟಿದ ಯುದ್ಧನೌಕೆ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕದ ಎರಡು ಯುದ್ಧನೌಕೆಗಳು ಭಾನುವಾರ ತೈವಾನ್ ಜಲಸಂಧಿಯ ಮೂಲಕ ಪ್ರಯಾಣಿಸಿವೆ ಎಂದು ಅಮೆರಿಕದ ನೌಕಾಪಡೆ ಹೇಳಿದೆ. ತೈವಾನ್ ಸುತ್ತಲೂ ಚೀನಾ ಸಮರಾಭ್ಯಾಸ ಕೈಗೊಂಡ ನಂತರ ಇದೇ ಮೊದಲ ಬಾರಿಗೆ ಅಮೆರಿಕದ ಯುದ್ಧನೌಕೆಗಳು ಜಲಸಂಧಿಯಲ್ಲಿ ಸಂಚರಿಸಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಸವಿನೆನಪು



ಶ್ರೀ ಎಂ. ಬಾಬು
(ಬಾಲಾಜಿ ಮೆಡಿಕಲ್ಸ್, ಸೂಲಿಬೆಲೆ) ಖಾಜಿಹೊಸಹಳ್ಳಿ
ಜನನ: 13.09.1974 • ನಿಧನ: 29.8.2020
ನಿನ್ನ ನೆನಪು ನಮ್ಮ ಹೃದಯಗಳಲ್ಲಿ ಸದಾ ಹಚ್ಚಹಸಿರಾಗುಳಿದಿದೆ, ಅನುದಿನವೂ, ಅನುಕ್ಷಣವೂ ನಿನ್ನ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ. ಸದಾ ನಿನ್ನ ಸ್ಮರಿಸುವ.
ಇಂತಿ: ದುಃಖತಪ್ತ ಕುಟುಂಬವರ್ಗದವರು

'ಸ್ಟಾಕ್ ಬ್ರೋಕರ್' ಆಯ್ಕೆ ಹೇಗೆ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

'ಯಾವ ಸ್ಟಾಕ್ ಬ್ರೋಕರ್ ಆಯ್ಕೆ ಮಾಡಿಕೊಳ್ಳಬೇಕು ಸರ್?'

ಷೇರು ಮಾರುಕಟ್ಟೆಯಲ್ಲಿ ಮೊದಲ ಬಾರಿಗೆ ಹೂಡಿಕೆ ಮಾಡಲು ಮುಂದಾಗುವ ಬಹುತೇಕರು ಕೇಳುವ ಪ್ರಶ್ನೆ ಇದು. ಷೇರುಪೇಟೆಯಲ್ಲಿ ಸಾಮಾನ್ಯವಾಗಿ ಎರಡು ರೀತಿಯ ದಲ್ಲಾಳಿಗಳಿರುತ್ತಾರೆ (ಬ್ರೋಕರ್ಸ್). ಫುಲ್ ಸರ್ವಿಸ್ ಬ್ರೋಕರ್‌ಗಳು ಮತ್ತು ಡಿಸ್ಕೌಂಟ್ ಬ್ರೋಕರ್‌ಗಳು. ಈ ಎರಡೂ ವ್ಯವಸ್ಥೆಗಳು ನಿಮಗೆ ಷೇರು ವಹಿವಾಟಿನಲ್ಲಿ ಸಹಕಾರ ನೀಡುತ್ತವೆ. ಹಾಗಿದ್ದರೆ ನೀವು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು? ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆಸೋಣ.

ಸ್ಟಾಕ್ ಬ್ರೋಕರ್ ಪಾತ್ರವೇನು?: ಷೇರು ಹೂಡಿಕೆಗೆ ಸಂಬಂಧಿಸಿದ ಅಗತ್ಯ ಸೇವೆಗಳನ್ನು ಒದಗಿಸುವವರೇ ಷೇರು ದಲ್ಲಾಳಿಗಳು (Stock Brokers). ಷೇರುಪೇಟೆಯಲ್ಲಿ ಸಾಮಾನ್ಯವಾಗಿ ಎರಡು ಬಗೆಯ ದಲ್ಲಾಳಿಗಳಿರುತ್ತಾರೆ. ಫುಲ್ ಸರ್ವಿಸ್ ಬ್ರೋಕರ್‌ಗಳು ಮತ್ತು ಡಿಸ್ಕೌಂಟ್ ಬ್ರೋಕರ್‌ಗಳು. ಷೇರುಪೇಟೆಯಲ್ಲಿ ವ್ಯವಹರಿಸಬೇಕಾದರೆ ಮೊದಲನೆಯದಾಗಿ ಟ್ರೇಡಿಂಗ್ ಮತ್ತು ಡಿ-ಮ್ಯಾಟ್ ಖಾತೆ ಹೊಂದಿರಬೇಕಾಗುತ್ತದೆ. ಈ ಸೇವೆ ಒದಗಿಸುವವರೂ ಸ್ಟಾಕ್ ಬ್ರೋಕರ್‌ಗಳೇ.

ಷೇರುಗಳ ಖರೀದಿ ಮತ್ತು ಮಾರಾಟಕ್ಕೆ ಟ್ರೇಡಿಂಗ್ ಅಕೌಂಟ್ ನೆರವಾಗುತ್ತದೆ. ಷೇರುಗಳನ್ನು ಖರೀದಿಸಿದ ಮೇಲೆ ಅವುಗಳನ್ನು ಸುರಕ್ಷಿತವಾಗಿ ಇರಿಸಲು ಒಂದು ಜಾಗ ಬೇಕು, ಅದೇ ಡಿ-ಮ್ಯಾಟ್ ಖಾತೆ. ತಂತ್ರಜ್ಞಾನದ ಸಹಾಯದಿಂದ ವಿದ್ಯುನ್ಮಾನ ರೂಪದಲ್ಲಿ ಷೇರುಗಳನ್ನು ಇಡುವ ವ್ಯವಸ್ಥೆಯೇ ಡಿ- ಮ್ಯಾಟ್. ಟ್ರೇಡಿಂಗ್ ಮತ್ತು ಡಿ-ಮ್ಯಾಟ್ ಖಾತೆ ಪಡೆದ ಮೇಲೆ ಷೇರು ವಹಿವಾಟು ನಡೆಸಲು ಟ್ರೇಡಿಂಗ್ ಟರ್ಮಿನಲ್ ಅಗತ್ಯ. ವೆಬ್‌ಸೈಟ್ ಮೂಲಕ ಅಥವಾ ಆ್ಯಪ್‌ಗಳ ಸಹಾಯದಿಂದ ಟರ್ಮಿನಲ್ ವ್ಯವಸ್ಥೆಯನ್ನು ಬ್ರೋಕರ್‌ಗಳು ಒದಗಿಸುತ್ತಾರೆ. ಇದರ ನೆರವಿನಿಂದ ಮಾರುಕಟ್ಟೆಯಲ್ಲಿ ಏನಾಗುತ್ತಿದೆ ಎಂದು ತಿಳಿದು ಷೇರುಗಳ ಖರೀದಿ ಮತ್ತು ಮಾರಾಟ ಮಾಡಬಹುದು.

ಫುಲ್ ಸರ್ವಿಸ್ ಬ್ರೋಕರ್ ಅಂದರೆ ಷೇರು ಮಾರುಕಟ್ಟೆ ವಹಿವಾಟಿಗೆ ಸಂಬಂಧಿಸಿದ ಸಮಗ್ರ ಸೇವೆ ಒದಗಿಸುವ ದಲ್ಲಾಳಿ ಸಂಸ್ಥೆ. ಡಿಮ್ಯಾಟ್, ಟ್ರೇಡಿಂಗ್ ಅಕೌಂಟ್ ಒದಗಿಸುವ ಜತೆಗೆ ಷೇರುಗಳ ಖರೀದಿ ಮತ್ತು ಮಾರಾಟಕ್ಕೆ ಸಲಹೆ ನೀಡಲು ಇಲ್ಲಿ ಹಣಕಾಸು ನಿರ್ವಹಣೆ ಪರಿಣಿತರ ಸಹಕಾರ ಸಿಗುತ್ತದೆ. ಮೊಬೈಲ್ ಕರೆ ಮಾಡಿ ಯಾವ ಷೇರು ಖರೀದಿಸಬೇಕು ಯಾವುದನ್ನು ಮಾರಾಟ ಮಾಡಬೇಕು ಎಂದು ನಿರ್ಣಯ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಷೇರು ಹೂಡಿಕೆಗೆ ಸಂಬಂಧಿಸಿದಂತೆ ಪ್ರತಿದಿನ ಸಲಹೆ ಸೂಚನೆಗಳು, ಮ್ಯೂಚುವಲ್ ಫಂಡ್, ಐಪಿಒ ಹೂಡಿಕೆ, ವಿಮೆ, ಸಾಲ ಮತ್ತಿತರ ಸೇವೆಗಳನ್ನು ಫುಲ್ ಸರ್ವಿಸ್ ಬ್ರೋಕರ್‌ಗಳು ಒದಗಿಸುತ್ತಾರೆ.

ದೇಶದ ನಾನಾ ಭಾಗಗಳಲ್ಲಿ ಇವರ ಕಚೇರಿಗಳಿರುತ್ತವೆ. ಫುಲ್ ಸರ್ವಿಸ್ ಬ್ರೋಕರ್ ಸೇವೆಯಲ್ಲಿ ನಿರ್ವಹಣಾ ವೆಚ್ಚ ಹೆಚ್ಚಿಗೆ ಇರುವ ಕಾರಣ ಹೂಡಿಕೆದಾರರು ಹೆಚ್ಚು ಶುಲ್ಕ ಪಾವತಿಸಬೇಕಾಗುತ್ತದೆ. ಎಸ್‌ಬಿಐ ಸೆಕ್ಯೂರಿಟಿಸ್, ಎಚ್‌ಡಿಎಫ್‌ಸಿ ಸೆಕ್ಯೂರಿಟಿಸ್, ಕೋಟಕ್ ಸೆಕ್ಯೂರಿಟಿಸ್, ಮೋತಿಲಾಲ್ ಓಸ್ವಾಲ್, ಐಸಿಐಸಿಐ ಡೈರೆಕ್ಟ್ ಮುಂತಾದವು ಫುಲ್ ಸರ್ವಿಸ್ ಬ್ರೋಕರ್‌ಗಳಿಗೆ ಕೆಲವು ಉದಾಹರಣೆಗಳು.

ಫುಲ್ ಸರ್ವಿಸ್ ಬ್ರೋಕರ್ ಶುಲ್ಕ: ನೋಂದಣಿ ಶುಲ್ಕ ₹ 300ರಿಂದ ₹ 500ರವರೆಗೆ ಇರುತ್ತದೆ. ಬ್ರೋಕರೇಜ್ ಶುಲ್ಕ ಸಾಮಾನ್ಯವಾಗಿ ಶೇಕಡ 0.3ರಿಂದ ಶೇ 0.5ರವರೆಗೆ ಇರುತ್ತದೆ. ಉದಾಹರಣೆಗೆ, ₹ 5 ಸಾವಿರದ ವಹಿವಾಟು ನಡೆಸುತ್ತಿದ್ದೀರಿ ಹಾಗೂ ಶೇ 0.5ರಷ್ಟು ಶುಲ್ಕ ಪಾವತಿಸಬೇಕು ಎಂದಾದರೆ ನೀವು ₹ 25 ಶುಲ್ಕ ಕೊಡಬೇಕು. ₹ 50 ಸಾವಿರದ ವಹಿವಾಟು ನಡೆಸುತ್ತೀರಿ ಅಂದರೆ ₹ 125 ಶುಲ್ಕ ಪಾವತಿ ಮಾಡಬೇಕು.

ಡಿಸ್ಕೌಂಟ್ ಬ್ರೋಕರ್ಸ್: ಸಾಮಾನ್ಯವಾಗಿ ಡಿಸ್ಕೌಂಟ್ ಬ್ರೋಕರ್‌ಗಳು ಕಡಿಮೆ ದರದ ಷೇರು ವಹಿವಾಟು ಶುಲ್ಕ ಪಡೆಯುತ್ತಾರೆ. ಇವರು ಕೂಡ ಡಿ-ಮ್ಯಾಟ್ ಮತ್ತು ಟ್ರೇಡಿಂಗ್ ಅಕೌಂಟ್ ಸೇವೆ ಒದಗಿಸುತ್ತಾರೆ. ಆದರೆ ಹಲವೆಡೆ ಕಚೇರಿಗಳನ್ನು ಹೊಂದಿರುವುದಿಲ್ಲ. ತಂತ್ರಜ್ಞಾನದ ಸಹಾಯದಿಂದ ಷೇರು ವಹಿವಾಟಿಗೆ ಸರಳವಾದ ವ್ಯವಸ್ಥೆ ಒದಗಿಸಿರುತ್ತಾರೆ. ಸ್ಮಾರ್ಟ್‌ಫೋನ್ ಅಥವಾ ಲ್ಯಾಪ್‌ಟಾಪ್ ಬಳಸಿ ಷೇರುಗಳ ಖರೀದಿ ಮತ್ತು ಮಾರಾಟ ಮಾಡಬಹುದು. ಮ್ಯೂಚುವಲ್ ಫಂಡ್ ಹೂಡಿಕೆ, ಐಪಿಒ ಹೂಡಿಕೆ, ಷೇರು ವಿಶ್ಲೇಷಣೆ ಮುಂತಾದ ಕೆಲ ಸೇವೆಗಳನ್ನು ಇವರೂ ಒದಗಿಸುತ್ತಾರೆ.

ಆದರೆ ಪರಿಣತರ ನೇರ ಸಲಹೆ, ಅಧ್ಯಯನ ಆಧಾರಿತ ವರದಿಗಳು ಮುಂತಾದ ಸೌಲಭ್ಯಗಳು ಇಲ್ಲಿರುವುದಿಲ್ಲ. ಜಿರೋಧಾ, ಅಪ್‌ಸ್ಟಾಕ್, ಫೈ ಪೈಸೆ, ಗ್ರೋ, ಪೇಟಿಎಂ ಮನಿ ಡಿಸ್ಕೌಂಟ್ ಬ್ರೋಕರ್‌ಗಳಿಗೆ ಕೆಲವು ಉದಾಹರಣೆಗಳು.

ಡಿಸ್ಕೌಂಟ್ ಬ್ರೋಕರ್ ಶುಲ್ಕಗಳು: ಫುಲ್ ಸರ್ವಿಸ್ ಬ್ರೋಕರ್‌ಗಳಿಗಿಂತ ಶೇ 60ರಷ್ಟು ಕಡಿಮೆ ಶುಲ್ಕ ಇಲ್ಲಿರುತ್ತದೆ. ಬಹುತೇಕ ಡಿಸ್ಕೌಂಟ್ ಬ್ರೋಕರ್‌ಗಳು ನೋಂದಣಿಗೆ ₹ 300 ಪಡೆಯುತ್ತವೆ. ನಂತರದಲ್ಲಿ ₹ 5 ಸಾವಿರ ಮೊತ್ತದ ವಹಿವಾಟಿರಲಿ ಅಥವಾ ₹ 5 ಲಕ್ಷದ ವಹಿವಾಟಿರಲಿ ಇಂತಹ ಕೆಲವು ಬ್ರೋಕರ್‌ಗಳು ಪ್ರತಿ ವಹಿವಾಟಿಗೆ ಅಂದಾಜು ₹ 20 ಶುಲ್ಕ ಪಡೆಯುತ್ತವೆ. ಕೆಲವು ಡಿಸ್ಕೌಂಟ್ ಬ್ರೋಕರ್‌ಗಳ ಶುಲ್ಕಗಳಲ್ಲಿ, ರೀತಿ ರಿವಾಜುಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿರುತ್ತವೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಅಲ್ಪ ಕುಸಿತ ಕಂಡ ಸೂಚ್ಯಂಕಗಳು

ಐದು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಈ ವಾರ ಕೊಂಚ ಕುಸಿತ ಕಂಡಿವೆ. ಆಗಸ್ಟ್ 26ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿದಿವೆ.

58,833 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇಕಡ 1.32ರಷ್ಟು ತಗ್ಗಿದೆ. 17,558 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.12ರಷ್ಟು ಇಳಿಕೆಯಾಗಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಿಶ್ರ ಪ್ರತಿಕ್ರಿಯೆ, ಬಡ್ಡಿ ದರದ ವಿಚಾರವಾಗಿ ಫೆಡರಲ್ ರಿಸರ್ವ್‌ನ ಮುಂದಿನ ಹಾದಿ ಏನು ಎನ್ನುವ ಕುತೂಹಲ, ಹಲವು ದೇಶಿ ಬೆಳವಣಿಗೆಗಳು ಸಹ ಕುಸಿತಕ್ಕೆ ಕಾರಣ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಐ.ಟಿ. ವಲಯ ಶೇ 4.5ರಷ್ಟು ಕುಸಿದಿದೆ. ಫಾರ್ಮಾ ವಲಯ ಶೇ 1.7ರಷ್ಟು ಮತ್ತು ಹೆಲ್ತ್‌ಕೇರ್ ಸೂಚ್ಯಂಕ ಶೇ 1ರಷ್ಟು ತಗ್ಗಿವೆ. ಆದರೆ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4.4ರಷ್ಟು ಗಳಿಸಿಕೊಂಡಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 450.36 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 503.32 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಕುಸಿದಿದೆ. ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಪಿಬಿ ಫಿನ್‌ಟೆಕ್, ಬರ್ಜರ್ ಪೇಂಟ್ಸ್ ಇಂಡಿಯಾ, ಲುಪಿನ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಮತ್ತು ಇನ್ಫೊಸಿಸ್ ಕುಸಿತ ಕಂಡಿವೆ. ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಎನ್‌ಎಂಡಿಸಿ, ಕೋಲ್ ಇಂಡಿಯಾ ಮತ್ತು ಸ್ಟಾರ್ ಹೆಲ್ತ್ ಆ್ಯಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ ಏರಿಕೆ ದಾಖಲಿಸಿವೆ.

ಮುನ್ನೋಟ: ವರದಿಯೊಂದರ ಪ್ರಕಾರ ಭಾರತದ ಮಾರುಕಟ್ಟೆ ಕಳೆದ 10 ತ್ರೈಮಾಸಿಕ ಅವಧಿಗಳಲ್ಲಿ ಇತರ ಅಭಿವೃದ್ಧಿಶೀಲ ದೇಶಗಳ ಮಾರುಕಟ್ಟೆಗಳಿಗಿಂತ ಮುಂದಿದೆ. ಹೀಗಿದ್ದರೂ ಷೇರು ಮಾರುಕಟ್ಟೆಯಲ್ಲಿ ಸೂಚ್ಯಂಕಗಳು ಸಕಾರಾತ್ಮಕ ಹಾದಿಯಲ್ಲೇ ಮುನ್ನಡೆಯುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಸದ್ಯ ಸೂಚ್ಯಂಕಗಳು ಕುಸಿತ ಕಂಡಾಗ ಹೂಡಿಕೆದಾರರು ಖರೀದಿಸುವ, ಜಿಗಿತ ಕಂಡಾಗ ಮಾರಾಟ ಮಾಡುವ ಪ್ರವೃತ್ತಿ ಕಂಡುಬರುತ್ತಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

2023ರ ಡಿಸೆಂಬರ್‌ನಿಂದ ಭಕ್ತರಿಗೆ ದರ್ಶನದ ಅವಕಾಶ

ರಾಮಮಂದಿರ ಶೇ 40 ಪೂರ್ಣ

ಅಯೋಧ್ಯೆ (ಪಿಟಿಐ): ಅಯೋಧ್ಯೆಯಲ್ಲಿ ಎರಡು ವರ್ಷಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರು ಶಿಲಾನ್ಯಾಸ ನೆರವೇರಿಸಿದ್ದ ರಾಮ ಮಂದಿರದ ನಿರ್ಮಾಣ ಕಾಮಗಾರಿಯು ಶೇಕಡ 40ಕ್ಕಿಂತಲೂ ಹೆಚ್ಚಿನ ಭಾಗ ಪೂರ್ಣಗೊಂಡಿದ್ದು, 2023ರ ಡಿಸೆಂಬರ್‌ನಿಂದ ಭಕ್ತರು ದರ್ಶನ ಪಡೆಯಬಹುದು ಎಂದು ಶ್ರೀ ರಾಮಜನ್ಮಭೂಮಿ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ತಿಳಿಸಿದ್ದಾರೆ.

ಮಂದಿರದ ಸುತ್ತಮುತ್ತಲಿನ ರಸ್ತೆಗಳ ಸುಧಾರಣೆ, ಕಟ್ಟಡಗಳ ತೆರವು ಕಾರ್ಯಾಚರಣೆಗಳು ಕೂಡಾ ತ್ವರಿತಗತಿಯಲ್ಲಿ ಸಾಗುತ್ತಿವೆ ಎಂದು ಟ್ರಸ್ಟ್‌ನ ಪದಾಧಿಕಾರಿಗಳು ಮಾಹಿತಿ ನೀಡಿದ ಭರದಿಂದ ಸಾಗುತ್ತಿವೆ ಎಂದು ಟ್ರಸ್ಟ್ ಅಧಿಕಾರಿಗಳು ತಿಳಿಸಿದ್ದಾರೆ.

'ಮಂದಿರ ನಿರ್ಮಾಣದ ಕಾಮಗಾರಿಯು ಶೇ 40ಕ್ಕೂ ಹೆಚ್ಚು ಪೂರ್ಣಗೊಂಡಿದೆ. ಶೇ 80ಕ್ಕೂ ಹೆಚ್ಚು ಸ್ತಂಭದ ಕೆಲಸ ಮುಗಿದಿದೆ. ಡಿಸೆಂಬರ್ 2023ರಿಂದ ದೇವಸ್ಥಾನದಲ್ಲಿ ದರ್ಶನ ಆರಂಭವಾಗುವ ಸಾಧ್ಯತೆ ಇದೆ' ಎಂದಿದ್ದಾರೆ. ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಅವರು ಅಯೋಧ್ಯೆಯಲ್ಲೇ ಠಿಕಾಣಿ ಹೂಡಿದ್ದು, ಮಂದಿರ ನಿರ್ಮಾಣದ ಕಾಮಗಾರಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ನಿತ್ಯವೂ ಸಭೆ ನಡೆಸುತ್ತಿದ್ದಾರೆ.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದಲ್ಲಿ ತೊಡಗಿರುವ ಕಾರ್ಮಿಕರು —ಪಿಟಿಐ ಚಿತ್ರ

ಕೇರಳ: ಸಿಪಿಎಂ ಕಾರ್ಯದರ್ಶಿಯಾಗಿ ಗೋವಿಂದನ್ ನೇಮಕ

ತಿರುವನಂತಪುರ (ಪಿಟಿಐ): ಕೇರಳ ಸಿಪಿಎಂನ ನೂತನ ರಾಜ್ಯ ಕಾರ್ಯದರ್ಶಿಯಾಗಿ ಎಂ.ವಿ. ಗೋವಿಂದನ್ ಅವರನ್ನು ಭಾನುವಾರ ನೇಮಕ ಮಾಡಲಾಗಿದೆ.

ಹಾಲಿ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಅವರು ಆರೋಗ್ಯ ಕಾರಣಗಳಿಂದಾಗಿ ತಮ್ಮನ್ನು ಸ್ಥಾನದಿಂದ ಕೈಬಿಡಬೇಕೆಂದು ಕೇಳಿಕೊಂಡ ನಂತರ, ಗೋವಿಂದನ್ ಅವರು ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕಪ್ಪತಗುಡ್ಡಕ್ಕೆ ಗಣಿಗಾರಿಕೆ ಭೀತಿ

ಒಂದನೇ ಪುಟದಿಂದ...

2019ರ ಮೇ 16ರಂದು ಕಪ್ಪತಗುಡ್ಡದ 60,332 ಎಕರೆ ಪ್ರದೇಶವನ್ನು 'ವನ್ಯಜೀವಿಧಾಮ'ವೆಂದು ಘೋಷಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಇದೀಗ ಈ ವನ್ಯಜೀವಿಧಾಮದ ವ್ಯಾಪ್ತಿಯಲ್ಲಿ ಶಿರಹಟ್ಟಿ ತಾಲ್ಲೂಕಿನಲ್ಲಿ ಗಣಿಗಾರಿಕೆಗೆ ಅತೀ ಹೆಚ್ಚು 19 ಪ್ರಸ್ತಾವನೆಗಳು ಸಲ್ಲಿಕೆಯಾಗಿವೆ. ಅದರಲ್ಲೂ ಈ ತಾಲ್ಲೂಕಿನ ಚಿಕ್ಕಸವಣೂರು ಗ್ರಾಮದಲ್ಲಿ ಗಣಿಗಾರಿಕೆಗೆ 17 ಪ್ರಸ್ತಾವನೆಗಳಿವೆ. ಉಳಿದಂತೆ, ಲಕ್ಷ್ಮೇಶ್ವರ ತಾಲ್ಲೂಕಿನಲ್ಲಿ ಮೂರು, ಮುಂಡರಗಿ, ಗದಗ ತಾಲ್ಲೂಕುಗಳಿಂದ ತಲಾ ಒಂದೊಂದು ಪ್ರಸ್ತಾವನೆ ಸಲ್ಲಿಕೆ ಆಗಿವೆ.

ಕರಡಿಧಾಮ ವ್ಯಾಪ್ತಿಯಲ್ಲೂ ಗಣಿಗಾರಿಕೆ: ಬಳ್ಳಾರಿ ಜಿಲ್ಲೆಯ ಗುಡೆಕೋಟೆ ಕರಡಿಧಾಮವನ್ನು ವಿಸ್ತರಿಸಿ 2019ರ ಮೇ 16ರಂದು ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಈ ವಿಸ್ತರಣಾ ಕರಡಿಧಾಮದ 10 ಕಿ.ಮೀ ವ್ಯಾಪ್ತಿಯಲ್ಲಿ, ಮೊಳಕಾಲ್ಮೂರು ತಾಲ್ಲೂಕಿನ ಹೇರೂರು ಗ್ರಾಮದಲ್ಲಿ 12.10 ಎಕರೆ ಪ್ರದೇಶದಲ್ಲಿ ಖಾಜಾ ಹುಸೇನ್ ಎಂಬವರು ಹಾಗೂ ನಾಗಸಮುದ್ರ ಗ್ರಾಮದಲ್ಲಿ 5.10 ಎಕರೆಯಲ್ಲಿ ಓ. ಮಲ್ಲಿಕಾರ್ಜುನ ಎಂಬವರು ಮರಳು ಕ್ವಾರಿ ನಡೆಸಲು ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಕರಡಿಧಾಮದ ಪರಿಸರ ಸೂಕ್ಷ್ಮವಲಯವನ್ನು ಕೂಡಾ 1 ಕಿ.ಮೀಗೆ ಮಿತಿಗೊಳಿಸಿ ಸಚಿವ ಸಂಪುಟ ಸಭೆ ಅನುಮೋದನೆ ನೀಡಿರುವುದರಿಂದ ಇಲ್ಲಿಯೂ ಗಣಿಗಾರಿಕೆಗೆ ಅನುಮತಿ ನೀಡಲು ದಾರಿ ಸುಗಮ ಆದಂತಾಗಿದೆ.

ಅ. 17ರಂದು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

ಒಂದನೇ ಪುಟದಿಂದ....

ನಾಮಪತ್ರಗಳ ಪರಿಶೀಲನೆಯು ಅಕ್ಟೋಬರ್ 1ರಂದು ನಡೆಯಲಿದೆ. ನಾಮಪತ್ರ ಹಿಂದಕ್ಕೆ ಪಡೆಯಲು ಅಕ್ಟೋಬರ್ 8 ಕೊನೆಯ ದಿನವಾಗಿದೆ. ಒಬ್ಬರು ಮಾತ್ರ ನಾಮಪತ್ರ ಸಲ್ಲಿಸಿದರೆ ಕಾಂಗ್ರೆಸ್‌ನ ಹೊಸ ಅಧ್ಯಕ್ಷ ಯಾರು ಎಂಬುದು ಅಂದೇ ಪ್ರಕಟವಾಗಲಿದೆ.

'ನಾಮಪತ್ರವನ್ನು ದೆಹಲಿಯಲ್ಲಿ ಮಾತ್ರ ಸಲ್ಲಿಸಲು ಅವಕಾಶ ಇದೆ. ಮತದಾನದ ಹಕ್ಕು ಹೊಂದಿರುವ ಸುಮಾರು 9,000 ಪ್ರತಿನಿಧಿಗಳು ಪಕ್ಷದಲ್ಲಿ ಇದ್ದಾರೆ. ನಾಮಪತ್ರವನ್ನು ಸಲ್ಲಿಸುವಾಗ ಅಭ್ಯರ್ಥಿಯು ಖುದ್ದಾಗಿ ಹಾಜರಾಗಬೇಕಿದೆ' ಎಂದು ಮಿಸ್ತ್ರಿ ತಿಳಿಸಿದ್ದಾರೆ.

ಈ ಚುನಾವಣೆಯು ಆಗಸ್ಟ್ 21ರಿಂದ ಸೆಪ್ಟೆಂಬರ್ 20ರ ನಡುವೆ ನಡೆಯಬೇಕು ಎಂದು ಸಿಡಬ್ಲ್ಯುಸಿ ಕಳೆದ ಅಕ್ಟೋಬರ್‌ನಲ್ಲಿ ನಿರ್ಧರಿಸಿತ್ತು. ಆದರೆ, ಅಧ್ಯಕ್ಷ ಸ್ಥಾನಕ್ಕೆ ಯಾರು ಏರಬೇಕು ಎಂಬ ವಿಷಯದಲ್ಲಿ ಇರುವ ಅನಿಶ್ಚಿತ ಸ್ಥಿತಿಯು ಚುನಾವಣೆಯನ್ನು 28 ದಿನಗಳಷ್ಟು ಮುಂದಕ್ಕೆ ಹಾಕಿದೆ. ರಾಹುಲ್ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸಿದ್ಧರಿಲ್ಲ. ಹಾಗಾಗಿ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಈ ಹುದ್ದೆಗೆ ಸ್ಪರ್ಧಿಸಬೇಕು ಎಂದು ಸೋನಿಯಾ ಅವರು ಕೋರಿದ್ದಾರೆ ಎನ್ನಲಾಗಿದೆ.

ಮತದಾರರ ಪಟ್ಟಿ: ಆನಂದ್ ಶರ್ಮಾ ಪ್ರಶ್ನೆ

ನವದೆಹಲಿ (ಪಿಟಿಐ): ಭಿನ್ನಮತೀಯ ಮುಖಂಡ ಆನಂದ್ ಶರ್ಮಾ ಅವರು ಮತದಾರರ ಪಟ್ಟಿ ತಯಾರಿಕೆ ಕುರಿತಂತೆ ಸಿಡಬ್ಲ್ಯುಸಿ ಸಭೆಯಲ್ಲಿ ಪ್ರಶ್ನೆಗಳನ್ನು ಎತ್ತಿದ್ದಾರೆ ಎಂದು ತಿಳಿದು ಬಂದಿದೆ. ಪಕ್ಷದ ಸಂವಿಧಾನದ ಪ್ರಕಾರವೇ ಪಟ್ಟಿ ಸಿದ್ಧಪಡಿಸಲಾಗಿದೆಯೇ ಎಂದು ಅವರು ಪ್ರಶ್ನಿಸಿದ್ದಾರೆ ಎನ್ನಲಾಗಿದೆ.

ಮತದಾರರ ಪಟ್ಟಿಯನ್ನು ಅಂತಿಮಗೊಳಿಸುವ ಮುನ್ನ ವರ್ಚುವಲ್ ಅಥವಾ ಭೌತಿಕ ಸಭೆಯನ್ನು ನಡೆಸಲಾಗಿಲ್ಲ ಎಂಬ ದೂರುಗಳು ತಮಗೆ ಬಂದಿವೆ. ಯಾವುದೇ ಪ್ರದೇಶ ಕಾಂಗ್ರೆಸ್ ಘಟಕವು ಪ್ರತಿನಿಧಿಗಳ ಪಟ್ಟಿಯನ್ನು ಪರಿಷ್ಕರಿಸಿಲ್ಲ ಮತ್ತು ಹಾಗಾಗಿದ್ದರೆ ಅದು ಚುನಾವಣಾ ಪ್ರಕ್ರಿಯೆಯ ಉಲ್ಲಂಘನೆಯಾಗುತ್ತದೆ ಎಂದು ಶರ್ಮಾ ಹೇಳಿದ್ದಾರೆ.

ಪಕ್ಷಕ್ಕೆ ಗಟ್ಟಿ ನಾಯಕತ್ವ ಬೇಕು ಎಂದು ಸೋನಿಯಾ ಅವರಿಗೆ ಈ ಹಿಂದೆ ಪತ್ರ ಬರೆದಿದ್ದ 'ಜಿ-23' ಮುಖಂಡರ ಗುಂಪಿನಲ್ಲಿ ಶರ್ಮಾ ಅವರು ಇದ್ದರು. ಹಿಮಾಚಲ ಪ್ರದೇಶ ಚುನಾವಣೆ ಚಾಲನಾ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ವಾರದ ಹಿಂದೆ ಅವರು ರಾಜೀನಾಮೆ ನೀಡಿದ್ದಾರೆ. ಪಕ್ಷದ ಹಿರಿಯ ಮುಖಂಡರಾಗಿದ್ದ ಗುಲಾಂ ನಬಿ ಆಜಾದ್ ಅವರು ಶುಕ್ರವಾರವಷ್ಟೇ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಸೋನಿಯಾ ಮತ್ತು ರಾಹುಲ್ ಬಗ್ಗೆ ಅವರು ರಾಜೀನಾಮೆ ಪತ್ರದಲ್ಲಿ ತೋಡಿಕೊಂಡಿರುವ ಅಸಮಾಧಾನ ಭಾರಿ ಸದ್ದು ಮಾಡಿತ್ತು.

ಪಾಕಿಸ್ತಾನ ಪ್ರವಾಹ: ಸಾವಿರಕ್ಕೂ ಹೆಚ್ಚು ಮಂದಿ ಸಾವು

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ತಲೆದೋರಿರುವ ಭೀಕರ ಪ್ರವಾಹದಿಂದಾಗಿ ಕಳೆದ 24 ಗಂಟೆಗಳಲ್ಲಿ 119 ಮಂದಿ ಮೃತಪಟ್ಟಿದ್ದು, ಒಟ್ಟು ಮೃತರ ಸಂಖ್ಯೆ 1 ಸಾವಿರದ ಗಡಿ ದಾಟಿದೆ ಎಂದು ಭಾನುವಾರ ಅಧಿಕೃತ ಮಾಹಿತಿ ತಿಳಿಸಿದೆ.

'ಜೂನ್ 14ರಿಂದ ಈಚೆಗೆ ಸಂಭವಿಸಿದ ಮಳೆ ಸಂಬಂಧಿತ ಅನಾಹುತಗಳಲ್ಲಿ 1,033 ಜನರು ಸಾವಿಗೀಡಾಗಿದ್ದಾರೆ ಹಾಗೂ 1,527 ಜನರು ಗಾಯಗೊಂಡಿದ್ದಾರೆ.

ಈ ಮಳೆಗಾಲದಲ್ಲಿ 3.3 ಕೋಟಿಗೂ ಹೆಚ್ಚು ಜನರ ಮೇಲೆ ಗಂಭೀರ ಪರಿಣಾಮ ಬೀರಿದೆ' ಎಂದು ಅಲ್ಲಿನ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಪ್ರವಾಹದಿಂದಾಗಿ 3,451 ಕಿ.ಮೀ. ನಷ್ಟು ರಸ್ತೆ, 147 ಸೇತುವೆಗಳು, 170 ಅಂಗಡಿಗಳು ನಾಶವಾಗಿವೆ. ಸುಮಾರು 9,49,858 ಮನೆಗಳು ಭಾಗಶಃ ಅಥವಾ ಸಂಪೂರ್ಣವಾಗಿ ಹಾನಿಯಾಗಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಶೇ 40 ಕಮಿಷನ್: ಏನು ಇದರ ಗುಟ್ಟು?
ಸಂವಾದ
ಭಾಗವಹಿಸುವವರು



ಡಿ. ಕೆಂಪಣ್ಣ
ಅಧ್ಯಕ್ಷ, ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ

ಲೋಕೇಶ್ ತಾಳಿಕಟ್ಟೆ
ಅಧ್ಯಕ್ಷ, ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ(ರುಪ್ಸಾ)
ಮಧ್ಯಾಹ್ನ 12 ರಿಂದ 1
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಕನ್ನಡ ಧ್ವನಿ

ಲಿಬಿಯಾದಲ್ಲಿ ಘರ್ಷಣೆ: 30 ಸಾವು

ಕೈರೊ (ಎಪಿ): ರಾಜಕೀಯ ಬಿಕ್ಕಟ್ಟು ಎದುರಿಸುತ್ತಿರುವ ಲಿಬಿಯಾದಲ್ಲಿ ಶನಿವಾರ ಗುಂಪುಘರ್ಷಣೆ ನಡೆದು 30ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಸರ್ಕಾರ ಪರ ಸೈನಿಕರು ಮತ್ತು ವಿರೋಧಿ ಆಡಳಿತ ಪರ ಬಂಡುಕೋರರ ನಡುವೆ ರಾಜಧಾನಿ ಟ್ರಿಪೋಲಿಯಲ್ಲಿ ಶನಿವಾರ ನಸುಕಿನಲ್ಲಿ ಗುಂಡಿನ ಚಕಮಕಿ ಆರಂಭವಾಯಿತು. ಘಟನೆಯಲ್ಲಿ ನೂರಾರು ಜನರು ಗಾಯಗೊಂಡಿದ್ದಾರೆ.

ಶ್ರೀಲಂಕಾ: 6 ಭಾರತೀಯ ಮೀನುಗಾರರ ಸೆರೆ

ಕೊಲಂಬೊ (ಪಿಟಿಐ): ತನ್ನ ದೇಶದ ಸಮುದ್ರ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿದ್ದ ಆರೋಪದ ಮೇಲೆ ಶ್ರೀಲಂಕಾದ ನೌಕಾಪಡೆಯು 6 ಮಂದಿ ಭಾರತೀಯ ಮೀನುಗಾರರನ್ನು ಬಂಧಿಸಿ, ಟ್ರಾಲರ್‌ಗಳನ್ನು ವಶಪಡಿಸಿಕೊಂಡಿದೆ.

